ಸ್ವಾಯತ್ತತೆ ಸ್ವಯಂ ಆಡಳಿತ ಸ್ವಯಂ ನಿಯಂತ್ರಣ ನಮ್ಮ ಧ್ಯೇಯ

ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳುವಳಿಯ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

Volume - 11 Issue - 2 Swabhimani Sahakari Monthly Pages - 20 ₹ - 12 February 2013

ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ಅಧಿನಿಯಮ 2012

ವಿಶೇಷ ಪ್ರಕಟಣೆ - ಪುಟ 5 ರಿಂದ 16

ಕೋ ಚೆನ್ನಬಸಪ್ಪ
ಸಮ್ಮೇಳನಾಧ್ಯಕ್ಷರು



ಗುಮ್ಮಟಗಳ ನಾಡಿನಲ್ಲಿ ಕನ್ನಡ ಸಾಹಿತ್ಯ ಸಂಭ್ರಮ



ನುಡಿದರೆ ಮುತ್ತಿನ ಹಾರದಂತಿರಬೇಕು!
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು!
ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು!
ನುಡಿದರೆ ಲಿಂಗ ಮೆಚ್ಚಿ ಅಹುದೆನಬೇಕು ?
ನುಡಿಯೊಳಗಾಗಿ ನಡೆಯದಿದ್ದರೆ
ಕೂಡಲಸಂಗಮದೇವನೆಂತೊಲಿವನಯ್ಯ?

ರಾಜ್ಯ ಬಜೆಟ್ - 2013

- 1ಲಕ್ಷ 17 ಸಾವಿರ ಕೋಟಿ ರೂ. ಪೂರಕ ಬಜೆಟ್
- ರೂ. 42 ಸಾವಿರ ಕೋಟಿ ಯೋಜನಾ ಗಾತ್ರ
- ಸಹಕಾರ ಚುನಾವಣಾ ಆಯೋಗ ರಚನೆ
- ರೈತರಿಗೆ ಮೊಬೈಲ್ ಮೂಲಕ ಹವಾಮಾನ ಮಾಹಿತಿ
- ಸಹಕಾರ ಸಂಸ್ಥೆಗಳ ಮೂಲಕ 3% ಬಡ್ಡಿ ದರದಲ್ಲಿ ಬೆಳೆ ಸಾಲ ಮುಂತಾದ ಯೋಜನೆಗಳು ಮುಂದುವರಿಕೆ.

ಸೌಹಾರ್ದ ಸಹಕಾರಿಗಳ ಸಂಖ್ಯೆ : 2360 - 'ಇ' ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ - 485

ಅಧ್ಯಕ್ಷರ ಮಾತು

ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಹಾಗೂ ಸಹಕಾರಿ ಸಂಸ್ಥೆಗಳ ಹಂತದಲ್ಲಿ ಈ ನಿರ್ಣಯಗಳ ಅನುಷ್ಠಾನವಾಗಲು ಸಹಕಾರಿ ಕ್ಷೇತ್ರದ ಮುಂಚೂಣಿಯಲ್ಲಿರುವ ಎಲ್ಲಾ ಸಹಕಾರಿ ನಾಯಕರುಗಳು ಈ ಕ್ಷಣದಿಂದಲೇ ಕಾರ್ಯ ಪ್ರವೃತ್ತರಾಗುವುದು ಇಂದಿನ ಅವಶ್ಯಕತೆ.

ಅರ್ಥಪೂರ್ಣ ಅಧಿವೇಶನ

ಬೆಂಗಳೂರಿನ ನ್ಯಾಷನಲ್ ಹೈಸ್ಕೂಲ್ ಮೈದಾನದಲ್ಲಿ ಸಹಕಾರ ಭಾರತಿಯ 4ನೇ ರಾಷ್ಟ್ರೀಯ ಅಧಿವೇಶನ ದಿನಾಂಕ 17,18,19 ಜನವರಿ 2013ರಂದು ಶ್ರೀ ಶಿದ್ದನಗೌಡ ಸಣ್ಣರಾಮನಗೌಡ ಪಾಟೀಲರ ಜ್ಞಾಪಕಾರ್ಥವಾಗಿ ನಿರ್ಮಿಸಿದ ಭವ್ಯ ಸಭಾಂಗಣದಲ್ಲಿ ಅತ್ಯಂತ ಯಶಸ್ವಿಯಾಗಿ ಜರುಗಿರುವುದು ಕರ್ನಾಟಕದ ಸಹಕಾರಿಗಳಿಗೆಲ್ಲ ಸಂದ ಗೌರವವಾಗಿದೆ ಎಂದು ನಾನು ಅಭಿಪ್ರಾಯ ಪಡುತ್ತೇನೆ. ಹೊರರಾಜ್ಯದ ಸಹಸ್ರಾರು ಸಹಕಾರಿಗಳ ಜೊತೆಗೆ ರಾಜ್ಯದ ಸಹಸ್ರಾರು ಸಹಕಾರಿಗಳು ಈ ಐತಿಹಾಸಿಕ ಅಧಿವೇಶನದಲ್ಲಿ ಸಕ್ರೀಯವಾಗಿ ಭಾಗವಹಿಸಿರುವುದು ಅತ್ಯಂತ ಸಂತೋಷದ ವಿಷಯ.

ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಪೂರಕವಾಗುವ ಅನೇಕ ವಿಷಯಗಳ ಬಗ್ಗೆ ಸುದೀರ್ಘ ಚರ್ಚೆಯಾಗಿದೆ. ಅಧಿವೇಶನ ಅಂಗವಾಗಿ ವ್ಯವಸ್ಥೆಮಾಡಲಾಗಿದ್ದ ಪ್ರದರ್ಶಿನಿಯನ್ನು ರಾಜ್ಯದ ಸಹಕಾರಿ ಕ್ಷೇತ್ರದ ಹಿರಿಯ ನಾಯಕರು, ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದ ರಾಷ್ಟ್ರೀಯ ಅಧ್ಯಕ್ಷರು ಆಗಿರುವ ಶ್ರೀ ಹೆಚ್.ಕೆ.ಪಾಟೀಲ್ ಉದ್ಘಾಟಿಸಿದರೆ, ಮಾಜಿ ಸಹಕಾರಿ ಸಚಿವ ಹಾಗೂ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷ ಶ್ರೀ ಜಿ.ಟಿ.ದೇವೇಗೌಡ ಅವರು ಅಧ್ಯಕ್ಷತೆ ವಹಿಸಿ ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಇಂತಹ ಅಧಿವೇಶನಗಳು ಪೂರಕ ಎಂದು ಅಧಿವೇಶನಕ್ಕೆ ಶುಭಹಾರೈಸಿರುವುದು ಸ್ವಾಗತಾರ್ಹ.

ಅಧಿವೇಶನವನ್ನು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ ಶ್ರೀ ಮೋಹನ.ಜಿ. ಭಾಗವತರವರು ಉದ್ಘಾಟಿಸಿ ಸಹಕಾರ ಕ್ಷೇತ್ರದ ವ್ಯಾಪ್ತಿ ವಿಶ್ವವ್ಯಾಪಿಯಾಗಬೇಕು ಎಂದು ಕರೆ ಕೊಡುವುದರ ಜೊತೆಗೆ ಕರ್ನಾಟಕ ಸರಕಾರದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಜಗದೀಶ ಶೆಟ್ಟರವರು ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಸರಕಾರ ಬದ್ಧ ಎಂದು ತಿಳಿಸುವುದರ ಜೊತೆಗೆ ಸಂಸದ ಶ್ರೀ ಅನಂತಕುಮಾರರವರು ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಪೂರಕವಾಗುವಂತೆ ಕಾರ್ಯ ನಿರ್ವಹಿಸಬೇಕು. ಸಹಕಾರ ಕ್ಷೇತ್ರ ತೆರಿಗೆ ಮುಕ್ತ ಕ್ಷೇತ್ರವಾಗಬೇಕು ಸಂಸತನಲ್ಲಿ ಸಹಕಾರಿಗಳ ಪರವಾಗಿ ಹೋರಾಟಮಾಡುವುದಾಗಿ ತಿಳಿಸಿರುವುದು ಸಹಕಾರಿಗಳಿಗೆ ನೆಮ್ಮದಿ ತಂದಿದೆ. ಸರಕಾರ ನಮ್ಮ ಜೊತೆಗಿದೆ ಎಂಬ ಬಗ್ಗೆ ಸಮಾಧಾನವೂ ಆಗಿದೆ ಎಂದು ನನ್ನ ಅಭಿಪ್ರಾಯ.

ಸಮಾರೋಪ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಧರ್ಮಸ್ಥಳದ ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗ್ಗಡೆಯವರ ಆಶೀರ್ವಚನ, ಮಾಜಿ ಕೇಂದ್ರ ಸಚಿವ ಶ್ರೀ ಸುರೇಶ ಪ್ರಭುರವರು ಕೇಂದ್ರ ಸರಕಾರದ 97 ಸಂವಿಧಾನ ತಿದ್ದುಪಡಿ ಸ್ವಾಗತಾರ್ಹ. ಸಹಕಾರಿಗಳ ಬಹುದಿನಗಳ ಬೇಡಿಕೆಯನ್ನು ಸರಕಾರ ಈಡೇರಿಸಿದೆ. ಸಹಕಾರಿ ಕ್ಷೇತ್ರಕ್ಕೆ ಸ್ವಾಯತ್ತತೆಯನ್ನು ಒದಗಿಸಲು ಪ್ರಯತ್ನಿಸಿದೆ. ಇದು ಸ್ವಾಗತಾರ್ಹ.ಆದರೆ ನೇರ ತೆರಿಗೆ ಸಂಹಿತೆಯಲ್ಲಿ ಸಹಕಾರ ಕ್ಷೇತ್ರಕ್ಕೆ ವಿನಾಯಿತಿ ಅಗತ್ಯ ಎಂದು ತಿಳಿಸಿ ಈ ಬಗ್ಗೆ ಕೇಂದ್ರದೊಡನೆ ವ್ಯವಹರಿಸುವುದು ಅಗತ್ಯ ಎಂದು ಹೇಳಿರುವುದು ಅತ್ಯಂತ ಸಮಂಜಸ.

ಅಧಿವೇಶನದಲ್ಲಿ ಅನೇಕ ಹಿರಿಯ ಆರ್ಥಿಕ ತಜ್ಞರುಗಳ, ರಾಷ್ಟ್ರದ ಹಿರಿಯ ಸಹಕಾರಿ ನಾಯಕರುಗಳ, ವಿವಿಧ ರಾಜ್ಯಗಳ ರಾಜ್ಯಮಟ್ಟದ ಸಹಕಾರಿ ಸಂಸ್ಥೆಗಳ ಅಧ್ಯಕ್ಷರುಗಳ ಹಾಗೂ ಪದಾಧಿಕಾರಿಗಳ, ವಿಷಯ ತಜ್ಞರುಗಳ ಮಾರ್ಗದರ್ಶನ ಸಹಕಾರಿ ಚಳುವಳಿಯ ಆರೋಗ್ಯಕರ ಬೆಳವಣಿಗೆಗೆ ಉತ್ತಮ ಅಡಿಪಾಯವೆನ್ನಬಹುದಾಗಿದೆ.

ಬೆಂಗಳೂರು ಅಧಿವೇಶನದಲ್ಲಿ ಮಹತ್ವಪೂರ್ಣ ನಿರ್ಣಯಗಳನ್ನು ಕೈಗೊಳ್ಳಲಾಗಿದೆ. ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಹಾಗೂ ಸಹಕಾರಿ ಸಂಸ್ಥೆಗಳ ಹಂತದಲ್ಲಿ ಈ ನಿರ್ಣಯಗಳ ಅನುಷ್ಠಾನವಾಗಲು ಸಹಕಾರಿ ಕ್ಷೇತ್ರದ ಮುಂಚೂಣಿಯಲ್ಲಿರುವ ಎಲ್ಲಾ ಸಹಕಾರಿ ನಾಯಕರುಗಳು ಈ ಕ್ಷಣದಿಂದಲೇ ಕಾರ್ಯಪ್ರವೃತ್ತರಾಗುವುದು ಇಂದಿನ ಅವಶ್ಯಕತೆ.

– ಎಸ್.ಆರ್.ಸತೀಶಚಂದ್ರ

ಜನವರಿ ಮಾಹೆಯಲ್ಲಿ ನಡೆಸಿದ ತರಬೇತಿ ಕಾರ್ಯಕ್ರಮಗಳು

97ನೇ ಸಂವಿಧಾನದ ತಿದ್ದುಪಡಿ ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ಕಾಯ್ದೆ ತಿದ್ದುಪಡಿ ಹಿನ್ನೆಲೆಯಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳು ತಮ್ಮ ಉಪವಿಧಿಗಳಲ್ಲಿ ಅಗತ್ಯವಾಗಿ ಅಳವಡಿಸಿಕೊಳ್ಳಬೇಕಿರುವ ತಿದ್ದುಪಡಿಗಳ ಬಗ್ಗೆ ರಾಜ್ಯವ್ಯಾಪಿ ತರಬೇತಿ ಕಾರ್ಯಕ್ರಮಗಳನ್ನು ನಡೆಸುವ ಉದ್ದೇಶದಿಂದ ಅಧಿಕಾರಿಗಳ ಜೊತೆಗೆ ಕೆಲವು ಸಹಕಾರಿಗಳ ಅಧ್ಯಕ್ಷರನ್ನು, ಕೆಲವು ಸಂಪನ್ಮೂಲ ವ್ಯಕ್ತಿಗಳನ್ನು, ಕೆಲವು ಸಹಕಾರಿಗಳ ಮುಖ್ಯಕಾರ್ಯನಿರ್ವಹಣಾಧಿಕಾರಿಗಳನ್ನು ಕೆಲವು ಚಾರ್ಟರ್ಡ್ ಅಕೌಂಟಂಟರುಗಳನ್ನು ಒಳಗೊಂಡಂತೆ 50 ಜನರ ತಂಡವನ್ನು ರಚಿಸಿ ದಿ: 21, 22 ಜನವರಿ 2013ರಂದು ಬೆಂಗಳೂರಿನ ಪ್ರಾದೇಶಿಕ ಸಹಕಾರಿ ಆಡಳಿತ ನಿರ್ವಹಣಾ ತರಬೇತಿ ಸಂಸ್ಥೆಯಲ್ಲಿ ತರಬೇತಿಗಾರರ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ವ್ಯಕ್ತಿತ್ವ ವಿಕಸನ ತರಬೇತಿಯಿಂದ ಸಾಧ್ಯ – ಕೊಂಕೋಡಿ ಪದ್ಮನಾಭ

ಈ ಕಾರ್ಯಕ್ರಮವನ್ನು ಕರ್ನಾಟಕದ ಪ್ರಸಿದ್ಧ ಸಹಕಾರಿ ಚಾಕಲೇಟ್ ಸಂಸ್ಥೆ ಕ್ಯಾಂಪ್ಕೋ ಅಧ್ಯಕ್ಷ ಹಿರಿಯ ಸಹಕಾರಿ ಶ್ರೀ ಕೊಂಕೋಡಿ ಪದ್ಮನಾಭರು ಉದ್ಘಾಟಿಸಿದರು. ಸಹಕಾರ ಕ್ಷೇತ್ರದ ಅಭಿವೃದ್ಧಿ ಉತ್ತಮ ಸಂಪನ್ಮೂಲ ವ್ಯಕ್ತಿಗಳ ಅಗತ್ಯ ಇದೆ. ಸಂಪನ್ಮೂಲ ವ್ಯಕ್ತಿಗಳು ವಿಶೇಷವಾಗಿ ತರಬೇತಿದಾರರು ವಿಷಯ ಸಂಗ್ರಹಗಳ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸುವುದು ಅಗತ್ಯ. ನೌಕರರು ಸಂಸ್ಥೆಯ ಆಸ್ತಿ. ಜವಾಬ್ದಾರಿಗಳಲ್ಲ. ಅವರಿಗೆ ಉತ್ತಮ ತರಬೇತಿ ಹಾಗೂ ಸೌಲಭ್ಯಗಳನ್ನು ಒದಗಿಸುವುದು ಅಗತ್ಯ. ತರಬೇತಿದಾರ ಉತ್ತಮ ವಿಷಯ ಸಂಗ್ರಹದತ್ತ ಗಮನಹರಿಸಬೇಕು. ಉಪನ್ಯಾಸ ಮಾಡುವಾಗ ಹಾವಭಾವಗಳ ಕಡೆಗೆ,ಸಮಯ ಪ್ರಜ್ಞೆಗಳನ್ನು ರೂಢಿಸಿಕೊಳ್ಳಬೇಕು. ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಗೆ ಇದು ಪೂರಕವಾಗಬೇಕು ಈ ತರಬೇತಿಯನ್ನು ಹಮ್ಮಿಕೊಳ್ಳುವ ಮೂಲಕ ಸಂಯುಕ್ತ ಸಹಕಾರಿಯು ಉತ್ತಮ ಕಾರ್ಯಮಾಡಿದೆ ಎಂದು ತಿಳಿಸಿದರು.

"ನುರಿತ, ಅನುಭವಿ ತರಬೇತಿದಾರರ ಪಡೆ : ಸಂಯುಕ್ತ ಸಹಕಾರಿಯ ಗುರಿ" – ಎಸ್.ಆರ್.ಸತೀಶಚಂದ್ರ

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್.ಆರ್.ಸತೀಶಚಂದ್ರರವರು ರಾಜ್ಯದಲ್ಲಿ 100 ಜನಕ್ಕೂ ಹೆಚ್ಚು ಸೌಹಾರ್ದ ಸಹಕಾರಿಗಳ ತರಬೇತಿ ಪಡೆಯನ್ನು ಸಿದ್ಧಪಡಿಸುವ ಯೋಜನೆಯನ್ನು ಸಂಯುಕ್ತ ಸಹಕಾರಿಯು ಹೊಂದಿದೆ. ಕಳೆದ 2 ವರ್ಷಗಳಿಂದಲೇ ತರಬೇತಿದಾರರ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವ ಉದ್ದೇಶವನ್ನು ಸಂಯುಕ್ತ ಸಹಕಾರಿಯು ಹೊಂದಿತ್ತು ಈಗ ಸಂವಿಧಾನ 97 ನೇ ತಿದ್ದುಪಡಿ ಹಾಗೂ ಸೌಹಾರ್ದ ಸಹಕಾರಿ ಕಾಯ್ದೆ ತಿದ್ದುಪಡಿಗಳ ಹಿನ್ನೆಲೆಯಲ್ಲಿ ತುರ್ತಾಗಿ ರಾಜ್ಯವ್ಯಾಪಿ ಎಲ್ಲ ಜಿಲ್ಲೆಗಳಲ್ಲಿ ಈ ಕಾರ್ಯಕ್ರಮವನ್ನು ನಡೆಸಬೇಕಿದೆ. ಆದ್ದರಿಂದ ಈ ಕಾರ್ಯಕ್ರಮ. ಇದು ಪ್ರಾರಂಭದ ಹಂತ. ಮುಂದಿನ ದಿನಗಳಲ್ಲಿ ಈ ರೀತಿಯ ಹೆಚ್ಚು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು ತರಬೇತಿ ಪಡೆದವರೆಲ್ಲ ಎಲ್ಲರಲ್ಲಿ ಉತ್ತಮರಾಗುವುದು ಬೇಡ ಉತ್ತಮರಲ್ಲಿ ಅತ್ಯುತ್ತಮರಾಗುವುದಕ್ಕಾಗಿ ತರಬೇತಿ .ಸಾಮಾನ್ಯತೆಯಿಂದ ಅಸಾಮಾನ್ಯತೆಯತ್ತ ಹೆಜ್ಜೆಹಾಕುವುದಕ್ಕಾಗಿ ಈ ತರಬೇತಿ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಚಾರ್ಟರ್ಡ್ ಅಕೌಂಟೆಂಟ್ ಶ್ರೀ ಬಿ.ವಿ.ರವೀಂದ್ರನಾಥ ಪ್ರಾಂತೀಯ ಸಹಕಾರಿ ಆಡಳಿತ ನಿರ್ವಹಣಾ ತರಬೇತಿ ಸಂಸ್ಥೆಯ ಪ್ರಾಂತೀಯ ನಿರ್ದೇಶಕ ಶ್ರೀ ಎಸ್.ಎ.ಸಿದ್ಧಾಂತಿ, ನಿವೃತ್ತ ಅಪರನಿಬಂಧಕರುಗಳಾದ ಶ್ರೀ ಸಿ.ಎನ್.ಪರಶಿವಮೂರ್ತಿ ಶ್ರೀ ಆರ್.ಎಸ್.ಹುಚ್ಚಾಚಾರಿಯವರುಗಳು ವಿವಿಧ ವಿಷಯಗಳ ಬಗ್ಗೆ ಉಪನ್ಯಾಸ ನೀಡಿದರು. ಶ್ರೀ ಭಾಸ್ಕರ ಹೆಗಡೆಯವರು ಕಾರ್ಯಕ್ರಮದ ಸಂಚಾಲಕರಾಗಿ ಕಾರ್ಯ ನಿರ್ವಹಿಸಿದರು. ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಪಾಟೀಲರವರು ಸ್ವಾಗತ ಹಾಗೂ ಪ್ರಾಸ್ತಾವಿಕ ಭಾಷಣ ಮಾಡಿದರು. ಸಂಯುಕ್ತ ಸಹಕಾರಿಯ ನಿರ್ದೇಶಕಿ ಶ್ರೀಮತಿ ಹೆಚ್.ಸಿ.ನಾಗರತ್ನರವರು ವಂದನಾರ್ಪಣೆ ಮಾಡಿದರು. ಕಾರ್ಯಕ್ರಮ ಉತ್ತಮವಾಗಿತ್ತೆಂದು ಭಾಗವಹಿಸಿದ ಪ್ರತಿನಿಧಿಗಳು ಅಭಿಪ್ರಾಯ ವ್ಯಕ್ತಪಡಿಸಿದರು.

ಕ್ರಿಯಾಯೋಜನೆ :

ಕಾರ್ಯಕ್ರದ ಕೊನೆಯಲ್ಲಿ ಸುದೀರ್ಘ ಚರ್ಚೆಯ ನಂತರ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಲಾಯಿತು.

- ತರಬೇತಿ ವಿಷಯಗಳ ಬಗ್ಗೆ ಏಕರೂಪ ಅಧ್ಯಯನ ಸಾಹಿತ್ಯವನ್ನು (uniform study material) ಸಿದ್ಧಪಡಿಸಬೇಕು.
- ತರಬೇತಿದಾರರ ಕೈಪಿಡಿ ಸಿದ್ಧಪಡಿಸಬೇಕು. (Trainers Handbook)
- ತರಬೇತಿ ಪರಿಣಿತರ ಪಟ್ಟಿ ಸಿದ್ಧಪಡಿಸಬೇಕು.ಹಾಗೂ ಎಲ್ಲ ತರಬೇತಿ ದಾರರಿಗೆ ಕಳುಹಿಸಬೇಕು. (Master Trainers list to be prepared and circulated to all the trainers)
- ಪ್ರಸಕ್ತ ತಿದ್ದುಪಡಿಯೊಂದಿಗೆ ಮಾದರಿ ಉಪವಿಧಿಗಳನ್ನು ಸಿದ್ಧಪಡಿಸಬೇಕು.
- ಎಲ್ಲ ಸಿದ್ಧತೆಗಳಾದ ಮೇಲೆ ತಜ್ಞರುಗಳ ಗಮನಕ್ಕೆ ತರಬೇಕು. ಅವರ ಅಭಿಪ್ರಾಯ ಪಡೆದ ನಂತರ ಕಾರ್ಯರೂಪಕ್ಕೆ ತರಬೇಕು
- ತರಬೇತಿ ಸಿದ್ಧತೆಗಳ ಬಗ್ಗೆ "ಮಾಸ್ಟರ ಚೆಕ್ ಲಿಸ್ಟ್" ಸಿದ್ಧಪಡಿಸಿ ಎಲ್ಲ ತರಬೇತಿದಾರರಿಗೆ ಕಳುಹಿಸಬೇಕು.

ನೇರ ತೆರಿಗೆ ಸಂಹಿತೆ : ಸಹಕಾರಿಗಳು ಕೇಂದ್ರಕ್ಕೆ ಪ್ರತ್ಯೇಕ ಮನವಿ ಸಲ್ಲಿಸಲು ಸೂಚನೆ

ಕೇಂದ್ರದ ಮುಂಬರುವ ಆಯವ್ಯಯ (ಬಜೆಟ್) ಅಧಿವೇಶನ ಇದೇ ಫೆಬ್ರವರಿಯಲ್ಲಿ ನಡೆಯಲಿದೆ. ಈ ಅಧಿವೇಶನದಲ್ಲಿ ನೇರ ತೆರಿಗೆ ಜಾರಿಗೆ ಕೊಡುವ ಸಂದರ್ಭದಲ್ಲಿ ಸಹಕಾರಿ ಸಂಸ್ಥೆಗಳನ್ನು ಹೊರತುಪಡಿಸಬೇಕೆಂದು ರಾಜ್ಯದ ಎಲ್ಲ ಸಹಕಾರಿಗಳು ಕೇಂದ್ರದ ಹಣಕಾಸು ಸಚಿವರಿಗೆ ಪ್ರತ್ಯೇಕ ಮನವಿಯನ್ನು ಸಲ್ಲಿಸಬೇಕೆಂದು ಸಂಯುಕ್ತ ಸಹಕಾರಿಯ ಅಧ್ಯಕ್ಷರು ಸೂಚಿಸಿರಿರುತ್ತಾರೆ.

ಆದ್ದರಿಂದ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು ಕೇಂದ್ರದ ಹಣಕಾಸು ಸಚಿವರಿಗೆ ನೇರ ತೆರಿಗೆ ಜಾರಿಗೆ ಸಂದರ್ಭದಲ್ಲಿ ಸಹಕಾರಿ ಸಂಸ್ಥೆಗಳನ್ನು ಹೊರತುಪಡಿಸಬೇಕೆಂದು ಮನವಿಯನ್ನು ಸಲ್ಲಿಸಬೇಕೆಂದು ಅದರ ಒಂದು ಪ್ರತಿಯನ್ನು ಸಂಯುಕ್ತ ಸಹಕಾರಿಗೆ ಕಳುಹಿಸಬೇಕೆಂದು ಎಂದು ಈ ಮೂಲಕ ಸೂಚಿಸಲಾಗಿದೆ.

ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಲೆಕ್ಕಪರಿಶೋಧನಾ ಸಮಿತಿಯ ಅಧ್ಯಕ್ಷರುಗಳಿಗಾಗಿ ಆಡಳಿತ ಪರಿಣಿತಿ ತರಬೇತಿ

ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಲೆಕ್ಕಪರಿಶೋಧನಾ ಸಮಿತಿಯ ಅಧ್ಯಕ್ಷರುಗಳಿಗಾಗಿ ರಿವರ್ಟನ್ ಲಾಡ್ಜ್ ಲಕ್ಕವಳ್ಳಿಯಲ್ಲಿ ದಿನಾಂಕ 27,28 ಜನವರಿ 2013ರಂದು ಏರ್ಪಡಿಸಿದ್ದ ಆಡಳಿತ ಪರಿಣತಿ ತರಬೇತಿ ಕಾರ್ಯಕ್ರಮವನ್ನು ಸುಕೋ ಬ್ಯಾಂಕ್ ಅಧ್ಯಕ್ಷ ಶ್ರೀ ಮನೋಹರ ಮಸ್ಕಿಯವರು ಉದ್ಘಾಟಿಸಿ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಪ್ರತಿದಿನ ಒಂದೊಂದು ಹೊಸ ಸಂಶೋಧನೆಗಳು ನಡೆಯುತ್ತಿವೆ. ಪಟ್ಟಣ ಸಹಕಾರಿ ಬ್ಯಾಂಕುಗಳಿಗೆ ಇವೆಲ್ಲ ಸವಾಲುಗಳು. ಈ ಸವಾಲುಗಳ ಜೊತೆಯಲ್ಲಿ ನಾವು ಅಭಿವೃದ್ಧಿ ಸಾಧಿಸಬೇಕಿದೆ. ಪಟ್ಟಣ ಸಹಕಾರ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಸೌಹಾರ್ದ ಸಹಕಾರಿಗಳು ಉತ್ತಮ ಸಾಧನೆಯನ್ನು ಮಾಡಿ ಉಳಿದ ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಮಾದರಿಯಾಗುವ ಅವಶ್ಯಕತೆ ಇದೆ. ಈ ಹಿನ್ನೆಲೆಯಲ್ಲಿ ಸಂಯುಕ್ತ ಸಹಕಾರಿಯು ಪಟ್ಟಣ ಸಹಕಾರಿ ಬ್ಯಾಂಕುಗಳಿಗಾಗಿ ಹೆಚ್ಚಿನ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್.ಆರ್.ಸತೀಶಚಂದ್ರರವರು ವಹಿಸಿ ಆಧುನಿಕ ವೈಜ್ಞಾನಿಕ ಯುಗ ಬಹಳ ವೇಗವಾಗಿ ಓಡುತ್ತಿದೆ. ಅದರ ಜೊತೆಯಲ್ಲಿ ಓಡುವ ಸಾಮರ್ಥ್ಯ ಪಡೆದುಕೊಳ್ಳಬೇಕಾದರೆ ತರಬೇತಿ ಅಗತ್ಯ ಎಂದರು ಪಟ್ಟಣ ಸಹಕಾರ ಬ್ಯಾಂಕುಗಳ ಅಭಿವೃದ್ಧಿಗೆ ಪೂರಕವಾಗುವ ವಿಷಯಗಳ ಬಗ್ಗೆ ಹೆಚ್ಚು ಗಮನಹರಿಸಿದೆ. ಉತ್ತಮ ಸಂಪನ್ಮೂಲ ವ್ಯಕ್ತಿಗಳನ್ನೆ ಆಯ್ಕೆಮಾಡಿದೆ. ಈ ತರಬೇತಿಯಿಂದ ಪಟ್ಟಣ ಸಹಕಾರ ಬ್ಯಾಂಕುಗಳ ಅಭಿವೃದ್ಧಿಗೆ ಪೂರಕವಾಗಲಿ ಎಂದು ಸಂಯುಕ್ತ ಸಹಕಾರಿಯು ಅಪೇಕ್ಷಿಸುತ್ತದೆ ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ವಿಕಾಸ ಬ್ಯಾಂಕ್ ಅಧ್ಯಕ್ಷ ಶ್ರೀ ವಿಶ್ವನಾಥ ಹಿರೇಮಠರವರು ಮಾತನಾಡಿ ಆಧುನಿಕ ತಂತ್ರಜ್ಞಾನ ಅಳವಡಿಕೆ ಪ್ರಸ್ತುತ ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಅನಗತ್ಯವೆನಿಸಬಹುದು ದುಬಾರಿಯಾಗಬಹುದು ಆದರೆ ಇದು ಇಂದಿನ ಅನಿವಾರ್ಯತೆ. ಇಲ್ಲದಿದ್ದರೆ ನಮ್ಮ ಅಸ್ತಿತ್ವಕ್ಕೆ ಹಾನಿಯಾಗುತ್ತದೆ. ಪಟ್ಟಣ ಸಹಕಾರಿ ಬ್ಯಾಂಕುಗಳು ನಾವು ಬಹಳ ಹಿಂದೆ ಇದ್ದೇವೆ. ನಮ್ಮನ್ನು ಈ ಕ್ಷೇತ್ರದಲ್ಲಿ ಯಾರೂ ಗುರುತಿಸುವುದಿಲ್ಲ ನಮ್ಮ ವಿಶ್ವಾಸಾರ್ಹತೆ ನಮ್ಮ ಕಾರ್ಯವೈಖರಿ ಹಾಗೂ ಸೌಲಭ್ಯಗಳನ್ನು ಅವಲಂಬಿಸಿದೆ. ಆದ್ದರಿಂದ ತರಬೇತಿಗಳು ಅಗತ್ಯ. ಈ ತರಬೇತಿ ಅವಧಿಯಲ್ಲಿ ಅಳವಡಿಸಿರುವ ವಿಷಯ ಅತ್ಯಂತ ಮಹತ್ವದ್ದಾಗಿದ್ದು, ಈ ಬಗ್ಗೆ ಗಮನ ಹರಿಸಿ ಜ್ಞಾನ ಸಂಪಾದಿಸುವುದು ಅಗತ್ಯ. ಹಾಗೂ ಎಲ್ಲರ ಜೊತೆಗೆ ಹೆಜ್ಜೆ ಹಾಕುವಂತಾಗಬೆಕು ಎಂದು ತಿಳಿಸಿದರು.

ಇನ್ನೊಬ್ಬ ಹಿರಿಯ ಸಹಕಾರಿ ಚಿತ್ರದುರ್ಗ ಮರ್ಚೆಂಟ್ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್‌ನ ಅಧ್ಯಕ್ಷ ಶ್ರೀ ಎಸ್.ಆರ್.ಲಕ್ಷ್ಮಿಕಾಂತರೆಡ್ಡಿಯವರು ಮಾತನಾಡಿ ಕಾರ್ಯಕ್ರಮವನ್ನು ಉತ್ತಮ ಪರಿಸರದಲ್ಲಿ ಹಮ್ಮಿಕೊಳ್ಳಲಾಗಿದೆ. ಉತ್ತಮ ವಿಷಯಗಳನ್ನು ಆಯ್ಕೆಮಾಡಿದ್ದಾರೆ. ಉತ್ತಮ ಸಂಪನ್ಮೂಲ ವ್ಯಕ್ತಿಗಳನ್ನು ಬರಮಾಡಿಕೊಂಡಿದ್ದಾರೆ. ನಿಜವಾಗಿಯೂ ಇದೊಂದು ಉತ್ತಮ ತರಬೇತಿ ಕಾರ್ಯಕ್ರಮವಾಗಿ ಹೊರಹೊಮ್ಮುವುದರಲ್ಲಿ ಎರಡು ಮಾತಿಲ್ಲ ಎಂದು ತಿಳಿಸಿದರು.

ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಜಿ.ಪಾಟೀಲ್‌ರವರು ಸ್ವಾಗತ ಹಾಗೂ ಪ್ರಾಸ್ತಾವಿಕ ಭಾಷಣಮಾಡಿದರು. ಕಾರ್ಯಕ್ರಮದಲ್ಲಿ ಕ್ಯಾಮೆಲ್ಸ್‌ರೇಟಿಂಗ್ ಸಿ.ಬಿ.ಎಸ್.ಸಿ.ಟಿ.ಎಸ್. ಅಸೆಟ್ಸ್‌ಲಾಯಬಿಲಿಟಿ ಮೆನೆಜಮೆಂಟ್ ಮತ್ತು ಕಾರ್ಪೋರೇಟ್ ಗವರ್ನನ್ಸ್ ವಿಷಯಗಳನ್ನು ಅಳವಡಿಸಲಾಗಿತ್ತು ಕಾರ್ಯಕ್ರಮದಲ್ಲಿ 10 ಪಟ್ಟಣ ಸಹಕಾರ ಬ್ಯಾಂಕುಗಳಿಂದ 35 ಪ್ರತಿನಿಧಿಗಳು ಸಂಯುಕ್ತ ಸಹಕಾರಿಯ 8 ಅಧಿಕಾರಿಗಳು 4 ಸಂಪನ್ಮೂಲ ವ್ಯಕ್ತಿಗಳು ಸೇರಿದಂತೆ 47 ಜನರು ಭಾಗವಹಿಸಿ ಪ್ರಯೋಜನ ಪಡೆದರು.

2013 ಮಾರ್ಚ್‌ಮಾಹೆಯಲ್ಲಿ ರಾಜ್ಯದಾದ್ಯಂತ ಸೌಹಾರ್ದ ಸಹಕಾರಿ ಕಾಯ್ದೆ ತಿದ್ದುಪಡಿ ಕುರಿತು ಕಾರ್ಯಾಗಾರ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ವಾರ್ಷಿಕ ಸಭೆ

97 ನೇ ಸಂವಿಧಾನ ತಿದ್ದುಪಡಿ ಹಾಗೂ ರಾಜ್ಯದ ಸೌಹಾರ್ದ ಸಹಕಾರಿ ಕಾಯ್ದೆ ತಿದ್ದುಪಡಿ ಅಧಿನಿಯಮಗಳ ಆಧಾರಿತ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು ತಮ್ಮ ಉಪವಿಧಿಗಳಲ್ಲಿ ಅಳವಡಿಸಿಕೊಳ್ಳಲು ಕಾಯ್ದೆಯಲ್ಲಿ 90 ದಿನಗಳ ಅವಧಿಯನ್ನು ಕಲ್ಪಿಸಲಾಗಿದೆ. ಎಲ್ಲ ಸೌಹಾರ್ದ ಸಹಕಾರಿಗಳು ಕಡ್ಡಾಯವಾಗಿ ತಮ್ಮ ಸೌಹಾರ್ದ ಸಹಕಾರಿಗಳ ಉಪವಿಧಿಗಳಲ್ಲಿ ಅಳವಡಿಸಿಕೊಳ್ಳಬೇಕಿದೆ.

ಆದ್ದರಿಂದ ಈ ಬಗ್ಗೆ ರಾಜ್ಯವ್ಯಾಪಿ ಕಾರ್ಯಾಗಾರಗಳನ್ನು ಮತ್ತು ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ವಾರ್ಷಿಕ ಸಭೆಗಳನ್ನು ಮಾರ್ಚ್ 2013ರಲ್ಲಿ ಹಮ್ಮಿಕೊಳ್ಳಲು ಉದ್ದೇಶಿಸಲಾಗಿದೆ. ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು ಈ ಸಭೆಗಳಿಗೆ ತಪ್ಪದೆ ಹಾಜರಾಗಲು ಸೂಚಿಸಿದೆ. ಸಭೆಯ ದಿನಾಂಕಗಳನ್ನು ತಿಳಿಸಲಾಗುವುದು.

ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ಅಧಿನಿಯಮ – 2012 ವಿಶೇಷ ಪ್ರಕಟಣೆ

ವಿಶೇಷ ರಾಜ್ಯ ಪತ್ರಿಕೆ

ಭಾಗ – IV-A ಬೆಂಗಳೂರು, ಶುಕ್ರವಾರ, ಜನವರಿ 11, 2013 (ಪುಷ್ಯ 21, ಶಕ ವರ್ಷ 1934) ನಂ. 38

Part – IV-A Bangalore, Friday, January 11, 2013 (Pushya 21, Shaka Varsha 1934) No. 38

ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಂವ್ಯಶಾಇ 72 ಶಾಸನ 2012, ಬೆಂಗಳೂರು, ದಿನಾಂಕ: 11.01.2013

ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ವಿಧೇಯಕ, 2012ಕ್ಕೆ 2013 ರ ಜನವರಿ ಮಾಹೆಯ 10ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2013ರ ಕರ್ನಾಟಕ ಅಧಿನಿಯಮ ಸಂಖ್ಯೆ: 04 ಎಂಬುದಾಗಿ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

2013ರ ಕರ್ನಾಟಕ ಅಧಿನಿಯಮ ಸಂಖ್ಯೆ 04

(2013ರ ಜನವರಿ ಹನ್ನೊಂದನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ಅಧಿನಿಯಮ, 2012

(2013ರ ಜನವರಿ ಹತ್ತನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ನ್ನು (2000 ದ ಕರ್ನಾಟಕ ಅಧಿನಿಯಮ ಸಂಖ್ಯೆ 17) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೂರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ :–

1. ಸಂಕ್ಷಿಪ್ತ ಹೆಸರು ಮತ್ತು ಆರಂಭ.– (1) ಈ ಅಧಿನಿಯಮವನ್ನು ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ಅಧಿನಿಯಮ, 2012 ಎಂದು ಕರೆಯತಕ್ಕದ್ದು.

(2) ಇದು, ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

2. 2ನೇ ಪ್ರಕರಣದ ತಿದ್ದುಪಡಿ.– ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ (ಇಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ), 2ನೇ ಪ್ರಕರಣದಲ್ಲಿ:–

(i) (ಎ) ಖಂಡಕ್ಕೆ ಈ ಕೆಳಗಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(ಎ) 'ಅಪೆಕ್ಸ್ ಸಹಕಾರಿ' ಎಂದರೆ ಸಹಕಾರಿಗಳಿಗೆ ಮಾತ್ರ ಸದಸ್ಯತ್ವಕ್ಕೆ ಪ್ರವೇಶವಿರುವ ಮತ್ತು ಇಡೀ ರಾಜ್ಯದ ಕಾರ್ಯಕ್ಷೇತ್ರವನ್ನುಳ್ಳ ಸಹಕಾರಿ

(ಎ1) 'ಕಾರ್ಯಕ್ಷೇತ್ರ' ಎಂದರೆ, ಯಾವ ಪ್ರದೇಶದಿಂದ ಸದಸ್ಯರನ್ನು ಸೇರಿಸಿಕೊಳ್ಳಲಾಗುತ್ತದೆಯೋ ಅಂತಹ ಅಥವಾ ಸಹಕಾರಿಯ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದಂತಹ ಅಧಿಕಾರ ವ್ಯಾಪ್ತಿಯ ಪ್ರದೇಶ

(ಎ2) 'ಹಿಂದುಳಿದ ವರ್ಗಗಳು' ಎಂದರೆ, ಸರ್ಕಾರವು ಕಾಲಕಾಲಕ್ಕೆ ಹಿಂದುಳಿದ ವರ್ಗಗಳು ಎಂದು ವರ್ಗೀಕರಣ ಮಾಡಬಹುದಾದ ಮತ್ತು ಅಧಿಸೂಚಿಸಬಹುದಾದ ಅಂಥ ನಾಗರೀಕರ ವರ್ಗ ಅಥವಾ ವರ್ಗಗಳು

(ಎ3) 'ಮಂಡಲಿ' ಎಂದರೆ ಯಾವುದೇ ಹೆಸರಿನಿಂದ ಕರೆಯಲ್ಪಡುವ ಒಂದು ಸಹಕಾರಿಯ ಅಥವಾ ಸಂಯುಕ್ತ ಸಹಕಾರಿಯ ಕೆಲಸ ಕಾರ್ಯಗಳ ನಿರ್ವಹಣೆ ಮತ್ತು ವ್ಯವಸ್ಥಾಪನೆಯ ನಿಯಂತ್ರಣ ಮತ್ತು ಮಾರ್ಗದರ್ಶನವನ್ನು ವಹಿಸಿಕೊಟ್ಟ ನಿರ್ದೇಶಕರ ಮಂಡಲಿ ಅಥವಾ ಆಡಳಿತ ಮಂಡಲಿ"

(ii) (ಇಇ) ಖಂಡದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"(ಇ1) 'ಸಹಕಾರ ಚುನಾವಣಾ ಆಯೋಗ' ಎಂದರೆ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959 (1959ರ ಕರ್ನಾಟಕ ಅಧಿನಿಯಮ ಸಂಖ್ಯೆ 11)ರ 39ಎಎ ಪ್ರಕರಣದ ಅಡಿಯಲ್ಲಿ ರಚಿತವಾದ ಸಹಕಾರ ಚುನಾವಣಾ ಆಯೋಗ;"

(iii) (ಜೆ) ಖಂಡದಲ್ಲಿ 'ಅಥವಾ ವರ್ಷ' ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

(iv) (ಆರ್) ಖಂಡದಲ್ಲಿ "ಮತ್ತು ಒಬ್ಬ ಸಹಸದಸ್ಯನನ್ನೂ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು;

(v) (ಎಸ್) ಖಂಡದಲ್ಲಿ "ಉಪಸಭಾಪತಿ" ಎಂಬ ಪದದ ತರುವಾಯ, "ಚುನಾಯಿತ ಕಾರ್ಯದರ್ಶಿ ಅಥವಾ ಖಜಾಂಚಿ, ವಿಶೇಷಾಧಿಕಾರಿ," ಎಂಬ ಪದಗಳನ್ನು ಸೇರಿಸತಕ್ಕದ್ದು.

(vi) (ಕೆ)ಖಂಡದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"(ಕೆ1) 'ಡೆಲಿಗೇಟ್' ಎಂದರೆ, ಇತರ ಸಹಕಾರಿಗಳಲ್ಲಿ ಒಂದು ಸಹಕಾರಿಯನ್ನು ಪ್ರತಿನಿಧಿಸುವ ಅಂಥ ಸಹಕಾರಿಯ ಒಬ್ಬ ಸದಸ್ಯ;"

(vii) (ಎಲ್)ಖಂಡದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"(ಎಲ್1)– 'ಸಹಕಾರಿ ಲೆಕ್ಕಪರಿಶೋಧನಾ ನಿರ್ದೇಶಕ' ಎಂದರೆ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 (1959ರ ಕರ್ನಾಟಕ ಅಧಿನಿಯಮ ಸಂಖ್ಯೆ 11)ರ (2)ನೇ ಪ್ರಕರಣದ (ಎ–4) ಖಂಡದಲ್ಲಿ ಪರಿಭಾಷಿಸಲಾದ ಸಹಕಾರಿ ಲೆಕ್ಕಪರಿಶೋಧನಾ ನಿರ್ದೇಶಕ;"

(viii) (ಯು) ಖಂಡದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"(ಯು1) 'ಪ್ರತಿನಿಧಿ' ಎಂದರೆ ಪ್ರಾಥಮಿಕ ಅಥವಾ ಮಾಧ್ಯಮಿಕ ಸಹಕಾರಿಗಳ ಬಿಡಿಸದಸ್ಯರ ಗುಂಪಿನಿಂದ ಅವರನ್ನು ಪ್ರತಿನಿಧಿಸಲು ಈ ಅಧಿನಿಯಮದ ಮತ್ತು ಅದರ ಅಡಿಯಲ್ಲಿ ರಚಿಸಲಾದ ನಿಯಮಗಳ ಮತ್ತು ಉಪವಿಧಿಗಳ ಅನುಸಾರವಾಗಿ ಪ್ರಾತಿನಿಧಿಕ ಸಾಮಾನ್ಯ ನಿಕಾಯದ ಸಭೆಯಲ್ಲಿ ಆ ಗುಂಪನ್ನು ಪ್ರತಿನಿಧಿಸಲು ಮತ್ತು ಅವರ ಪರವಾಗಿ ಭಾಗವಹಿಸಲು ಚುನಾಯಿತನಾದ ಒಬ್ಬ ವ್ಯಕ್ತಿ

(ಯು2) 'ಪ್ರಾತಿನಿಧಿಕ ಸಾಮಾನ್ಯ ನಿಕಾಯ' ಎಂದರೆ, ಒಂದು ಪ್ರಾಥಮಿಕ ಅಥವಾ ಮಾಧ್ಯಮಿಕ ಸಹಕಾರಿಯ ಎಲ್ಲಾ ಪ್ರತಿನಿಧಿಗಳು

(ಯು3) 'ಪ್ರಾತಿನಿಧಿಕ ಸಾಮಾನ್ಯ ಸಭೆ' ಎಂದರೆ, ಈ ಅಧಿನಿಯಮದ ಮತ್ತು ಅದರ ಅಡಿಯಲ್ಲಿ ರಚಿಸಲಾದ ನಿಯಮಗಳ ಹಾಗೂ ಉಪವಿಧಿಗಳ ಉಪಬಂಧಗಳಿಗೆ ಅನುಸಾರವಾಗಿ ಕರೆದ ಮತ್ತು ನಡೆಸಲಾದ ಪ್ರಾಥಮಿಕ ಅಥವಾ ಮಾಧ್ಯಮಿಕ ಸಹಕಾರಿಯ ಪ್ರತಿನಿಧಿಗಳ ಸಭೆ

(ix) (ಡಬ್ಲ್ಯು)ಖಂಡದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

(ಡಬ್ಲ್ಯು1) 'ರಾಜ್ಯಮಟ್ಟದ ಸಹಕಾರಿ' ಎಂದರೆ, ಇಡೀ ರಾಜ್ಯದ ಕಾರ್ಯಕ್ಷೇತ್ರವನ್ನು ಹೊಂದಿರುವ ಸಹಕಾರಿ;

(x) (ವೈ) ಖಂಡದಲ್ಲಿ "ಐದು" ಎಂಬ ಪದಕ್ಕೆ "ಇಪ್ಪತ್ತು" ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು.

3. 4ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 4ನೇ ಪ್ರಕರಣದ (2)ನೇ ಉಪಪ್ರಕರಣದ (ಸಿ) ಖಂಡದಲ್ಲಿ "ಐದು ಅಥವಾ ಅದಕ್ಕೂ ಹೆಚ್ಚಿನ ಸಹಕಾರಿಗಳು" ಎಂಬ ಪದಗಳಿಗೆ "ಇಪ್ಪತ್ತು ಅಥವಾ ಅದಕ್ಕೂ ಹೆಚ್ಚಿನ ಸಹಕಾರಿಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

4. 5ನೇ ಪ್ರಕರಣದ ತಿದ್ದುಪಡಿ.- ಮೂಲ ಅಧಿನಿಯಮದ 5ನೇ ಪ್ರಕರಣದ (3)ನೇ ಉಪಪ್ರಕರಣದಲ್ಲಿನ, ಪರಂತುಕದಲ್ಲಿ, "ಪ್ರಸ್ತಾವಿತ ಅಥವಾ ಅಸ್ತಿತ್ವದಲ್ಲಿರುವ" ಎಂಬ ಪದಗಳಿಗೆ "ಪ್ರಸ್ತಾವಿತ" ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು.

5. 10ನೇ ಪ್ರಕರಣದ ತಿದ್ದುಪಡಿ.- ಮೂಲ ಅಧಿನಿಯಮದ 10ನೇ ಪ್ರಕರಣದಲ್ಲಿನ, (2)ನೇ ಉಪ ಪ್ರಕರಣದಲ್ಲಿ,

(i) (iiiಎ) ಖಂಡದಲ್ಲಿ, "ನಾಮಮಾತ್ರ ಸದಸ್ಯರು ಮತ್ತು ಸಹಸದಸ್ಯರದ್ದೂ" ಎಂಬ ಪದಗಳಿಗೆ "ನಾಮಮಾತ್ರ ಸದಸ್ಯರದ್ದೂ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ii) (x) ಖಂಡದಲ್ಲಿ, "ಪದಾಧಿಕಾರಿಗಳ ಸಂಖ್ಯೆ" ಎಂಬ ಪದಗಳ ತರುವಾಯ, "ಮತ್ತು ಮಂಡಲಿಯ ಅಧಿಕಾರಗಳು, ಪ್ರಕಾರ್ಯಗಳು ಹಾಗೂ ಕರ್ತವ್ಯಗಳು" ಎಂಬ ಪದಗಳನ್ನು ಸೇರಿಸತಕ್ಕದ್ದು.

(iii) (x)ನೇ ಖಂಡದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು; ಎಂದರೆ,-

"(xಎ) ನಿರ್ದೇಶಕರ ಪ್ರಯಾಣ ಭತ್ಯೆ, ದಿನ ಭತ್ಯೆ, ಸಭಾ ಭತ್ಯೆ, ಮತ್ತು ಇತರ ಭತ್ಯೆಗಳು;"

(iv) (xxi) ಖಂಡ ಕ್ಕೆ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು; ಎಂದರೆ:-

"(xxi) ನಿವ್ವಳ ಲಾಭದಲ್ಲಿ ಮುಖ್ಯವಾಗಿ ಈ ಮುಂದಿನವುಗಳ ಬಗ್ಗೆ ಹಣದ ವಿನಿಯೋಗ,-

(ಎ) ಸಹಕಾರಿಯು ರಚಿಸಿದ ಮೀಸಲು ನಿಧಿಗೆ ಶೇಕಡ ಇಪ್ಪತ್ತೈದು;

(ಬಿ) ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಸಹಕಾರ ಶಿಕ್ಷಣ ನಿಧಿಗೆ ಶೇಕಡ ಎರಡು;

ಪರಂತು ಸಹಕಾರ ಶಿಕ್ಷಣ ನಿಧಿಗೆ ವಂತಿಗೆ ಕೊಡಲು ವಿಫಲವಾದ ಯಾವೊಂದು ಸಹಕಾರಿಯೂ ತನ್ನ ಸದಸ್ಯರುಗಳಿಗೆ ಲಾಭಾಂಶವನ್ನು ಸಂದಾಯ ಮಾಡತಕ್ಕದ್ದಲ್ಲ;

(ಸಿ) ಅನಿರೀಕ್ಷಿತ ನಷ್ಟ ಅಥವಾ ಸಾದಿಲ್ವಾರುಗಳನ್ನು ಭರಿಸಲು ಕಾರ್ಯಾಚರಣಾ ಮೀಸಲಿಗೆ ಶೇಕಡ ಇಪ್ಪತ್ತು;

(ಡಿ) ಸಾಮಾನ್ಯ ನಿಕಾಯವು ಅನುಮೋದಿಸಿರುವ ಉದ್ದೇಶಕ್ಕಾಗಿ ಸಾಮಾನ್ಯ ಕ್ಷೇಮ ನಿಧಿಗೆ ಶೇಕಡ ಐದು;

(ಇ) ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ವಿಶೇಷ ನಿಧಿಗಳ ರಚನೆ ಮತ್ತು ಅವುಗಳಿಗೆ ವಂತಿಗೆ;

(ಎಫ್) ನೌಕರರಿಗೆ ಸಂದಾಯ ಮಾಡಬೇಕಾದ ಎರಡು ತಿಂಗಳ ವೇತನವನ್ನು ಮೀರದ ಬೋನಸ್ಸು;

(ಜಿ) ಸದಸ್ಯರಿಗೆ ಲಾಭಾಂಶ".

6. 19ಎ ಹೊಸ ಪ್ರಕರಣದ ಸೇರ್ಪಡೆ.- ಮೂಲ ಅಧಿನಿಯಮದ 19 ನೇ ಪ್ರಕರಣದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"19ಎ.- ಕೆಲವು ಸಂದರ್ಭಗಳಲ್ಲಿ ಸಹಕಾರಿಯ ಕ್ಲೇಮುಗಳನ್ನು ಪೂರೈಸಲು ವೇತನದಿಂದ ಕಡಿತ.-(1) ಯಾವುದೇ ಸಹಕಾರಿಯ ಸದಸ್ಯನು ಸಹಕಾರಿಗೆ ಒಂದು ಕರಾರನ್ನು ಬರೆದುಕೊಟ್ಟು ಅದರಲ್ಲಿ ತನ್ನ ಉದ್ಯೋಗದಾತನು ಆತನಿಂದ ತನಗೆ ಪಾವತಿಯಾಗಬೇಕಾಗಿರುವ ವೇತನ ಅಥವಾ ಮಜೂರಿಯಿಂದ ಸದರಿ ಕರಾರಿನಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ಮೊಬಲಗನ್ನು ಸಹಕಾರಿಗೆ ತಾನು ಕೊಡಬೇಕಾದ ಯಾವುದಾದರೂ ಸಾಲ ಅಥವಾ ಬಾಕಿ ಮೊಬಲಗಿನ ಬಗ್ಗೆ ಪಾವತಿ ಮಾಡಲು ಅಧಿಕಾರವುಳ್ಳವನಾಗಿರುತ್ತಾನೆಂದು ನಿರ್ದಿಷ್ಟಪಡಿಸಬಹುದು;

ಪರಂತು, ನೌಕರನು ಅಂಥ ಕರಾರಿನಲ್ಲಿ ನಿರ್ದಿಷ್ಟಪಡಿಸಿದ ಮೊಬಲಗನ್ನು ತನ್ನ ವೇತನ ಅಥವಾ ಮಜೂರಿಯಿಂದ ಕಡಿತಗೊಳಿಸಲು ಒಪ್ಪಿರುವುದಾಗಿ ತನ್ನ ಉದ್ಯೋಗದಾತನಿಂದ ಲಿಖಿತದಲ್ಲಿ ಪೂರ್ವಸಹಮತಿಯನ್ನು ಪಡೆಯತಕ್ಕದ್ದು.

ಮತ್ತು ಪರಂತು, ಎಷ್ಟು ಮೊಬಲಗನ್ನು ಕಡಿತಗೊಳಿಸಿದಲ್ಲಿ ಅದೂ ಸೇರಿದಂತೆ ವೇತನದಿಂದ ಮಾಡಲಾದ ಒಟ್ಟು ಕಡಿತಗಳು ನೌಕರನ ವೇತನದ ಶೇಕಡ ಐವತ್ತನ್ನು ಮೀರುವುದಿಲ್ಲವೋ ಅಷ್ಟು ಮೊಬಲಗಿಗೆ ಮಾತ್ರ ಉದ್ಯೋಗದಾತನ ಜವಾಬ್ದಾರಿಯು ಸೀಮಿತವಾಗಿರತಕ್ಕದ್ದು.

ಅಲ್ಲದೇ ಪರಂತು, ಸಾಲದ ಕಂತು ಮತ್ತು ಅದರ ಮೇಲಿನ ಬಡ್ಡಿ ಬಾಬ್ತು ಸಂಬಂಧವಾಗಿ ಮಾಡಬೇಕಾದ ಕಡಿತವೂ ಸೇರಿದಂತೆ ಒಟ್ಟು ಕಡಿತಗಳು ನೌಕರನ ವೇತನದ ಶೇಕಡ ಐವತ್ತನ್ನು ಮೀರದಂಥ ರೀತಿಯಲ್ಲಿ, ನೌಕರನಿಗೆ ಕೊಡಲಾಗುವ ಸಾಲದ ಮೊತ್ತ ಮತ್ತು ಕಂತುಗಳ ಸಂಖ್ಯೆಯನ್ನು ಸಹಕಾರಿಯ ಆಡಳಿತ ಮಂಡಲಿಯು ನಿರ್ಧರಿಸತಕ್ಕದ್ದು.

(2) ಆ ಸದಸ್ಯನು ಆ ರೀತಿ ತನ್ನ ಒಪ್ಪಿಗೆಯನ್ನು ಬರೆದುಕೊಟ್ಟ ಮೇಲೆ, ಸಹಕಾರಿಯು ಲಿಖಿತದ ಮೂಲಕ ಕೋರಿದ್ದೇ ಆದಲ್ಲಿ ಮತ್ತು ಅಂತಹ ಸಾಲ ಅಥವಾ ಬಾಕಿ ಮೊಬಲಗು ಅಥವಾ ಅದರ ಯಾವುದಾದರೂ ಭಾಗವು ಪಾವತಿಯಾಗದೇ ಉಳಿದಿರುವವರೆಗೆ, ಉದ್ಯೋಗದಾತನು ಕರಾರಿಗನುಗುಣವಾಗಿ ವೇತನದಿಂದ ಕಡಿತಗೊಳಿಸಿ ಹಾಗೆ ಕಡಿತ ಮಾಡಿಕೊಂಡ ದಿನಾಂಕದಿಂದ ಹದಿನಾಲ್ಕು ದಿವಸಗಳೊಳಗಾಗಿ ಅಂತಹ ಸಹಕಾರಿಗೆ ಪಾವತಿ ಮಾಡತಕ್ಕದ್ದು.

(3) ಈ ಪ್ರಕರಣದಲ್ಲಿರುವುದು ಯಾವುದೂ, ಸಂವಿಧಾನದ 366 ನೇ ಅನುಚ್ಛೇದದಲ್ಲಿ ಪರಿಭಾಷಿಸಿರುವಂತೆ ರೈಲ್ವೆಯಲ್ಲಿ, ಗಣಿಗಳಲ್ಲಿ ಮತ್ತು ತೈಲ ಕ್ಷೇತ್ರಗಳಲ್ಲಿ ನಿಯೋಜಿತರಾದ ವ್ಯಕ್ತಿಗಳಿಗೆ ಅನ್ವಯವಾಗತಕ್ಕದ್ದಲ್ಲ".

7. 20ನೇ ಪ್ರಕರಣದ ತಿದ್ದುಪಡಿ.- ಮೂಲ ಅಧಿನಿಯಮದ 20ನೇ ಪ್ರಕರಣದಲ್ಲಿ,-

(i) (2)ನೇ ಉಪಪ್ರಕರಣದ (ಎ)ಖಂಡದಲ್ಲಿ, "ವರ್ಷಗಳವರೆಗೆ" ಎಂಬ ಪದಕ್ಕೆ "ಸಹಕಾರ ವರ್ಷಗಳವರೆಗೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ii) (2)ನೇ ಉಪಪ್ರಕರಣದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(2ಎ)- ಯಾವುದೇ ಸಹಕಾರಿಯು, ಈ ಅಧಿನಿಯಮದ ಅಥವಾ ಅದರಡಿ ರಚಿಸಲಾದ ನಿಯಮಗಳ ಮತ್ತು ಉಪವಿಧಿಗಳ ಉಪಬಂಧಗಳಿಗೆ ಅನುಸಾರವಾಗಿ ಸದಸ್ಯತ್ವವನ್ನು ಪಡೆಯಲು ಯಾವೊಬ್ಬ ವ್ಯಕ್ತಿಗೆ ಲಿಖಿತದಲ್ಲಿ ದಾಖಲಿಸುವ ಸಾಕಷ್ಟು ಕಾರಣವಿಲ್ಲದೆ ಸದಸ್ಯತ್ವಕ್ಕೆ ಪ್ರವೇಶವನ್ನು ನಿರಾಕರಿಸತಕ್ಕದ್ದಲ್ಲ. ಅಂತಹ ವ್ಯಕ್ತಿಯ ಅರ್ಜಿಯು ಸ್ವೀಕೃತವಾದ ಅರವತ್ತು ದಿನಗಳೊಳಗೆ ಸಹಕಾರಿಯ ಆಡಳಿತ ಮಂಡಲಿಯು ತನ್ನ ತೀರ್ಮಾನವನ್ನು ಸದರಿ ವ್ಯಕ್ತಿಗೆ ತಿಳಿಸತಕ್ಕದ್ದು".

8. 21ನೇ ಪ್ರಕರಣವನ್ನು ಬಿಟ್ಟುಬಿಡುವುದು.- ಮೂಲ ಅಧಿನಿಯಮದ 21ನೇ ಪ್ರಕರಣವನ್ನು ಬಿಟ್ಟುಬಿಡತಕ್ಕದ್ದು.

9. 21ಎ ಪ್ರಕರಣದ ತಿದ್ದುಪಡಿ.- ಮೂಲ ಅಧಿನಿಯಮದ 21ಎ ಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"21ಎ ನಾಮ ಮಾತ್ರ ಸದಸ್ಯರು.-(1) ಒಂದು ಸಹಕಾರಿಯು ಅದರ ಹಿತಾಸಕ್ತಿಯಲ್ಲಿ-

(ಎ) ಯಾವೊಬ್ಬ ವ್ಯಕ್ತಿಯನ್ನು,

(ಬಿ) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ಅಥವಾ ಅದರ ಅಡಿಯಲ್ಲಿ ರಚಿತವಾದ ಯಾವುದೇ ಫರ್ಮು, ಕಂಪನಿ, ಸಹಕಾರ ಸಂಘ, ಸಹಕಾರಿ ಅಥವಾ ಯಾವುದೇ ನಿಕಾಯ ಅಥವಾ ನಿಗಮವನ್ನು,

– ಉಪವಿಧಿಯಲ್ಲಿ ನಮೂದಿಸಬಹುದಾದ ಯಾವುದೇ ನಿರ್ದಿಷ್ಟ ಉದ್ದೇಶಕ್ಕಾಗಿ, ಮೂರು ವರ್ಷಗಳಿಗೆ ಮೀರದ ಅವಧಿಗಾಗಿ ನಾಮಮಾತ್ರ ಸದಸ್ಯ ಎಂದು ಸೇರಿಸಿಕೊಳ್ಳಬಹುದು;

ಪರಂತು ಅಂಥ ವ್ಯಕ್ತಿ ಅಥವಾ ಸಂಸ್ಥೆಯು ಸಹಕಾರಿಯೊಡನೆ ಯಾವುದೇ ವಿಧದ ವ್ಯವಹಾರ ಸಂಬಂಧ ಹೊಂದಿರತಕ್ಕದ್ದು ಅಥವಾ ಅಂಥ ವ್ಯಕ್ತಿ ಅಥವಾ ಸಂಸ್ಥೆಯು ಸಹಕಾರಿಯ ಸೇವೆಗಳನ್ನು ಪಡೆಯುವ ಅಗತ್ಯವಿರತಕ್ಕದ್ದು ಅಥವಾ ಅಂಥ ವ್ಯಕ್ತಿ ಅಥವಾ ಸಂಸ್ಥೆಯು ಸಹಕಾರಿಯು ಅಗತ್ಯಪಡಿಸುವ ಸೇವೆಗಳನ್ನು ಒದಗಿಸುವ ಸ್ಥಿತಿಯಲ್ಲಿ ಇರತಕ್ಕದ್ದು.

ಮತ್ತೂ ಪರಂತು, 20ನೇ ಪ್ರಕರಣದ ಅಡಿಯಲ್ಲಿ ಸದಸ್ಯತ್ವಕ್ಕೆ ಅರ್ಹನಿದ್ದ ವ್ಯಕ್ತಿಯನ್ನು ನಾಮಮಾತ್ರ ಸದಸ್ಯನೆಂದು ಸೇರಿಸಿಕೊಳ್ಳತಕ್ಕದ್ದಲ್ಲ.

(2) ನಾಮಮಾತ್ರ ಸದಸ್ಯನು, ಸಹಕಾರಿಯ ಆಸ್ತಿಗಳಲ್ಲಿ ಅಥವಾ ಲಾಭಗಳಲ್ಲಿ ಯಾವುದೇ ರೂಪದಲ್ಲಿ ಯಾವುದೇ ಷೇರಿಗೆ ಹಕ್ಕುಳ್ಳವನಾಗಿರತಕ್ಕದ್ದಲ್ಲ ಮತ್ತು ಸಹಕಾರಿಯ ವ್ಯವಸ್ಥಾಪನೆಯಲ್ಲಿ ಭಾಗವಹಿಸಲು ಮತ್ತು ಸಹಕಾರಿಯ ಮಂಡಲಿಗೆ ನಡೆಯುವ ಚುನಾವಣೆಯೂ ಸೇರಿದಂತೆ ಸಹಕಾರಿಯ ಯಾವುದೇ ಸಭೆಯಲ್ಲಿ ಮತ ಚಲಾಯಿಸಲು ಮತ್ತು ಒಬ್ಬ ನಿರ್ದೇಶಕನಾಗಿ ಅಥವಾ ಪದಾಧಿಕಾರಿಯಾಗಿ ಚುನಾಯಿತನಾಗಲು ಹಕ್ಕನ್ನು ಹೊಂದಿರತಕ್ಕದ್ದಲ್ಲ.

(3) ಒಬ್ಬ ನಾಮಮಾತ್ರ ಸದಸ್ಯನು ಸಹಕಾರಿಯ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ಅಧಿಕಾರಗಳನ್ನು ಮತ್ತು ಹಕ್ಕುಗಳನ್ನು ಹೊಂದಿರತಕ್ಕದ್ದು ಮತ್ತು ಹೊಣೆಗಾರಿಕೆಗಳಿಗೆ ಒಳಪಟ್ಟಿರತಕ್ಕದ್ದು".

10. 23ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 23ನೇ ಪ್ರಕರಣದಲ್ಲಿ,–

(i) (3)ನೇ ಉಪಪ್ರಕರಣದಲ್ಲಿ, (ಎ) ಖಂಡಕ್ಕೆ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು; ಎಂದರೆ–

"(ಎ) ಮಂಡಲಿಯು ಸಲ್ಲಿಸಿದ ಹಿಂದಿನ ಸಹಕಾರ ವರ್ಷದ ವಾರ್ಷಿಕ ವರದಿಯ ಪರಿಗಣನೆ;

(ಬಿ) ಚಾಲ್ತಿ ವರ್ಷದ ಲೆಕ್ಕಪತ್ರಗಳ ಪರಿಶೋಧನೆಗಾಗಿ ಲೆಕ್ಕಪರಿಶೋಧಕನ ಮತ್ತು ಆಂತರಿಕ ಲೆಕ್ಕಪರಿಶೋಧಕನ ನೇಮಕ ಮತ್ತು ತೆಗೆದುಹಾಕುವಿಕೆ;

(ಸಿ) ಹಿಂದಿನ ಸಹಕಾರ ವರ್ಷದ ಲೆಕ್ಕಪರಿಶೋಧನಾ ವರದಿಯ ಮತ್ತು ಲೆಕ್ಕಪರಿಶೋಧಿತ ಆರ್ಥಿಕ ತ:ಖ್ತೆಗಳ ಪರಿಗಣನೆ;

(ಡಿ) ಹಿಂದಿನ ಸಹಕಾರ ವರ್ಷದ ಲೆಕ್ಕಪರಿಶೋಧನಾ ವರದಿಯಲ್ಲಿ ತೋರಿಸಲಾದ ದೋಷಗಳನ್ನು ಮತ್ತು ಅಕ್ರಮಗಳನ್ನು ಸರಿಪಡಿಸುವ ಸಂಬಂಧದಲ್ಲಿ ಮಂಡಲಿಯು ಸಲ್ಲಿಸಿದ ಪಾಲನಾ ವರದಿಯ ಪರಿಗಣನೆ ಹಾಗೂ ತೀರ್ಮಾನ;

(ಇ) ಹಿಂದಿನ ಸಹಕಾರಿ ವರ್ಷದ ಹೆಚ್ಚುವರಿ ಅಥವಾ ನಿವ್ವಳ ಲಾಭದ ವಿಲೇವಾರಿ;"

(ii) (ಬಿ), (ಸಿ), (ಡಿ) ಮತ್ತು (ಇ) ಖಂಡಗಳನ್ನು ಬಿಟ್ಟುಬಿಡತಕ್ಕದ್ದು.

(iii) (ಹೆಚ್) ಖಂಡಕ್ಕೆ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು; ಎಂದರೆ–

"(ಹೆಚ್) ಮುಂದಿನ ಸಹಕಾರ ವರ್ಷದ ವಾರ್ಷಿಕ ಬಜೆಟ್ಟಿನ ಅನುಮೋದನೆ"

(iv) (ಕೆ) ಖಂಡಕ್ಕೆ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು; ಎಂದರೆ–

"**(ಕೆ)** ಮಂಡಲಿಯ ಸದಸ್ಯರಿಂದ ಸಹಕಾರಿಯ ಸೇವೆಗಳ ಉಪಯೋಗದ ಅವಲೋಕನ;

(ಕೆ–1) ನಿರ್ದೇಶಕರಿಗೆ ಮತ್ತು ಅವರ ಸಂಬಂಧಿಕರಿಗೆ ನೀಡಿದ ಸಾಲಗಳು ಮತ್ತು ಮುಂಗಡಗಳು ಮತ್ತು ಸುಸ್ತಿ ಸಾಲಗಳು ಯಾವುದಾದರೂ ಇದ್ದಲ್ಲಿ, ಸುಸ್ತಿ ಸಾಲಗಳ ವಸೂಲಾತಿಗೆ ತೆಗೆದುಕೊಂಡ ಕ್ರಮದ ಪರಿಶೀಲನೆ;

(ಕೆ–2) ಒಟ್ಟುಗೂಡಿಸುವಿಕೆ, ವಿಭಜನೆ, ವಿಲೀನತೆ ಮತ್ತು ಸ್ವತ್ತುಗಳ ಮತ್ತು ಹೊಣೆಗಾರಿಕೆಗಳ ವರ್ಗಾವಣೆ;

(ಕೆ–3) ವಸೂಲಾಗದೆಂದು ಪರಿಗಣಿತವಾದ ಸುಸ್ತಿ ಸಾಲಗಳ ಬಗ್ಗೆ ತೀರ್ಮಾನ;

(ಕೆ–4) ಮಂಡಲಿಯು ಶಿಸ್ತಿನ ವಿಚಾರಣೆ ನಡೆಸಿ ಸೇವೆಯಿಂದ ತೆಗೆದುಹಾಕಿದ ಅಥವಾ ವಜಾ ಮಾಡಿದ ಅಥವಾ ಕೊನೆಗೊಳಿಸಿದ ಅಥವಾ ಯಾವುದೇ ಕಠಿಣ ದಂಡನೆಗೆ ಒಳಗಾದ ನೌಕರನ ಅಪೀಲಿನ ಬಗ್ಗೆ ತೀರ್ಮಾನ."

(v) (ಎಲ್)ಖಂಡದಲ್ಲಿ "ಮತ್ತು ಆಕಸ್ಮಿಕ ರಿಕ್ತತೆಯನ್ನು ಭರ್ತಿ ಮಾಡುವುದು" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

(vi) (ಪಿ)ಖಂಡದಲ್ಲಿ "ಅಥವಾ ಯಾರ ಸದಸ್ಯತ್ವವನ್ನು ತೆಗೆದುಹಾಕಲಾಗಿದೆಯೋ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

(vii) (ಟಿ)ಖಂಡದಲ್ಲಿ "ಹಿಂದಿನ ವರ್ಷದಲ್ಲಿ" ಎಂಬ ಪದಗಳಿಗೆ, "ಹಿಂದಿನ ಸಹಕಾರ ವರ್ಷದಲ್ಲಿ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

11. 23ಎ ಮತ್ತು 23ಬಿ ಹೊಸ ಪ್ರಕರಣಗಳ ಸೇರ್ಪಡೆ.– ಮೂಲ ಅಧಿನಿಯಮದ 23ನೇ ಪ್ರಕರಣದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು. ಎಂದರೆ:–

"**23ಎ.– ಸಹಕಾರಿಯು ತನ್ನ ಕಾರ್ಯಕ್ಷೇತ್ರದಲ್ಲಿ ಶಾಖೆಗಳನ್ನು ತೆರೆಯುವುದು:–** ಒಂದು ಸಹಕಾರಿಯು ತನ್ನ ಕಾರ್ಯಕ್ಷೇತ್ರದಲ್ಲಿ ಸದಸ್ಯರ ಉಪಯೋಗಕ್ಕಾಗಿ ಮಾತ್ರ ಶಾಖೆಗಳನ್ನು, ಉಪ ಶಾಖೆಗಳನ್ನು, ಪಾವತಿ ಕಛೇರಿಗಳನ್ನು ಅಥವಾ ಯಾವುದೇ ಹೆಸರಿನಿಂದ ಕರೆಯಲ್ಪಡುವ ಕಛೇರಿಗಳನ್ನು ಸಂಯುಕ್ತ ಸಹಕಾರಿಯ ಮತ್ತು ತನ್ನ ಸಾಮಾನ್ಯ ಸಭೆಯ ಪೂರ್ವಾನುಮತಿಯೊಡನೆ ಆರಂಭಿಸಬಹುದು.

23ಬಿ.– ಪ್ರಾತಿನಿಧಿಕ ಸಾಮಾನ್ಯ ನಿಕಾಯದ ಸಭೆ,– ಯಾವುದೇ ಪ್ರಾಥಮಿಕ ಅಥವಾ ಮಾಧ್ಯಮಿಕ ಸಹಕಾರಿಯ ಸದಸ್ಯತ್ವದ ಸಂಖ್ಯೆಯು ಮೂರು ಸಾವಿರಕ್ಕೆ ಮೀರಿದ್ದಲ್ಲಿ ಅಥವಾ ಅದರ ಕಾರ್ಯಕ್ಷೇತ್ರವು ಒಂದು ತಾಲ್ಲೂಕಿಗಿಂತ ಹೆಚ್ಚಾಗಿದ್ದಲ್ಲಿ ಅಂಥ ಸಹಕಾರಿಯ ಸಾಮಾನ್ಯ ಸಭೆಯು ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ಸಾಮಾನ್ಯ ನಿಕಾಯದ ಯಾವುದೇ ಅಥವಾ ಎಲ್ಲಾ ಅಧಿಕಾರಗಳನ್ನು ಹಾಗೂ ಈ ಅಧಿನಿಯಮದಲ್ಲಿ ಸಾಮಾನ್ಯ ನಿಕಾಯ ಅಥವಾ ಅದರ ಸಭೆಗೆ ಯಾವುದೇ ರೂಪದಲ್ಲಿ ಅಥವಾ ಪದಗಳಲ್ಲಿ ಮಾಡಲಾದ ಯಾವುದೇ ಉಲ್ಲೇಖವು, ಅಂಥ ಉಲ್ಲೇಖವು ಪ್ರಾತಿನಿಧಿಕ ಸಾಮಾನ್ಯ ನಿಕಾಯ ಅಥವಾ ಸಂದರ್ಭಾನುಸಾರವಾಗಿ ಅದರ ಸಭೆಗೆ ಮಾಡಿದ ಉಲ್ಲೇಖಗಳ ಬಗ್ಗೆ ಅಧಿಕಾರಗಳನ್ನು ಚಲಾಯಿಸಲು ನಿಯಮಿಸಬಹುದಾದಂತೆ ಆಯ್ಕೆ ಮಾಡಲಾದ ನಿಗದಿತ ಸಂಖ್ಯೆಯ ಸದಸ್ಯರನ್ನೊಳಗೊಂಡ (ಇಲ್ಲಿ ಇನ್ನು ಮುಂದೆ ಪ್ರಾತಿನಿಧಿಕ ಸಾಮಾನ್ಯ ನಿಕಾಯ ಎಂದು ಉಲ್ಲೇಖಿಸಲಾದ) ಒಂದು ಚಿಕ್ಕ ನಿಕಾಯವನ್ನು ರಚಿಸಲು ಉಪಬಂಧಿಸಿ ಸಹಕಾರಿ ಉಪವಿಧಿಗಳನ್ನು ತಿದ್ದುಪಡಿ ಮಾಡಬಹುದು."

12. 24ನೇ ಪ್ರಕರಣದ ಪ್ರತಿಯೋಜನೆ,– ಮೂಲ ಅಧಿನಿಯಮದ 24ನೇ ಪ್ರಕರಣಕ್ಕೆ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"24. **ಮಂಡಲಿಯ ರಚನೆ.–** ಪ್ರತಿಯೊಂದು ಸಹಕಾರಿಯ ಮಂಡಲಿಯು ಮುಖ್ಯಕಾರ್ಯನಿರ್ವಾಹಕನನ್ನು ಹೊರತುಪಡಿಸಿ ಹನ್ನೊಂದಕ್ಕಿಂತ ಕಡಿಮೆಯಿಲ್ಲದ, ಆದರೆ ಕೆಳಗೆ ನಿರ್ದಿಷ್ಟಪಡಿಸಿದಷ್ಟು ಸಂಖ್ಯೆಗಿಂತ ಹೆಚ್ಚಿಲ್ಲದ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:–

(1) ಪ್ರಾಥಮಿಕ ಮತ್ತು ಮಾಧ್ಯಮಿಕ ಸಹಕಾರಿಯ ಕಾರ್ಯಕ್ಷೇತ್ರವು–

(ಎ) ತಾಲ್ಲೂಕಿನ ಒಂದು ಭಾಗಕ್ಕೆ ವ್ಯಾಪಿಸಿದರೆ, ಹನ್ನೊಂದು ಸದಸ್ಯರು;

(ಬಿ) ಇಡೀ ತಾಲ್ಲೂಕಿಗೆ ವ್ಯಾಪಿಸಿದರೆ, ಹದಿಮೂರು ಸದಸ್ಯರು;

(ಸಿ) ತಾಲ್ಲೂಕನ್ನು ಮೀರಿದ ಆದರೆ ಜಿಲ್ಲೆಯನ್ನು ಮೀರದ ಪ್ರದೇಶಕ್ಕೆ ವ್ಯಾಪಿಸಿದರೆ, ಹದಿನೈದು ಸದಸ್ಯರು:

ಪರಂತು, ಒಂದು ಜಿಲ್ಲೆಯನ್ನು ಮೀರದ ಕಾರ್ಯಕ್ಷೇತ್ರವನ್ನು ಹೊಂದಿರುವ ಪಟ್ಟಣ ಸಹಕಾರ ಬ್ಯಾಂಕಿನ ಸಂಬಂಧದಲ್ಲಿ ಗರಿಷ್ಠ ಸಂಖ್ಯೆಯು ಹದಿನೇಳನ್ನು ಮೀರತಕ್ಕದ್ದಲ್ಲ.

(ಡಿ) ಜಿಲ್ಲೆಯನ್ನು ಮೀರಿ ವ್ಯಾಪಿಸಿದರೆ, ಹದಿನೇಳು ಸದಸ್ಯರು;

(ಇ) ಒಕ್ಕೂಟ ಸಹಕಾರಿಯಾಗಿದ್ದಲ್ಲಿ, ಹತ್ತೊಂಭತ್ತು ಸದಸ್ಯರು;

(ಎಫ್) ಸಂಯುಕ್ತ ಸಹಕಾರಿಯೂ ಸೇರಿದಂತೆ ಅಪೆಕ್ಸ್ ಸಹಕಾರಿಯಾಗಿದ್ದಲ್ಲಿ, ಇಪ್ಪತ್ತೊಂದು ಸದಸ್ಯರು:

ಪರಂತು ಬಿಡಿ ವ್ಯಕ್ತಿಗಳನ್ನು ಸದಸ್ಯರನ್ನಾಗಿ ಉಳ್ಳ ಸಹಕಾರಿಯ ಆಡಳಿತ ಮಂಡಲಿಯಲ್ಲಿ ಅನುಸೂಚಿತ ಜಾತಿ ಅಥವಾ ಅನುಸೂಚಿತ ಪಂಗಡಕ್ಕೆ ಒಂದು ಸ್ಥಾನವನ್ನು, ಮಹಿಳೆಯರಿಗಾಗಿ ಎರಡು ಸ್ಥಾನಗಳನ್ನು ಮತ್ತು ಹಿಂದುಳಿದ ವರ್ಗದವರಿಗೆ ಎರಡು ಸ್ಥಾನಗಳನ್ನು ಅಂತಹ ವರ್ಗದ ಅಥವಾ ಗುಂಪಿನ ವ್ಯಕ್ತಿಗಳು ಸದಸ್ಯರಾಗಿದ್ದಲ್ಲಿ, ಮೀಸಲಿಡತಕ್ಕದ್ದು:

ಮತ್ತು ಪರಂತು, ಪ್ರತಿಯೊಂದು ಸಹಕಾರಿಯು ಬ್ಯಾಂಕಿಂಗ್, ವ್ಯವಸ್ಥಾಪನೆ ಮತ್ತು ಹಣಕಾಸು ನಿರ್ವಹಣೆಯಲ್ಲಿ ಅನುಭವವಿರುವ ಅಥವಾ ಸಹಕಾರಿಯು ಕೈಗೊಂಡ ಚಟುವಟಿಕೆಗಳಿಗೆ ಮತ್ತು ಉದ್ದೇಶಗಳಿಗೆ ಸಂಬಂಧಿಸಿದ ಇತರೆ ಯಾವುದೇ ಕ್ಷೇತ್ರದಲ್ಲಿ ಪರಿಣತಿಯನ್ನು ಹೊಂದಿರುವ ವ್ಯಕ್ತಿಗಳನ್ನು, ಮಂಡಲಿಯ ಸದಸ್ಯರನ್ನಾಗಿ ಸಹಮತದಿಂದ (ಕೋಆಪ್ಟ್) ಸೇರಿಸಿಕೊಳ್ಳತಕ್ಕದ್ದು. ಹಾಗೆ ಸಹಮತದಿಂದ ಸೇರಿಸಿಕೊಂಡ ಸದಸ್ಯರು ಅಂತಹ ಸದಸ್ಯರ ಅಧಿಕಾರವುಳ್ಳವರಾಗಿ ಸಹಕಾರಿಯ ಯಾವುದೇ ಚುನಾವಣೆಯಲ್ಲಿ ಮತ ನೀಡುವ ಹಕ್ಕುವುಳ್ಳವರಾಗಿರತಕ್ಕದ್ದಲ್ಲ ಅಥವಾ ಮಂಡಲಿಯ ಪದಾಧಿಕಾರಿಗಳಾಗಿ ಚುನಾಯಿತರಾಗಲು ಅರ್ಹರಾಗಿರತಕ್ಕದ್ದಲ್ಲ:

ಮತ್ತೂ ಪರಂತು, ಹಾಗೆ ಸಹಮತದಿಂದ ಸೇರಿಸಿಕೊಂಡ ಸದಸ್ಯರ ಸಂಖ್ಯೆಯು (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಇಪ್ಪತ್ತೊಂದು ನಿರ್ದೇಶಕರಿಗೆ ಹೆಚ್ಚುವರಿಯಾಗಿ ಇಬ್ಬರನ್ನು ಮೀರತಕ್ಕದ್ದಲ್ಲ.

ಅಲ್ಲದೇ ಪರಂತು, ಒಂದು ಸಹಕಾರಿಯ ಮೂರಕ್ಕೆ ಮೀರದ ಕಾರ್ಯಾನುಗುಣ ನಿರ್ದೇಶಕರು (functional directors) ಸಹ ಆಡಳಿತ ಮಂಡಲಿಯ ಸದಸ್ಯರಾಗಿರತಕ್ಕದ್ದು, ಹಾಗೂ (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಒಟ್ಟು ನಿರ್ದೇಶಕರ ಸಂಖ್ಯೆಯನ್ನು ಎಣಿಸುವಾಗ ಅಂತಹ ಕಾರ್ಯಾನುಗುಣ ನಿರ್ದೇಶಕರನ್ನು ಹೊರತುಪಡಿಸತಕ್ಕದ್ದು.

(2) ಚುನಾಯಿತ ನಿರ್ದೇಶಕರುಗಳ ಪದಾವಧಿಯು ಚುನಾವಣೆ ನಡೆದ ದಿನಾಂಕದಿಂದ ಐದು ವರ್ಷಗಳಾಗಿರತಕ್ಕದ್ದು.

(3) ಮುಖ್ಯಕಾರ್ಯನಿರ್ವಾಹಕನು ಆಡಳಿತ ಮಂಡಲಿಯ ಪದನಿಮಿತ್ತ ನಿರ್ದೇಶಕನಾಗಿರತಕ್ಕದ್ದು ಹಾಗೂ ಪದಾಧಿಕಾರಿಗಳ ಚುನಾವಣೆಯಲ್ಲಿ ಮತದಾನದ ಹಕ್ಕನ್ನು ಹೊಂದಿರತಕ್ಕದಲ್ಲ".

13. 25ನೇ ಪ್ರಕರಣದ ತಿದ್ದುಪಡಿ,– ಮೂಲ ಅಧಿನಿಯಮದ 25ನೇ ಪ್ರಕರಣದಲ್ಲಿ,

(i) (1)ನೇ ಉಪಪ್ರಕರಣದಲ್ಲಿ "ಅಂಥ ವ್ಯಕ್ತಿಯು ನಿರ್ದೇಶಕನಾಗಿ ಚುನಾಯಿತನಾಗಲು ಅಥವಾ ಮುಂದುವರೆಯಲು ಅನರ್ಹನಾಗತಕ್ಕದ್ದು" ಎಂಬ ಪದಗಳ ನಂತರ "ಹಾಗೂ ಅನರ್ಹತೆಗೆ ಗುರಿಯಾದ ದಿನಾಂಕದಿಂದ ಐದು ವರ್ಷಗಳ ಅವಧಿಯವರೆಗೆ ಸದರಿ ಸಹಕಾರಿಯ ನಿರ್ದೇಶಕರಾಗಿ ಚುನಾಯಿತರಾಗಲು ಅಥವಾ ಮುಂದುವರೆಯಲು ಅನರ್ಹರಾಗಿರತಕ್ಕದ್ದು" ಎಂಬ ಪದಗಳನ್ನು ಸೇರಿಸತಕ್ಕದ್ದು.

(ii) (2)ನೇ ಉಪ ಪ್ರಕರಣದ (ಎ) ಖಂಡಕ್ಕೆ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(ಎ) ಮಂಡಲಿಯ ನಿರ್ದೇಶಕರ ಪದಾವಧಿ ಮುಕ್ತಾಯವಾಗುವುದಕ್ಕೆ ಮೊದಲು ಚುನಾವಣೆಗಳನ್ನು ನಡೆಸಲು ಸಹಕಾರ ಚುನಾವಣಾ ಆಯೋಗಕ್ಕೆ ಅಗತ್ಯ ನೆರವು ನೀಡದಿದ್ದರೆ ಅಥವಾ ತತ್ಪರಿಣಾಮವಾಗಿ ಅಥವಾ ಅನ್ಯಥಾ ಯಾವುದೇ ಕಾರಣದಿಂದ ಸಹಕಾರ ಚುನಾವಣಾ ಆಯೋಗವು ನಿಗದಿತ ಅವಧಿಯೊಳಗೆ ಚುನಾವಣೆಗಳನ್ನು ನಡೆಸದಿದ್ದರೆ; ಅಥವಾ

(ಎ–1) ಸಹಕಾರ ವರ್ಷ ಮುಕ್ತಾಯವಾದ ಆರು ತಿಂಗಳೊಳಗೆ 34ನೇ ಪ್ರಕರಣದಡಿ ರಿಜಿಸ್ಟ್ರಾರನಿಗೆ ಹಾಗೂ ಸಂಯುಕ್ತ ಸಹಕಾರಿಗೆ ವಿಧ್ಯುಕ್ತ ವರದಿಗಳನ್ನು (ರಿರ್ಟನ್ಸ್) ಮತ್ತು ಮಾಹಿತಿಯನ್ನು ಸಲ್ಲಿಸದಿದ್ದರೆ; ಅಥವಾ

(ಎ–2) ಗಂಭೀರ ಹಣಕಾಸು ಅಕ್ರಮಗಳನ್ನು ಅಥವಾ ವಂಚನೆಯನ್ನು ಎಸಗಿರುವುದು ಕಂಡು ಬಂದರೆ; ಅಥವಾ"

(iii) (2) ನೇ ಉಪಪ್ರಕರಣದ (ಬಿ) ಖಂಡದಲ್ಲಿ, "ವರ್ಷ ಮುಕ್ತಾಯವಾದ ಆರು ತಿಂಗಳಿನೊಳಗೆ" ಎಂಬ ಪದಗಳಿಗೆ, "ಪ್ರತಿವರ್ಷ ಸೆಪ್ಟಂಬರ್ ತಿಂಗಳ ಇಪ್ಪತ್ತೈದರೊಳಗೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(iv) (2) ನೇ ಉಪಪ್ರಕರಣದ (ಸಿ) ಖಂಡದಲ್ಲಿ, "ಹಿಂದಿನ ವರ್ಷದ" ಎಂಬ ಪದಗಳಿಗೆ, "ಹಿಂದಿನ ಸಹಕಾರ ವರ್ಷದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

14. 26ನೇ ಪ್ರಕರಣದ ಪ್ರತಿಯೋಜನೆ.– ಮೂಲ ಅಧಿನಿಯಮದ 26 ನೇ ಪ್ರಕರಣಕ್ಕೆ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"26 ಮಂಡಲಿಯ ಚುನಾವಣೆ.– (1)– ಹೊಸದಾಗಿ ಚುನಾಯಿತವಾದ ಮಂಡಲಿಯ ಸದಸ್ಯರು ನಿರ್ಗಮಿಸುತ್ತಿರುವ ಮಂಡಲಿಯ ಪದಾವಧಿ ಮುಕ್ತಾಯವಾದ ಕೂಡಲೇ ಪದಧಾರಣ ಮಾಡಲು ಅನುವಾಗುವಂತೆ ಮಂಡಲಿಯ ಸದಸ್ಯರ ಚುನಾವಣೆಯನ್ನು ನಿರ್ಗಮಿಸುತ್ತಿರುವ ಮಂಡಲಿಯ ಪದಾವಧಿ ಮುಕ್ತಾಯವಾಗುವ ನಿಕಟಪೂರ್ವದಲ್ಲಿ ನಡೆಸತಕ್ಕದ್ದು.

(2) ಪ್ರತಿಯೊಂದು ಸಹಕಾರಿಯ ಚುನಾವಣೆಯನ್ನು ಸಹಕಾರ ಚುನಾವಣಾ ಆಯೋಗವು ನಿರ್ವಹಿಸತಕ್ಕದ್ದು.

(3) ಹೊಸದಾಗಿ ಚುನಾಯಿತರಾದ ಮಂಡಳಿಯ ನಿರ್ದೇಶಕರು, ನಿರ್ಗಮಿಸುತ್ತಿರುವ ಮಂಡಲಿಯ ಪದಾವಧಿ ಮುಕ್ತಾಯವಾದ ಕೂಡಲೇ ಪದಧಾರಣ ಮಾಡತಕ್ಕದ್ದು.

(4) ಈ ಅಧಿನಿಯಮದಲ್ಲಿ, ನಿಯಮಗಳಲ್ಲಿ ಅಥವಾ ಯಾವುದೇ ಸಹಕಾರಿಯ ಉಪವಿಧಿಗಳಲ್ಲಿ ಏನೇ ಒಳಗೊಂಡಿದ್ದರೂ, 2013 ರ ಮಾರ್ಚ್ ಮತ್ತು ಏಪ್ರಿಲ್ ತಿಂಗಳಲ್ಲಿ ಬಾಕಿಯಿರುವ ಪ್ರತಿ ಸಹಕಾರಿಯ ಆಡಳಿತ ಮಂಡಲಿಗೆ ಚುನಾವಣೆಯನ್ನು ಮತ್ತು ತತ್ಪರಿಣಾಮದ ಪದಾಧಿಕಾರಿಗಳ ಚುನಾವಣೆಯನ್ನು;

(ಎ) ಪ್ರಾಥಮಿಕ ಸಹಕಾರಿಗಳ ಸಂಬಂಧದಲ್ಲಿ, 2013 ರ ಸೆಪ್ಟಂಬರ್ ತಿಂಗಳ ಮೂವತ್ತನೇ ದಿನದೊಳಗೆ;

(ಬಿ) ಮಾಧ್ಯಮಿಕ ಸಹಕಾರಿಗಳ ಸಂಬಂಧದಲ್ಲಿ, 2013 ರ ಅಕ್ಟೋಬರ್ ತಿಂಗಳ ಮೂವತ್ತೊಂದನೇ ದಿನದೊಳಗೆ;

(ಸಿ) ಒಕ್ಕೂಟ ಸಹಕಾರಿಯ ಸಂಬಂಧದಲ್ಲಿ, 2013ರ ನವೆಂಬರ್ ತಿಂಗಳ ಮೂವತ್ತನೇ ದಿನದೊಳಗೆ;

(ಡಿ) ಸಂಯುಕ್ತ ಸಹಕಾರಿಯೂ ಸೇರಿದಂತೆ ಅಪೆಕ್ಸ್ ಸಹಕಾರಿಗಳ ಸಂಬಂಧದಲ್ಲಿ, 2013 ರ ಡಿಸೆಂಬರ್ ತಿಂಗಳ ಮೂವತ್ತೊಂದನೇ ದಿನದೊಳಗೆ;

– ನಡೆಸತಕ್ಕದ್ದು;

ಪರಂತು, ಅಂಥ ಪ್ರತಿ ಸಹಕಾರಿಯ ನಿರ್ಗಮಿಸುತ್ತಿರುವ ಆಡಳಿತ ಮಂಡಲಿಯು ಮೇಲಿನಂತೆ ಚುನಾವಣೆಯನ್ನು ನಡೆಸುವ ದಿನಾಂಕದವರೆಗೂ ತನ್ನ ಪದದಲ್ಲಿ ಮುಂದುವರಿಯತಕ್ಕದ್ದು".

15. **26ಎ ಪ್ರಕರಣದ ಹೊಸ ಸೇರ್ಪಡೆ,**– ಮೂಲ ಅಧಿನಿಯಮದ 26ನೇ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"**26ಎ,– ಸಹಕಾರ ಚುನಾವಣಾ ಆಯೋಗ**– ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ 39ಎಎ ಪ್ರಕರಣದ ಅಡಿಯಲ್ಲಿ ರಚಿಸಲ್ಪಟ್ಟಿರುವ ಚುನಾವಣಾ ಆಯೋಗವು ಈ ಅಧಿನಿಯಮದ ಅಡಿಯಲ್ಲಿ ಚುನಾವಣೆಗಳನ್ನು ನಡೆಸಲೂ ಸಹ ಚುನಾವಣಾ ಆಯೋಗವಾಗಿರತಕ್ಕದ್ದು. ಮತ್ತು ಈ ಅಧಿನಿಯಮದಡಿಯಲ್ಲಿ ಸಂಯುಕ್ತ ಸಹಕಾರಿಯೂ ಸೇರಿದಂತೆ ಸಹಕಾರಿಗಳಿಗೆ ಸಂಬಂಧಿಸಿದಂತೆ ಸದರಿ ಅಧಿನಿಯಮದ ಅಡಿಯಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಹೊಂದಿರತಕ್ಕದ್ದು ಮತ್ತು ಅದೇ ರೀತಿಯ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು."

16. 27ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 27ನೇ ಪ್ರಕರಣದ (1)ನೇ ಉಪ ಪ್ರಕರಣದ (ಹೆಚ್) ಖಂಡದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"**(ಹೆಚ್–1)** ವಿಚಾರಣಾ ವರದಿ ಯಾವುದಾದರೂ ಇದ್ದಲ್ಲಿ, ಪರಿಶೀಲಿಸಿ, ವಿಚಾರಣೆಯಲ್ಲಿ ತೋರಿಸಲಾದ ಅಕ್ರಮಗಳು ಯಾವುದಾದರೂ ಇದ್ದಲ್ಲಿ, ಅವುಗಳನ್ನು ಸರಿಪಡಿಸಲು ಕೈಗೊಂಡ ಕ್ರಮಗಳ ಪಾಲನಾ ವರದಿಯನ್ನು ಪರಿಶೀಲಿಸಲು ಮತ್ತು ಅದನ್ನು ಸಾಮಾನ್ಯ ನಿಕಾಯದ ಮುಂದೆ ಮಂಡಿಸಲು;

(ಹೆಚ್–2) ಪ್ರತಿವರ್ಷ ಸೆಪ್ಟಂಬರ್ ತಿಂಗಳ ಒಂದರೊಳಗೆ ಹಿಂದಿನ ಸಹಕಾರ ವರ್ಷದ ಲೆಕ್ಕ ಪತ್ರಗಳನ್ನು ಪರಿಶೋಧಿಸಿಕೊಡುವಂತೆ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಪಡೆಯುವಂತೆ ಮಾಡಲು;

(ಹೆಚ್–3) ಪ್ರತಿ ವರ್ಷ ಸೆಪ್ಟಂಬರ್ ತಿಂಗಳ ಇಪ್ಪತ್ತೈದರೊಳಗೆ ವಾರ್ಷಿಕ ಸಾಮಾನ್ಯ ಸಭೆಯನ್ನು ನಡೆಸಲು;

(ಹೆಚ್–4) ಅಗತ್ಯವಿದ್ದಾಗಲೆಲ್ಲ ಅಥವಾ ಕೋರಿಕೆಯ ಮೇರೆಗೆ ವಿಶೇಷ ಸಾಮಾನ್ಯ ಸಭೆಯನ್ನು ನಡೆಸಲು;

(ಹೆಚ್–5) ಪ್ರತಿ ವರ್ಷ ಸೆಪ್ಟಂಬರ್ ಮೂವತ್ತರೊಳಗಾಗಿ ರಿಜಿಸ್ಟ್ರಾರನಿಗೆ ಹಾಗೂ ಸಂಯುಕ್ತ ಸಹಕಾರಿಗೆ ವಿಧ್ಯುಕ್ತ ವರದಿಗಳನ್ನು ಮತ್ತು ಮಾಹಿತಿಯನ್ನು ಸಲ್ಲಿಸಲು;"

17. 28ನೇ ಪ್ರಕರಣದ ತಿದ್ದುಪಡಿ,– ಮೂಲ ಅಧಿನಿಯ*ಮದ 28ನೇ ಪ್ರಕರಣದಲ್ಲಿ,*

(i) (1)ನೇ ಉಪ ಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(1) ಮಂಡಲಿಯ ಚುನಾವಣೆ ನಡೆದ ದಿನಾಂಕದಿಂದ ಹದಿನೈದು ದಿನಗಳೊಳಗೆ ಸಹಕಾರ ಚುನಾವಣಾ ಆಯೋಗವು ಅಧ್ಯಕ್ಷ ಅಥವಾ ಸಭಾಪತಿ, ಉಪಾಧ್ಯಕ್ಷ ಅಥವಾ ಉಪಸಭಾಪತಿ ಮತ್ತು ಉಪವಿಧಿಗಳ ಪ್ರಕಾರ ಚುನಾಯಿಸಬೇಕಾದ ಇತರ ಪದಾಧಿಕಾರಿಗಳನ್ನು ಚುನಾಯಿಸಲು ಕ್ರಮ ತೆಗೆದುಕೊಳ್ಳತಕ್ಕದ್ದು."

(ii) (3)ನೇ ಉಪ ಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(3) ಅಧ್ಯಕ್ಷ ಅಥವಾ ಸಭಾಪತಿ, ಉಪಾಧ್ಯಕ್ಷ ಅಥವಾ ಉಪ ಸಭಾಪತಿ ಮತ್ತು ಇತರ ಪದಾಧಿಕಾರಿಗಳ ಪದಾವಧಿಯು ಚುನಾವಣೆ ನಡೆದ ದಿನಾಂಕದಿಂದ ಐದು ವರ್ಷಗಳಾಗಿರತಕ್ಕದ್ದು ಹಾಗೂ ಮಂಡಲಿಯ ಅವಧಿಯ ಜೊತೆಗೆ ಅಂತ್ಯವಾಗತಕ್ಕದ್ದು."

18. 29ನೇ ಪ್ರಕರಣದ ಪ್ರತಿಯೋಜನೆ,– ಮೂಲ ಅಧಿನಿಯಮದ 29ನೇ ಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"29 ಆಕಸ್ಮಿಕ ರಿಕ್ತತೆಗಳನ್ನು ತುಂಬುವುದು.– ಮಂಡಲಿಯು ತನ್ನ ಮೂಲ ಪದಾವಧಿಯ ಅರ್ಧದಷ್ಟಕ್ಕಿಂತ ಕಡಿಮೆ ಉಳಿದಿದ್ದಾಗ ಮಾತ್ರ, ಆಡಳಿತ ಮಂಡಲಿಯಲ್ಲಿ ಉಂಟಾಗುವ ಆಕಸ್ಮಿಕ ರಿಕ್ತತೆಗಳನ್ನು ಯಾವ ವರ್ಗದ ಸದಸ್ಯರ ಸಂಬಂಧದಲ್ಲಿ ಆಕಸ್ಮಿಕ ರಿಕ್ತತೆ ಉಂಟಾಗಿದೆಯೋ ಅದೇ ವರ್ಗದ ಸದಸ್ಯರೊಳಗೆ ನಾಮನಿರ್ದೇಶನ ಮಾಡುವ ಮೂಲಕ ಭರ್ತಿ ಮಾಡಿಕೊಳ್ಳಬಹುದು."

19. 30ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 30ನೇ ಪ್ರಕರಣದಲ್ಲಿ,–

(i) (1)ನೇ ಉಪಪ್ರಕರಣಕ್ಕೆ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(1) ಆಡಳಿತ ಮಂಡಲಿಯು, ಒಂದು ಸಹಕಾರಿ ವರ್ಷದಲ್ಲಿ ತನ್ನ ಅಗತ್ಯಕ್ಕೆ ತಕ್ಕಂತೆ ಅಗತ್ಯವಾದಷ್ಟು ಮಂಡಲಿಯ ಸಭೆಗಳನ್ನು ಮತ್ತು ಸಾಮಾನ್ಯ ಸಭೆಗಳನ್ನು ಕರೆಯಬಹುದು, ಆದರೆ ಕನಿಷ್ಠ ಪಕ್ಷ ಪ್ರತಿ ಎರಡು ತಿಂಗಳಲ್ಲಿ ಒಂದು ಮಂಡಲಿಯ ಸಭೆಯನ್ನು ಮತ್ತು ಪ್ರತಿ ವರ್ಷದ ಸೆಪ್ಟಂಬರ್ ತಿಂಗಳ ಇಪ್ಪತ್ತೈದರೊಳಗಾಗಿ, 23 ನೇ ಪ್ರಕರಣದ (3) ನೇ ಉಪ ಪ್ರಕರಣದಲ್ಲಿ ಉಕ್ತವಾಗಿರುವ ಕಾರ್ಯಕಲಾಪಗಳನ್ನು ನಿರ್ವಹಿಸಲು, ಒಂದು ವಾರ್ಷಿಕ ಸಾಮಾನ್ಯ ಸಭೆಯನ್ನು ಕರೆಯತಕ್ಕದ್ದು".

(ii) (2)ನೇ ಉಪಪ್ರಕರಣದಲ್ಲಿ, "ನಲವತ್ತೈದು" ಎಂಬ ಪದಕ್ಕೆ "ಮೂವತ್ತು" ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು.

(iii) (3)ನೇ ಉಪಪ್ರಕರಣದಲ್ಲಿ "ತೊಂಭತ್ತು", ಎಂಬ ಪದಕ್ಕೆ, "ನಲವತ್ತೈದು" ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು.

(iv) (3) ನೇ ಉಪಪ್ರಕರಣದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ –

"(4) ಯಾವುದೇ ಸಾಮಾನ್ಯ ಸಭೆಯ ಕೋರಂ ಉಪವಿಧಿಗಳಲ್ಲಿ ನಿಗದಿಪಡಿಸಬಹುದಾದಷ್ಟು ಇರತಕ್ಕದ್ದು. ಆದರೆ ಅಂತಹ ಕೋರಂ ಸಾಮಾನ್ಯ ನಿಕಾಯದ ಒಟ್ಟು ಮತದಾನ ಹಕ್ಕುಳ್ಳ ಸದಸ್ಯರ ಶೇಕಡ ಇಪ್ಪತ್ತಕ್ಕಿಂತ ಕಡಿಮೆ ಇರತಕ್ಕದ್ದಲ್ಲ ಹಾಗೂ ಪ್ರಾತಿನಿಧಿಕ ಸಾಮಾನ್ಯ ಸಭೆಯ ಕೋರಂ ಸಾಮಾನ್ಯ ನಿಕಾಯದ ಒಟ್ಟು ಮತದಾನದ ಹಕ್ಕುಳ್ಳ ಪ್ರತಿನಿಧಿಗಳ ಶೇಕಡ ಅರವತ್ತಕ್ಕಿಂತ ಕಡಿಮೆ ಇರತಕ್ಕದ್ದಲ್ಲ. ಯಾವುದೇ ಸಾಮಾನ್ಯ ಸಭೆಯಲ್ಲಿ ಯಾವುದೇ ಕಲಾಪದ ಚರ್ಚೆಯ ಸಮಯದಲ್ಲಿ ಕೋರಂ ಇಲ್ಲದಿದ್ದ ಪಕ್ಷದಲ್ಲಿ, ಅಂಥ ಸಭೆಯ ಕಲಾಪವನ್ನು ನಡೆಸತಕ್ಕದ್ದಲ್ಲ.

(5) ಮಂಡಳಿಯ ಸಭೆಯ ಕೋರಂ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಬಹುದಾದಷ್ಟು ಇರತಕ್ಕದ್ದು. ಆದರೆ ಅಂಥಹ ಕೋರಂ ಮಂಡಳಿಯ ಒಟ್ಟು ಸದಸ್ಯರ ಶೇಕಡಾ ಐವತ್ತರ ನಂತರದ ಸಂಖ್ಯೆಗಿಂತ ಕಡಿಮೆ ಇರತಕ್ಕದ್ದಲ್ಲ. ಯಾವುದೇ ಮಂಡಳಿಯ ಸಭೆಯಲ್ಲಿ ಯಾವುದೇ ಕಲಾಪದ ಚರ್ಚೆಯ ಸಮಯದಲ್ಲಿ ಕೋರಂ ಇಲ್ಲದಿದ್ದ ಪಕ್ಷದಲ್ಲಿ, ಅಂಥ ಸಭೆಯ ಕಲಾಪವನ್ನು ನಡೆಸತಕ್ಕದ್ದಲ್ಲ.

20. 31ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 31ನೇ ಪ್ರಕರಣದಲ್ಲಿ, 2ನೇ ಉಪಪ್ರಕರಣದ,

(i) (ಎಫ್) ಖಂಡದಲ್ಲಿ "ವರ್ಷ ಮುಕ್ತಾಯವಾದ ಅರವತ್ತು ದಿನಗಳೊಳಗೆ" ಎಂಬ ಪದಗಳಿಗೆ, "ಸಹಕಾರ ವರ್ಷ ಮುಕ್ತಾಯವಾದ ಮೂವತ್ತು ದಿನಗಳೊಳಗೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ii) ಖಂಡ (ಐ) ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು; ಎಂದರೆ –

"(ಐ–1) ಸಹಕಾರಿಯ ವಾರ್ಷಿಕ ಲೆಕ್ಕಪರಿಶೋಧನೆಗೆ ಅಗತ್ಯವಾದ ಆರ್ಥಿಕ ತ:ಖ್ತೆಗಳನ್ನು, ಅನುಸೂಚಿಗಳನ್ನು ಮತ್ತು ಇತರೆ ತ:ಖ್ತೆಗಳನ್ನು ತಯಾರಿಸಿ ಮಂಡಳಿಯ ಅನುಮೋದನೆಯನ್ನು ಪಡೆದು ಸಂಬಂಧಪಟ್ಟ ಲೆಕ್ಕಪುಸ್ತಕಗಳನ್ನು, ದಾಖಲೆಗಳನ್ನು ಮತ್ತು ಇತರ ದಸ್ತಾವೇಜುಗಳನ್ನು ಸಹಕಾರ ವರ್ಷ ಮುಕ್ತಾಯವಾದ ಮೂವತ್ತು ದಿನಗಳೊಳಗೆ ಲೆಕ್ಕಪರಿಶೋಧಕರಿಗೆ ಒದಗಿಸತಕ್ಕದ್ದು.

(ಐ–2) ಲೆಕ್ಕಪರಿಶೋಧನಾ ವರದಿಯಲ್ಲಿ ಕಂಡುಬರುವ ಲೋಪದೋಷಗಳನ್ನು ಸರಿಪಡಿಸಲು ತೆಗೆದುಕೊಳ್ಳಬೇಕಾದ ಕ್ರಮಗಳನ್ನು ಪ್ರಸ್ತಾಪಿಸಿ ಮಂಡಳಿಯ ಮುಂದೆ ಮಂಡಿಸಿ ಅನುಮೋದನೆಯನ್ನು ಪಡೆಯತಕ್ಕದ್ದು ಮತ್ತು ಅದರಂತೆ ಕ್ರಮ ಕೈಗೊಳ್ಳತಕ್ಕದ್ದು.

(ಐ–3) ವಿಚಾರಣಾ ವರದಿ ಏನಾದರೂ ಇದ್ದರೆ ಅದರಲ್ಲಿ ಕಂಡುಬರುವ ಲೋಪದೋಷಗಳನ್ನು ಸರಿಪಡಿಸಲು ತೆಗೆದುಕೊಳ್ಳಬೇಕಾದ ಕ್ರಮಗಳನ್ನು ಪ್ರಸ್ತಾಪಿಸಿ ಮಂಡಳಿಯ ಮುಂದೆ ಮಂಡಿಸಿ ಅನುಮೋದನೆ ಪಡೆಯತಕ್ಕದ್ದು ಮತ್ತು ಅದರಂತೆ ಕ್ರಮ ಕೈಗೊಳ್ಳತಕ್ಕದ್ದು.

(ಐ–4) ಮಂಡಳಿಯ ಪದಾವಧಿ ಮುಕ್ತಾಯವಾಗುವ ಪೂರ್ವದಲ್ಲಿ ಚುನಾವಣೆ ನಡೆಸಲು ಅಗತ್ಯವಾದ ಮಾಹಿತಿ ಮತ್ತು ನೆರವನ್ನು ಸಹಕಾರ ಚುನಾವಣಾ ಆಯೋಗಕ್ಕೆ ನೀಡತಕ್ಕದ್ದು.

(ಐ–5) 34ನೇ ಪ್ರಕರಣಕ್ಕೆ ಅನುಸಾರವಾಗಿ ರಿಜಿಸ್ಟ್ರಾರನಿಗೆ ಮತ್ತು ಸಂಯುಕ್ತ ಸಹಕಾರಿಗೆ ಸಲ್ಲಿಸಬೇಕಾದ ವಿಧ್ಯುಕ್ತ ವರದಿಗಳನ್ನು ಮತ್ತು ಮಾಹಿತಿಗಳನ್ನು ಪ್ರತಿವರ್ಷ ಸೆಪ್ಟಂಬರ್ ಮೂವತ್ತರೊಳಗೆ ರಿಜಿಸ್ಟ್ರಾರನಿಗೆ ಹಾಗೂ ಸಂಯುಕ್ತ ಸಹಕಾರಿಗೆ ಸಲ್ಲಿಸತಕ್ಕದ್ದು.

(ಐ–6) ಮಂಡಳಿಯಲ್ಲಿ ರಿಕ್ತತೆಗಳು ಉಂಟಾದಾಗ, ಆ ಬಗ್ಗೆ ಸಹಕಾರ ಚುನಾವಣಾ ಆಯೋಗಕ್ಕೆ ಮಾಹಿತಿಯನ್ನು ಸಲ್ಲಿಸತಕ್ಕದ್ದು."

21. 32ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 32ನೇ ಪ್ರಕರಣದಲ್ಲಿ,

(i) (1) ನೇ ಉಪಪ್ರಕರಣದ, (ಡಿ)ಖಂಡದಲ್ಲಿ "ವರ್ಷದ ಮುಕ್ತಾಯದ" ಎಂಬ ಪದಗಳಿಗೆ, "ಸಹಕಾರ ವರ್ಷ ಮುಕ್ತಾಯದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ii) (1)ನೇ ಉಪಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"(1ಎ) ಪ್ರತಿಯೊಂದು ಸಹಕಾರಿಯ ಪ್ರತಿ ಸದಸ್ಯನಿಗೆ ಸಂಬಂಧಪಟ್ಟಂತೆ ತನ್ನ ದೈನಂದಿನ ವ್ಯವಹಾರದಲ್ಲಿ ನಿರ್ವಹಿಸುವ ಪುಸ್ತಕಗಳನ್ನು, ಲೆಕ್ಕಪತ್ರಗಳನ್ನು, ತತ್ಸಂಬಂಧದ ಮಾಹಿತಿಗಳನ್ನು ನೋಡಲು ಅವಕಾಶ ಕಲ್ಪಿಸತಕ್ಕದ್ದು."

22. 32ಎ ಪ್ರಕರಣವನ್ನು ಬಿಟ್ಟುಬಿಡುವುದು.– ಮೂಲ ಅಧಿನಿಯಮದ 32ಎ ಪ್ರಕರಣವನ್ನು ಬಿಟ್ಟುಬಿಡತಕ್ಕದ್ದು.

23. 33ನೇ ಪ್ರಕರಣದ ಪ್ರತಿಯೋಜನೆ:– ಮೂಲ ಅಧಿನಿಯಮದ 33ನೇ ಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು; ಎಂದರೆ:–

"**33 ಲೆಕ್ಕಪರಿಶೋಧನೆ–** (1) ಪ್ರತಿಯೊಂದು ಸಹಕಾರಿಯು ಕನಿಷ್ಠ ವರ್ಷಕ್ಕೊಮ್ಮೆಯಾದರು ತನ್ನ ಲೆಕ್ಕಪತ್ರಗಳನ್ನು ಪ್ರತಿ ಸಹಕಾರಿ ವರ್ಷದ ಮುಕ್ತಾಯದ ನಂತರ ಮುಂಬರುವ ಸೆಪ್ಟಂಬರ್ ತಿಂಗಳ ಒಂದರೊಳಗಾಗಿ ಸಹಕಾರ ಲೆಕ್ಕಪರಿಶೋಧನಾ ನಿರ್ದೇಶಕನು ಅನುಮೋದಿಸಿದ ಲೆಕ್ಕಪರಿಶೋಧಕರ ಮತ್ತು ಲೆಕ್ಕಪರಿಶೋಧಿಸುವ ಸಂಸ್ಥೆಗಳ ಪಟ್ಟಿಯಲ್ಲಿರುವ ಹಾಗೂ ಸದರಿ ಸಹಕಾರಿಯ ಸಾಮಾನ್ಯ ನಿಕಾಯದಿಂದ ನೇಮಕವಾದ ಲೆಕ್ಕಪರಿಶೋಧಕರಿಂದ ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಯಿಂದ ಪರಿಶೋಧನೆ ಮಾಡಿಸತಕ್ಕದ್ದು.

ಪರಂತು ಸಹಕಾರ ಲೆಕ್ಕಪರಿಶೋಧನಾ ನಿರ್ದೇಶಕನು ರಾಜ್ಯದಲ್ಲಿರುವ ಸಹಕಾರಿಗಳ ಲೆಕ್ಕ ಪತ್ರಗಳನ್ನು ಪರಿಶೋಧಿಸಲು ನಿಗದಿಪಡಿಸಿದ ವಿದ್ಯಾರ್ಹತೆ ಮತ್ತು ಅನುಭವಗಳನ್ನು ಹೊಂದಿರುವ ಲೆಕ್ಕಪರಿಶೋಧಕರ ಮತ್ತು ಲೆಕ್ಕಪರಿಶೋಧಿಸುವ ಸಂಸ್ಥೆಗಳ ಪಟ್ಟಿಯನ್ನು ತಯಾರಿಸಲು ಮತ್ತು ನಿರ್ವಹಿಸಲು ಸಕ್ಷಮನಾದ ಪ್ರಾಧಿಕಾರವಾಗಿರತಕ್ಕದ್ದು.

ಮತ್ತು ಪರಂತು ಸಹಕಾರ ವರ್ಷವು ಮುಕ್ತಾಯವಾದ ಮೂವತ್ತು ದಿನಗಳೊಳಗೆ ಸಹಕಾರ ಲೆಕ್ಕಪರಿಶೋಧನಾ ನಿರ್ದೇಶಕನು ಹತ್ತಕ್ಕೆ ಮೀರದಂಥ ಲೆಕ್ಕಪರಿಶೋಧಕರ ಮತ್ತು ಲೆಕ್ಕಪರಿಶೋಧಿಸುವ ಸಂಸ್ಥೆಗಳ ತಂಡದ ಪಟ್ಟಿಯನ್ನು ಪ್ರತಿಯೊಂದು ಸಹಕಾರಿಗೆ ಕಳುಹಿಸತಕ್ಕದ್ದು.

(2) ಪ್ರತಿಯೊಂದು ಸಹಕಾರಿಯ ಸಾಮಾನ್ಯ ನಿಕಾಯವು ತನ್ನ ಸಾಮಾನ್ಯ ಸಭೆಯಲ್ಲಿ ಸದರಿ ಸಹಕಾರಿಯ ಆ ಸಹಕಾರ ವರ್ಷದ ಲೆಕ್ಕಪತ್ರಗಳನ್ನು ಪರಿಶೋಧಿಸಲು ಒಬ್ಬ ಲೆಕ್ಕಪರಿಶೋಧಕನನ್ನು ಅಥವಾ ಒಂದು ಲೆಕ್ಕಪರಿಶೋಧಿಸುವ ಸಂಸ್ಥೆಯನ್ನು ನೇಮಿಸತಕ್ಕದ್ದು.

(3) ಸಹಕಾರ ಲೆಕ್ಕಪರಿಶೋಧನಾ ನಿರ್ದೇಶಕನು ಲೆಕ್ಕಪರಿಶೋಧಕರ ಮತ್ತು ಲೆಕ್ಕಪರಿಶೋಧಿಸುವ ಸಂಸ್ಥೆಗಳ ಪಟ್ಟಿಯನ್ನು ತಯಾರಿಸುವ ರೀತಿಯು ಹಾಗೂ ಪ್ರತಿ ಸಹಕಾರಿಗೆ ತಂಡದ ಪಟ್ಟಿಯನ್ನು ಕಳುಹಿಸುವ ಕಾರ್ಯವಿಧಾನವು ನಿಯಮಿಸಬಹುದಾದಂತೆ ಇರತಕ್ಕದ್ದು.

(4) ಈ ಪ್ರಕರಣದ (1)ನೇ ಉಪಪ್ರಕರಣದಡಿ ಲೆಕ್ಕಪರಿಶೋಧನೆಯು, ಸುಸ್ತಿಯಾದ ಋಣಗಳು ಯಾವುದಾದರೂ ಇದ್ದರೆ ಅವುಗಳ ಪರಿವೀಕ್ಷಣೆ, ಆಸ್ತಿಗಳ ಮತ್ತು ಹೊಣೆಗಳ ಭೌತಿಕ ಪರಿಶೀಲನೆ ಮತ್ತು ಮೌಲ್ಯನಿರ್ಧಾರಣೆ, ನಗದು ಶಿಲ್ಕಿನ ಮತ್ತು ಭದ್ರತಾ ಪತ್ರಗಳ ಪರಿಶೀಲನೆ, ಲಾಭ ಅಥವಾ ನಷ್ಟದ ದೃಢೀಕರಣ, ಭಾರತೀಯ ರಿಸರ್ವ್ ಬ್ಯಾಂಕಿನ ಅಥವಾ ನಬಾರ್ಡಿನ ಸೂಚನೆಗಳು ಮತ್ತು ನಿರ್ದೇಶನಗಳನ್ನೊಳಗೊಂಡಂತೆ ಸಹಕಾರಿ ಸಂಸ್ಥೆಗಳಿಗೆ ಅನ್ವಯವಾಗುವ ಇತರ ಕಾನೂನುಗಳ ಮತ್ತು ಪಾರದರ್ಶಕತೆ ಕಾನೂನಿನ ಪಾಲನೆ ಹಾಗೂ ಸಹಕಾರಿಯ ಕಾರ್ಯನಿರ್ವಹಣೆ ಮತ್ತು ನಿಯಮಿಸಲಾದ ಇತರ ವಿವರಗಳ ಪರಿವೀಕ್ಷಣೆ ಇವುಗಳನ್ನು ಒಳಗೊಂಡಿರತಕ್ಕದ್ದು.

(5) ಲೆಕ್ಕಪರಿಶೋಧಕನು ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಯು ಸಹಕಾರಿಗೆ ಸೇರಿದ ಮತ್ತು ಅದರ ಅಭಿರಕ್ಷೆಯಲ್ಲಿರುವ ಅಥವಾ ಸಹಕಾರಿಯ ಆಡಳಿತ ಮಂಡಳಿಯ ಯಾವುದೇ ಸದಸ್ಯರ ಅಥವಾ ಪದಾಧಿಕಾರಿಯ ಅಥವಾ ಮುಖ್ಯ ಕಾರ್ಯನಿರ್ವಾಹಕನ ಅಥವಾ ಇತರ ಯಾವುದೇ ನೌಕರನ ಅಭಿರಕ್ಷೆಯಲ್ಲಿರುವ ಎಲ್ಲಾ ಪುಸ್ತಕಗಳನ್ನು, ಲೆಕ್ಕಪತ್ರಗಳನ್ನು, ದಸ್ತಾವೇಜುಗಳನ್ನು, ಕಾಗದ ಪತ್ರಗಳನ್ನು, ಭದ್ರತಾಪತ್ರಗಳನ್ನು, ನಗದು ಹಣವನ್ನು ಮತ್ತು ಇತರ ಸ್ವತ್ತುಗಳನ್ನು ಎಲ್ಲಾ ಕಾಲಗಳಲ್ಲಿ ಪರಿಶೀಲಿಸುವ ಅವಕಾಶವಿರತಕ್ಕದ್ದು ಹಾಗೂ ಅಂಥಹ ಪುಸ್ತಕಗಳನ್ನು, ಲೆಕ್ಕಪತ್ರಗಳನ್ನು, ದಸ್ತಾವೇಜುಗಳನ್ನು, ಕಾಗದ ಪತ್ರಗಳನ್ನು, ಭದ್ರತಾ ಪತ್ರಗಳನ್ನು, ನಗದು ಹಣವನ್ನು ಅಥವಾ ಇತರ ಸ್ವತ್ತುಗಳನ್ನು ಸ್ವಾಧೀನದಲ್ಲಿ ಇಟ್ಟುಕೊಂಡಿರುವ ಅಥವಾ ಅವುಗಳ ಅಭಿರಕ್ಷೆಗೆ ಹೊಣೆಗಾರನಾಗಿರುವ ಯಾರೇ ವ್ಯಕ್ತಿಯನ್ನು ಸಹಕಾರಿಯ ನೋಂದಾಯಿತ ಕಛೇರಿಯಲ್ಲಿ ಅಥವಾ ಅದರ ಯಾವುದೇ ಶಾಖೆಯಲ್ಲಿ ಅಥವಾ ಸಹಕಾರಿಯ ಕೇಂದ್ರ ಕಾರ್ಯಸ್ಥಾನದ ಯಾವುದೇ ಸಾರ್ವಜನಿಕ ಕಛೇರಿಯಲ್ಲಿ ಹಾಜರುಪಡಿಸುವಂತೆ ಸಮನು ಮಾಡಬಹುದು.

(6) ಸಹಕಾರಿಯ ಅಧಿಕಾರಿ ಅಥವಾ ನೌಕರನಾಗಿರುವ ಅಥವಾ ಯಾವುದೇ ಕಾಲದಲ್ಲಿ ಆಗಿದ್ದ ಪ್ರತಿಯೊಬ್ಬ ವ್ಯಕ್ತಿಯು ಮತ್ತು ಸಹಕಾರಿಯ ಪ್ರತಿಯೊಬ್ಬ ಸದಸ್ಯನು ಅಥವಾ ಮಾಜಿ ಸದಸ್ಯನು, ಸಹಕಾರಿಯ ವ್ಯವಹಾರ ಮತ್ತು ಕಾರ್ಯನಿರ್ವಹಣೆಯ ಬಗ್ಗೆ ಲೆಕ್ಕಪರಿಶೋಧಕ ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಯು ಅಗತ್ಯಪಡಿಸುವಂಥ ಮಾಹಿತಿಯನ್ನು ಒದಗಿಸತಕ್ಕದ್ದು.

(7) ಸಹಕಾರ ವರ್ಷ ಮುಕ್ತಾಯವಾದ ಮೂವತ್ತು ದಿನಗಳೊಳಗೆ, ಪ್ರತಿ ಸಹಕಾರಿಯ ಆಡಳಿತ ಮಂಡಳಿಯು ಸಹಕಾರ ವರ್ಷದ ಕೊನೆಯಲ್ಲಿದ್ದಂತೆ ವಾರ್ಷಿಕ ಜಮೆಗಳ ಮತ್ತು ಸಂದಾಯಗಳ ಅಥವಾ ಆದಾಯಗಳ ಮತ್ತು ಖರ್ಚುಗಳ, ಲಾಭ ಮತ್ತು ನಷ್ಟ ತೋರಿಸುವಂಥ ಆರ್ಥಿಕ ತ:ಖ್ತೆಗಳನ್ನು ಮತ್ತು ಆಸ್ತಿ ಹೊಣೆಪಟ್ಟಿಯನ್ನು (ಅಡಾವೆ ಪತ್ರಿಕೆ) ನಿಯಮಿಸಬಹುದಾದಂಥ ಅನುಸೂಚಿಗಳು ಮತ್ತು ಇತರ ತ:ಖ್ತೆಗಳ ಸಹಿತ ತಯಾರಿಸಿ ಲೆಕ್ಕಪರಿಶೋಧಕನ ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಯ ಮುಂದೆ ಲೆಕ್ಕಪರಿಶೋಧನೆಗಾಗಿ ಒಪ್ಪಿಸುವುದನ್ನು ಖಚಿತಪಡಿಸತಕ್ಕದ್ದು.

(8) ಲೆಕ್ಕಪರಿಶೋಧಕನು ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಯು ಲೆಕ್ಕಪರಿಶೋಧನಾ ವರದಿಯನ್ನು ಪ್ರತಿ ವರ್ಷ ಸೆಪ್ಟಂಬರ್ ಒಂದರೊಳಗಾಗಿ ಸಹಕಾರಿಗೆ ಮತ್ತು ಅದರ ಪ್ರತಿಗಳನ್ನು ಸಂಯುಕ್ತ ಸಹಕಾರಿಗೆ, ರಿಜಿಸ್ಟ್ರಾರನಿಗೆ, ಸಹಕಾರ ಲೆಕ್ಕಪರಿಶೋಧನಾ ನಿರ್ದೇಶಕನಿಗೆ ಮತ್ತು ಹಣಕಾಸು ನೀಡುವ ಬ್ಯಾಂಕಿಗೆ ಅಥವಾ ಸಾಲ ನೀಡಿಕೆ ಏಜೆನ್ಸಿಗೆ ಮತ್ತು

ಸದರಿ ಸಹಕಾರಿಯು ಯಾವುದೇ ಇತರ ಸಹಕಾರಿಯೊಡನೆ ಸಂಯೋಜಿತವಾಗಿದ್ದರೆ ಆ ಸಹಕಾರಿಗೆ ಕಳುಹಿಸತಕ್ಕದ್ದು ಹಾಗೂ ಲೆಕ್ಕಪರಿಶೋಧನೆಯ ಫಲಿತಾಂಶಗಳನ್ನು ತಿಳಿಸತಕ್ಕದ್ದು.

(9) ಲೆಕ್ಕಪರಿಶೋಧಕನು ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಯು, ಸಹಕಾರಿಯ ಸಾಮಾನ್ಯ ಸಭೆಗೆ ಸಂಬಂಧಿಸಿದ ಎಲ್ಲಾ ನೋಟೀಸುಗಳನ್ನು ಮತ್ತು ಪ್ರತಿಯೊಂದು ಸಮಾಚಾರವನ್ನು ಸ್ವೀಕರಿಸಲು ಹಾಗೂ ಆ ಸಹಕಾರಿಯ ಖರ್ಚಿನಲ್ಲಿ, ಅಂತಹ ಸಭೆಗೆ ಹಾಜರಾಗಲು ಮತ್ತು ಲೆಕ್ಕಪರಿಶೋಧಕನಾಗಿ ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಯಾಗಿ ತನಗೆ ಸಂಬಂಧಿಸಿದ ವ್ಯವಹಾರದ ಯಾವುದೇ ಅಂಶಕ್ಕೆ ಸಂಬಂಧಪಟ್ಟಂತೆ ಸಾಮಾನ್ಯ ಸಭೆಯಲ್ಲಿ ಆಲಿಸಲ್ಪಡಲು ಹಕ್ಕುಳ್ಳವನಾಗಿರತಕ್ಕದ್ದು.

(10) (1)ನೇ ಉಪಕರಣದ ಮೇರೆಗೆ ನಡೆಸಿದ ಲೆಕ್ಕಪರಿಶೋಧನೆಯ ಫಲಿತವು ಸಹಕಾರಿಯ ಕಾರ್ಯ ನಿರ್ವಹಣೆಯಲ್ಲಿನ ಯಾವುದೇ ದೋಷಗಳನ್ನು ತಿಳಿಯಪಡಿಸಿದರೆ, ಆಡಳಿತ ಮಂಡಲಿಯು ಲೆಕ್ಕ ಪರಿಶೋಧನಾ ವರದಿಯಲ್ಲಿ ಎತ್ತಿ ತೋರಿಸಿದ ದೋಷಗಳನ್ನು ಸರಿಪಡಿಸಲು ಮತ್ತು ಅಕ್ರಮಗಳನ್ನು ನೇರ್ಪಡಿಸಲು ಕ್ರಮಕೈಗೊಳ್ಳತಕ್ಕದ್ದು ಹಾಗೂ ಲೆಕ್ಕಪರಿಶೋಧನಾ ವರದಿಯನ್ನು ಕ್ರಮ ತೆಗೆದುಕೊಂಡ ವರದಿ ಸಹಿತ ಸಾಮಾನ್ಯ ಸಭೆಯಲ್ಲಿ ಮಂಡಿಸಿ ಸದರಿ ದೋಷಗಳನ್ನು ಮತ್ತು ಅಕ್ರಮಗಳನ್ನು ವಿವರಿಸತಕ್ಕದ್ದು. ಆಡಳಿತ ಮಂಡಲಿಯು ಲೆಕ್ಕಪರಿಶೋಧನಾ ವರದಿಯಲ್ಲಿನ ಎಲ್ಲಾ ದೋಷಗಳನ್ನು ಸರಿಪಡಿಸಲು ಮತ್ತು ಎಲ್ಲಾ ಅಕ್ರಮಗಳನ್ನು ನೇರ್ಪಡಿಸಲು ಕ್ರಮಕೈಗೊಳ್ಳುವುದನ್ನು ಮುಂದುವರಿಸತಕ್ಕದ್ದು ಮತ್ತು ವಾರ್ಷಿಕ ಸಾಮಾನ್ಯ ಸಭೆಗೆ ಶೃತಪಡಿಸತಕ್ಕದ್ದು. ಆಡಳಿತ ಮಂಡಲಿಯು ವಾರ್ಷಿಕ ಸಾಮಾನ್ಯ ಸಭೆಯ ದಿನಾಂಕದಿಂದ ಮೂವತ್ತು ದಿನಗಳೊಳಗೆ ರಿಜಿಸ್ಟ್ರಾರನಿಗೆ, ಸಹಕಾರ ಲೆಕ್ಕಪರಿಶೋಧನಾ ನಿರ್ದೇಶಕನಿಗೆ ಮತ್ತು ಸಂಯುಕ್ತ ಸಹಕಾರಿಗೆ ಕ್ರಮ ತೆಗೆದುಕೊಂಡ ವರದಿಯನ್ನು ಸಲ್ಲಿಸತಕ್ಕದ್ದು.

(11) ಸಹಕಾರ ಲೆಕ್ಕಪರಿಶೋಧನಾ ನಿರ್ದೇಶಕನು ಅಪೆಕ್ಸ್ ಸಹಕಾರಿಗಳ ಲೆಕ್ಕಪರಿಶೋಧನಾ ವರದಿಗಳನ್ನು ನಿಯಮಿಸಲಾದ ರೀತಿಯಲ್ಲಿ ವಿಧಾನಮಂಡಲದಲ್ಲಿ ಮಂಡಿಸಲು ಅನುವಾಗುವಂತೆ ರಾಜ್ಯ ಸರ್ಕಾರಕ್ಕೆ ಪ್ರತಿ ವರ್ಷವೂ ಸಲ್ಲಿಸತಕ್ಕದ್ದು.

(12) ನಿಯತ ಲೆಕ್ಕಪರಿಶೋಧನೆಯ ಸಮಯದಲ್ಲಿ ಲೆಕ್ಕಪರಿಶೋಧಕನು ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಯು ಪತ್ತೆಹಚ್ಚಿರದ ಅಥವಾ ಸರಿಯಾಗಿ ಪರಿಶೀಲನೆ ಮಾಡಿಲ್ಲದ ನಿಧಿಗಳ ವಂಚನೆ ಅಥವಾ ದುರ್ವಿನಿಯೋಗ ಅಥವಾ ದುರುಪಯೋಗ ಆಗಿದೆಯೆಂಬುದು ಸಹಕಾರಿಯ ಸಾಮಾನ್ಯ ನಿಕಾಯಕ್ಕೆ ಕಂಡು ಬಂದರೆ ಅಥವಾ ಲೆಕ್ಕಗಳ ತಪ್ಪು ವರ್ಗೀಕರಣ ಮಾಡಿರುವುದು ಕಂಡುಬಂದರೆ, ಅಂಥ ಸಹಕಾರಿಯ ಸಾಮಾನ್ಯ ಸದಸ್ಯರ ಸಭೆಯು ಸಹಕಾರಿಯ ಹಣಕಾಸು ಪರಿಸ್ಥಿತಿಯನ್ನು ಸತ್ಯವಾಗಿ ಪ್ರತಿಬಿಂಬಿಸುವ ದೃಷ್ಟಿಯಿಂದ ಯಾವುದೇ ಲೆಕ್ಕಪತ್ರವನ್ನು ಮರುಲೆಕ್ಕಪರಿಶೋಧಿಸಲು ತೀರ್ಮಾನಿಸಬಹುದು.

(13) ಸಹಕಾರಿಯು ಸಲ್ಲಿಸಿದ ಅರ್ಜಿಯ ಮೇಲೆ ಅಥವಾ ಅನ್ಯಥಾ ರಾಜ್ಯ ಸರ್ಕಾರಕ್ಕೆ ಸಹಕಾರಿಯ ಲೆಕ್ಕಪತ್ರಗಳನ್ನು ಮರು ಲೆಕ್ಕಪರಿಶೋಧನೆ ಮಾಡುವುದು ಅವಶ್ಯಕ ಅಥವಾ ಯುಕ್ತವೆಂದು ಕಂಡುಬಂದರೆ, ರಾಜ್ಯ ಸರ್ಕಾರವು, ಆದೇಶದ ಮೂಲಕ ಅಂಥ ಮರು ಲೆಕ್ಕಪರಿಶೋಧನೆಗೆ ವ್ಯವಸ್ಥೆ ಮಾಡಬಹುದು ಮತ್ತು ಲೆಕ್ಕಪರಿಶೋಧನೆಗೆ ಅನ್ವಯವಾಗುವ ಅಧಿನಿಯಮ ಮತ್ತು ನಿಯಮಗಳು, ಉಪಬಂಧಗಳು ಅಂಥ ಮರುಲೆಕ್ಕಪರಿಶೋಧನೆಗೆ ಅನ್ವಯವಾಗತಕ್ಕದ್ದು;

ಪರಂತು, ನಿಯತ ಲೆಕ್ಕಪರಿಶೋಧನೆಯ ಸಮಯದಲ್ಲಿ ಲೆಕ್ಕಪರಿಶೋಧಕನು ಅಥವಾ ಲೆಕ್ಕಪರಿಶೋಧನಾ ಸಂಸ್ಥೆಯು ಪತ್ತೆಹಚ್ಚಿರದ ಅಥವಾ ಸರಿಯಾಗಿ ಪರಿಶೀಲನೆ ಮಾಡಿಲ್ಲದ ಹಣದ ಬಗ್ಗೆ ವಂಚನೆ ಆಗಿದೆಯೆಂದು ಅಥವಾ ದುರ್ವಿನಿಯೋಗವಾಗಿದೆಯೆಂಬುದು ಅಥವಾ ದುರುಪಯೋಗವಾಗಿದೆಯೆಂಬುದು ಮೇಲ್ನೋಟಕ್ಕೆ ಕಂಡುಬಂದರೆ ಅಂಥ ಲೆಕ್ಕಪತ್ರಗಳ ತಪ್ಪು ವರ್ಗೀಕರಣ ಮಾಡಿದ್ದರೆ ಅಥವಾ ಸಹಕಾರಿಯ ಹಣಕಾಸು ಪರಿಸ್ಥಿತಿಯನ್ನು ಸತ್ಯವಾಗಿ ಪ್ರತಿಬಿಂಬಿಸುವ ದೃಷ್ಟಿಯಿಂದ ಯಾವುದೇ ಇತರ ಸಮಂಜಸ ಕಾರಣಗಳಿಗಾಗಿ ಅಂಥ ಮರುಲೆಕ್ಕಪರಿಶೋಧನೆಗೆ ಆದೇಶ ಮಾಡತಕ್ಕದ್ದು.

(14) (4) ರಿಂದ (6)ನೇ ಉಪಪ್ರಕರಣಗಳ ಉಪಬಂಧಗಳಿಗೆ ಭಾಧಕವಾಗದಂತೆ, ಲೆಕ್ಕಪರಿಶೋಧಕನು,–

(ಎ) ಸಹಕಾರಿಯ ಭದ್ರತೆಯ ಆಧಾರದ ಮೇಲೆ ನೀಡಿರುವ ಸಾಲಗಳನ್ನು ಅಥವಾ ಮುಂಗಡಗಳನ್ನು ಸೂಕ್ತವಾಗಿ ಭದ್ರತೆ ಪಡೆದು ನೀಡಲಾಗಿದೆಯೇ ಮತ್ತು ಯಾವ ನಿಬಂಧನೆಗಳ ಮೇಲೆ ಅವುಗಳನ್ನು ನೀಡಲಾಗಿದೆಯೋ ಆ ನಿಬಂಧನೆಗಳು ಸಹಕಾರಿಯ ಅಥವಾ ಅದರ ಸದಸ್ಯರ ಹಿತಾಸಕ್ತಿಗಳಿಗೆ ಪ್ರತಿಕೂಲವಾಗಿಲ್ಲವೆಂಬ ಬಗ್ಗೆ;

(ಬಿ) ಕೇವಲ ಪುಸ್ತಕ ನಮೂದುಗಳಿಂದ ಪ್ರತಿನಿಧಿಸಲ್ಪಡುವ ಸಹಕಾರಿಯ ವ್ಯವಹಾರಗಳು ಅದರಹಿತಾಸಕ್ತಿಗಳಿಗೆ ಪ್ರತಿಕೂಲವಾಗಿಲ್ಲವೆಂಬ ಬಗ್ಗೆ;

(ಸಿ) ವೈಯಕ್ತಿಕ ವೆಚ್ಚಗಳನ್ನು ರಾಜಸ್ವ ಲೆಕ್ಕಕ್ಕೆ ಖರ್ಚು ಹಾಕಲಾಗಿದೆಯೇ ಎಂಬ ಬಗ್ಗೆ;

(ಡಿ) ಯಾವುದೇ ಷೇರುಗಳನ್ನು ನಗದಿಗಾಗಿ ಹಂಚಿಕೆ ಮಾಡಲಾಗಿದೆ ಎಂದು ಪುಸ್ತಕಗಳಲ್ಲಿ ಮತ್ತು ಕಾಗದ ಪತ್ರಗಳಲ್ಲಿ ನಿರೂಪಿಸುವಲ್ಲಿ, ಅಂಥ ಹಂಚಿಕೆಗೆ ಸಂಬಂಧಪಟ್ಟಂತೆ ನಗದನ್ನು ವಾಸ್ತವಿಕವಾಗಿ ಸ್ವೀಕರಿಸಲಾಗಿದೆಯೇ ಮತ್ತು ಯಾವುದೇ ನಗದನ್ನು ವಾಸ್ತವಿಕವಾಗಿ ಹಾಗೆ ಸ್ವೀಕರಿಸಿಲ್ಲದಿದ್ದರೆ, ಲೆಕ್ಕ ಪುಸ್ತಕಗಳಲ್ಲಿ ಮತ್ತು ಆಸ್ತಿ–ಹೊಣೆ ಪಟ್ಟಿ(ಅಡಾವೆ ಪತ್ರಿಕೆ)ಯಲ್ಲಿ ನಿರೂಪಿಸಲಾದ ಸ್ಥಿತಿಯು ಸರಿಯಾದುದೇ, ಕ್ರಮಬದ್ಧವಾದುದೇ ಮತ್ತು ದಾರಿ ತಪ್ಪಿಸುವಂಥದ್ದಲ್ಲವೇ ಎಂಬ ಬಗ್ಗೆ;

(ಇ) ವಿಚಾರಣೆ ಮಾಡುವ ಸಲುವಾಗಿ ರಿಸರ್ವ್ ಬ್ಯಾಂಕು ಅಥವಾ ರಾಷ್ಟ್ರೀಯ ಬ್ಯಾಂಕು ಉಲ್ಲೇಖಿಸಿದ ಯಾವುದೇ ವಿಶೇಷ ವಿವಾದಾಂಶ ಅಥವಾ ವಿಷಯದ ಬಗೆಗಿನ ವರದಿಯನ್ನು ರಿಸರ್ವ್ ಬ್ಯಾಂಕಿಗೆ ಅಥವಾ ಸಂದರ್ಭಾನುಸಾರ ರಾಷ್ಟ್ರೀಯ ಬ್ಯಾಂಕಿಗೆ ಸಲ್ಲಿಸಲಾಗಿದೆಯೇ ಎಂಬ ಬಗ್ಗೆ;

– ವಿಚಾರಣೆ ಮಾಡತಕ್ಕದ್ದು.

(15) ಲೆಕ್ಕಪರಿಶೋಧಕನು, ತಾನು ಪರಿಶೀಲಿಸಿದ ಲೆಕ್ಕಪತ್ರಗಳ ಬಗ್ಗೆ ಮತ್ತು ತನ್ನ ಪದಾವಧಿಯಲ್ಲಿ, ಸಾಮಾನ್ಯ ಸಭೆಯಲ್ಲಿ ಸಹಕಾರಿಯ ಮುಂದೆ ಮಂಡಿಸಿದ ಪ್ರತಿಯೊಂದು ಆಸ್ತಿ–ಹೊಣೆ ಪಟ್ಟಿ(ಅಡಾವೆ ಪತ್ರಿಕೆ)ಯ ಮತ್ತು ಲಾಭ ಮತ್ತು ನಷ್ಟದ ಲೆಕ್ಕದ ಬಗ್ಗೆ ಹಾಗೂ ಆಸ್ತಿ–ಹೊಣೆ ಪಟ್ಟಿ (ಅಡಾವೆ ಪತ್ರಿಕೆ) ಅಥವಾ ಲಾಭ ಮತ್ತು ನಷ್ಟ ಲೆಕ್ಕದ ಒಂದು ಭಾಗವಾಗಿರಬೇಕೆಂದು ಅಗತ್ಯಪಡಿಸಲಾದ ಅಥವಾ ಅದಕ್ಕೆ ಲಗತ್ತಿಸಲಾದ ಪ್ರತಿಯೊಂದು ಇತರ ದಸ್ತಾವೇಜುಗಳ ಬಗ್ಗೆ ಸಹಕಾರಿಗೆ ವರದಿ ಮಾಡತಕ್ಕದ್ದು ಮತ್ತು ಆ ವರದಿಯು ಅವನ ಅಭಿಪ್ರಾಯದಲ್ಲಿ ಮತ್ತು ಅವನಿಗೆ ಮಾಹಿತಿ ಇರುವಷ್ಟರಮಟ್ಟಿಗೆ ಮತ್ತು ಅವನಿಗೆ ವಿವರಣೆ ನೀಡಿರುವುದಕ್ಕೆ ಅನುಸಾರವಾಗಿ, ಸದರಿ ಲೆಕ್ಕಗಳು ಈ ಅಧಿನಿಯಮದಲ್ಲಿ ಅಗತ್ಯಪಡಿಸಲಾದ ಮಾಹಿತಿಯನ್ನು ಹಾಗೆ ಅಗತ್ಯಪಡಿಸಿದ ರೀತಿಯಲ್ಲಿ ನೀಡುವುದೇ ಮತ್ತು,–

(ಎ) ಆಸ್ತಿ–ಹೊಣೆ ಪಟ್ಟಿ(ಅಡಾವೆ ಪತ್ರಿಕೆ)ಯ ಸಂದರ್ಭದಲ್ಲಿ, ಸಹಕಾರ ವರ್ಷದ ಅಂತ್ಯದಲ್ಲಿ ಇದ್ದಂತೆ ಸಹಕಾರಿ ವ್ಯವಹಾರಗಳ ಸ್ಥಿತಿಯ ಬಗ್ಗೆ, ಮತ್ತು;

(ಬಿ) ಲಾಭ ಮತ್ತು ನಷ್ಟದ ಲೆಕ್ಕದ ಸಂದರ್ಭದಲ್ಲಿ, ಸಹಕಾರ ವರ್ಷದ ಲಾಭ ಅಥವಾ ನಷ್ಟದ ಬಗ್ಗೆ,

–ನಿಜವಾದ ಮತ್ತು ನ್ಯಾಯ ಸಮ್ಮತವಾದ ಚಿತ್ರಣವನ್ನು ನೀಡುವುದೇ,

–ಎಂಬುದನ್ನು ತಿಳಿಸತಕ್ಕದ್ದು.

(16) ಲೆಕ್ಕಪರಿಶೋಧಕನ ವರದಿಯು,–

(ಎ) ಅವನು, ಲೆಕ್ಕಪರಿಶೋಧನೆ ಮಾಡುವ ಉದ್ದೇಶಕ್ಕಾಗಿ ತಾನು ಅವಶ್ಯವೆಂದು ತಿಳಿದಿರುವ ಮತ್ತು ನಂಬಿರುವಷ್ಟರಮಟ್ಟಿಗಿನ ಎಲ್ಲಾ ಮಾಹಿತಿಯನ್ನು ಮತ್ತು ವಿವರಣೆಗಳನ್ನು ಪಡೆದಿರುವನೇ ಎಂಬುದನ್ನು;

(ಬಿ) ತನ್ನ ಅಭಿಪ್ರಾಯದಲ್ಲಿ, ಆ ಲೆಕ್ಕಪುಸ್ತಕಗಳ ಪರಿಶೀಲನೆಯಿಂದ ಕಂಡುಬರಬಹುದಾದಷ್ಟರ ಮಟ್ಟಿಗೆ ಸಹಕಾರಿಯು, ಸೂಕ್ತ ಲೆಕ್ಕಪುಸ್ತಕಗಳನ್ನು ನಿರ್ವಹಿಸಿಕೊಂಡು ಬರುತ್ತಿದೆಯೇ ಮತ್ತು ಆತನು ಭೇಟಿ ನೀಡದ ಸಹಕಾರಿಯ ಶಾಖೆಗಳಿಂದ ಅಥವಾ ಕಛೇರಿಗಳಿಂದ ಲೆಕ್ಕಪರಿಶೋಧನೆಯ ಉದ್ದೇಶಕ್ಕಾಗಿ ಸಾಕಷ್ಟಾದ ವಿಧ್ಯುಕ್ತ ವರದಿಗಳನ್ನು ಸ್ವೀಕರಿಸಲಾಗಿದೆಯೇ ಎಂಬುದನ್ನು;

(ಸಿ) ಸಹಕಾರಿಯ ಲೆಕ್ಕಪರಿಶೋಧಕನನ್ನು ಹೊರತುಪಡಿಸಿ ಇತರ ವ್ಯಕ್ತಿಯು ಲೆಕ್ಕಪರಿಶೋಧನೆ ಮಾಡಿರುವ ಯಾವುದೇ ಶಾಖಾ ಕಛೇರಿಯ ಲೆಕ್ಕಪತ್ರಗಳ ಮೇಲಿನ ವರದಿಯನ್ನು ಅವನಿಗೆ ಕಳುಹಿಸಿ ಕೊಡಲಾಗಿದೆಯೇ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಸಿದ್ಧಪಡಿಸುವಲ್ಲಿ, ಅವನು ಆ ವರದಿಯನ್ನು ಹೇಗೆ ಪರಿಗಣಿಸಿದ್ದಾನೆ ಎಂಬುದನ್ನು;

(ಡಿ) ವರದಿಯಲ್ಲಿ ಉಲ್ಲೇಖಿಸಲಾಗಿರುವ ಸಹಕಾರಿಯ ಆಸ್ತಿ–ಹೊಣೆ ಪಟ್ಟಿ(ಅಡಾವೆ ಪತ್ರಿಕೆ)ಯು ಮತ್ತು ಲಾಭ ಮತ್ತು ನಷ್ಟದ ಲೆಕ್ಕವು, ಲೆಕ್ಕಪುಸ್ತಕಗಳೊಡನೆ ಮತ್ತು ವಿಧ್ಯುಕ್ತ ವರದಿಗಳೊಡನೆ ತಾಳೆಯಾಗುವುದೇ ಎಂಬುದನ್ನು;

–ಸಹ ತಿಳಿಸತಕ್ಕದ್ದು,

(17) (14)ನೇ ಉಪಪ್ರಕರಣದ (ಎ) ಮತ್ತು (ಬಿ) ಖಂಡಗಳಲ್ಲಿ ಅಥವಾ (15)ನೇ ಉಪ ಪ್ರಕರಣದ (ಎ) ಮತ್ತು (ಬಿ) ಖಂಡಗಳಲ್ಲಿ ಅಥವಾ (16)ನೇ ಉಪ ಪ್ರಕರಣದ (ಎ), (ಬಿ), (ಸಿ) ಮತ್ತು (ಡಿ) ಖಂಡಗಳಲ್ಲಿ ಉಲ್ಲೇಖಿಸಲಾದ ಯಾವುದೇ ವಿಷಯದ ಬಗ್ಗೆ ನಕರಾತ್ಮಕವಾಗಿ ಅಥವಾ ಷರತ್ತುಬದ್ದ ಅವಲೋಕನದೊಂದಿಗೆ ಉತ್ತರಿಸಿದಾಗ, ಲೆಕ್ಕಪರಿಶೋಧಕನ ವರದಿಯಲ್ಲಿ, ಆ ಉತ್ತರಕ್ಕಾಗಿ ಕಾರಣವನ್ನು ತಿಳಿಸತಕ್ಕದ್ದು.

(18) ಲೆಕ್ಕಪರಿಶೋಧನಾ ವರದಿಯು,–

(ಎ) ಲೆಕ್ಕಪರಿಶೋಧನೆಯಲ್ಲಿ ಅವಲೋಕಿಸಿದ ದೋಷಗಳ ಅಥವಾ ಅಕ್ರಮಗಳ ಎಲ್ಲಾ ವಿವರಗಳು ಮತ್ತು ಆರ್ಥಿಕ ಅಕ್ರಮಗಳು ಮತ್ತು ಹಣ ದುರುಪಯೋಗ ಇದ್ದಲ್ಲಿ, ನಿಧಿಗಳ ದುರಪಯೋಗ ಅಥವಾ ಮೋಸ ಆಗಿರುವಲ್ಲಿ, ಲೆಕ್ಕಪರಿಶೋಧಕನು ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಯು ಆ ಅವ್ಯವಹಾರದಲ್ಲಿನ ಕಾರ್ಯರೀತಿ, ವಹಿಸಿಕೊಡುವಿಕೆ

7

ಮತ್ತು ಒಳಗೊಂಡಿರುವ ಮೊತ್ತದ ಬಗ್ಗೆ ಪರೀಕ್ಷಿಸಿ ಹಣದ ಅಂತಹ ದುರುಪಯೋಗ ಅಥವಾ ದುರ್ವಿನಿಯೋಗಕ್ಕೆ ಪ್ರಸಂಗಾನುಸಾರ ಆಡಳಿತ ಮಂಡಲಿಯ ಸದಸ್ಯರ ಅಥವಾ ಸಹಕಾರಿ ನೌಕರರ ಅಥವಾ ಇತರ ಯಾವುದೇ ವ್ಯಕ್ತಿಯ ಮೇಲೆ ಜವಾಬ್ದಾರಿ ನಿಗದಿಪಡಿಸಿ ತತ್ಸಂಬಂಧದ ಎಲ್ಲಾ ಅಗತ್ಯ ಸಾಕ್ಷ್ಯವನ್ನು ನೀಡತಕ್ಕದ್ದು;

(ಬಿ) ಲೆಕ್ಕನಿರ್ವಹಣಾ ಅಕ್ರಮಗಳ ಮತ್ತು ಅವುಗಳಿಂದ ಲಾಭ ನಷ್ಟದ ಮೇಲೆ ಸಂವಾದಿಯಾಗಿ ಆಗುವ ಪರಿಣಾಮವನ್ನು ಒಳಗೊಂಡಂತೆ ಆರ್ಥಿಕ ತ:ಖ್ತೆಗಳ ಮೇಲಾಗುವ ಪರಿಣಾಮಗಳ ಎಲ್ಲಾ ವಿವರಗಳು;

(ಸಿ) ಸಹಕಾರಿಯ ಸಮಾನ್ಯ ನಿಕಾಯದ, ಆಡಳಿತ ಮಂಡಲಿಯ ಮತ್ತು ಉಪಸಮಿತಿಗಳ ಕಾರ್ಯನಿರ್ವಹಣೆಯನ್ನು ಪರಿಶೀಲಿಸಿ ಅದರಲ್ಲಿ ಯಾವುದೇ ಅಕ್ರಮಗಳನ್ನು ಅಥವಾ ಉಲ್ಲಂಘನೆಗಳನ್ನು ಅವಲೋಕಿಸಿದಲ್ಲಿ, ಅಂತಹ ಅಕ್ರಮ ಮತ್ತು ಉಲ್ಲಂಘನೆಗಳಿಗೆ ಜವಾಬ್ದಾರಿಯನ್ನು ನಿಗದಿಪಡಿಸುವುದು;

(ಡಿ) ನಿಯಮಿಸಬಹುದಾದಂಥ ಎಲ್ಲಾ ಅನುಸೂಚಿಗಳು ಮತ್ತು ಇತರ ತ:ಖ್ತೆಗಳು.

– ಇವುಗಳನ್ನು ಹೊಂದಿರತಕ್ಕದ್ದು.

(19) ಯಾವುದೇ ಸಹಕಾರಿಯ ಲೆಕ್ಕಪರಿಶೋಧಕನ ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಯ ಸಂಭಾವನೆಯನ್ನು ಅದರ ಸಾಮಾನ್ಯ ನಿಕಾಯವು ನಿಗದಿಪಡಿಸುವ ದರದಲ್ಲಿ ಸಹಕಾರಿಯು ಭರಿಸತಕ್ಕದ್ದು.

ವಿವರಣೆ: ಈ ಪ್ರಕರಣದ ಉದ್ದೇಶಕ್ಕಾಗಿ,

(i) **'ಲೆಕ್ಕಪರಿಶೋಧಕ'** ಎಂದರೆ ತನ್ನ ಪದವಿ ಅಥವಾ ಸ್ನಾತಕೋತ್ತರ ಪದವಿಯ ಜೊತೆಗೆ ಸಹಕಾರಿ ವ್ಯವಸ್ಥಾಪನೆಯಲ್ಲಿ ಉನ್ನತ ಡಿಪ್ಲೋಮಾ ಅಥವಾ ಸಹಕಾರಿ ಲೆಕ್ಕಪರಿಶೋಧನೆಯಲ್ಲಿ ಡಿಪ್ಲೋಮಾ ಅಥವಾ ಸಹಕಾರಿ ವ್ಯವಸ್ಥಾಪನೆಯಲ್ಲಿ ಸಾಮಾನ್ಯ ಡಿಪ್ಲೋಮಾದಲ್ಲಿ ತೇರ್ಗಡೆಯಾಗಿರುವ ಮತ್ತು ಪ್ರೊಬೇಷನರಿ ಅವಧಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿರುವ ಕನ್ನಡ ಭಾಷೆಯ ವ್ಯವಹಾರ ಜ್ಞಾನವುಳ್ಳ ಸಹಕಾರ ಲೆಕ್ಕಪರಿಶೋಧನಾ ಇಲಾಖೆಯ ಒಬ್ಬ ಲೆಕ್ಕಪರಿಶೋಧಕ ಅಥವಾ ಒಬ್ಬ ಅಧಿಕಾರಿ; ಅಥವಾ

ಕೊನೇ ಪಕ್ಷ ಮೂರು ವರ್ಷಗಳ ಲೆಕ್ಕಪರಿಶೋಧನೆ ಮಾಡಿರುವ ಅನುಭವವುಳ್ಳ ಮತ್ತು ಸಹಕಾರಿ ಸಂಸ್ಥೆಗಳ ಕಾರ್ಯನಿರ್ವಹಣೆ ಬಗ್ಗೆ ಸಾಮಾನ್ಯ ತಿಳುವಳಿಕೆಯುಳ್ಳ ಹಾಗೂ ಪಟ್ಟಿಯಲ್ಲಿ ಸೇರ್ಪಡೆಯಾಗುವ ಇಚ್ಛೆವುಳ್ಳ ಚಾರ್ಟರ್ಡ್ ಲೆಕ್ಕಿಗರ ಅಧಿನಿಯಮ 1949 ರ ಅರ್ಥ ವಿವರಣೆಯಲ್ಲಿ ಬರುವ ಒಬ್ಬ ಸನ್ನದು ಲೆಕ್ಕಿಗ ಹಾಗೂ ಅಂತಹ ಸನ್ನದು ಲೆಕ್ಕಿಗನು ಕಾರ್ಯನಿರ್ವಹಣೆಗೆ ಸಾಕಾಗುವಷ್ಟು ಕನ್ನಡ ಭಾಷೆಯ ಜ್ಞಾನ ಹಾಗೂ ತಿಳುವಳಿಕೆಯನ್ನು ಹೊಂದಿರತಕ್ಕದ್ದು.

(ii) "**ಲೆಕ್ಕಪರಿಶೋಧಿಸುವ ಸಂಸ್ಥೆ**" ಎಂದರೆ ಕೊನೇ ಪಕ್ಷ ಮೂರು ವರ್ಷಗಳ ಲೆಕ್ಕಪರಿಶೋಧನೆ ಮಾಡಿರುವ ಅನುಭವವುಳ್ಳ ಮತ್ತು ಸಹಕಾರಿ ಸಂಸ್ಥೆಗಳ ಕಾರ್ಯನಿರ್ವಹಣೆ ಬಗ್ಗೆ ಸಾಮಾನ್ಯ ತಿಳುವಳಿಕೆಯುಳ್ಳ ಹಾಗೂ ಪಟ್ಟಿಯಲ್ಲಿ ಸೇರ್ಪಡೆಯಾಗುವ ಇಚ್ಛೆವುಳ್ಳ ಚಾರ್ಟರ್ಡ್ ಲೆಕ್ಕಿಗರ ಅಧಿನಿಯಮ 1949 ರ ಅರ್ಥ ವಿವರಣೆಯಲ್ಲಿ ಬರುವ ಒಬ್ಬರಿಗಿಂತ ಹೆಚ್ಚಿನ ಚಾರ್ಟರ್ಡ್ ಲೆಕ್ಕಿಗರ ಒಂದು ಸಂಸ್ಥೆ ಹಾಗೂ ಅಂತಹ ಚಾರ್ಟರ್ಡ್ ಲೆಕ್ಕಿಗರು ಕಾರ್ಯನಿರ್ವಹಣೆಗೆ ಸಾಕಾಗುವಷ್ಟು ಕನ್ನಡ ಭಾಷೆಯ ಜ್ಞಾನ ಹಾಗೂ ತಿಳುವಳಿಕೆಯನ್ನು ಹೊಂದಿರತಕ್ಕದ್ದು."

24. 34ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 34ನೇ ಪ್ರಕರಣದಲ್ಲಿ,–

(i) "ಪ್ರತಿ ವರ್ಷದ ಅಕ್ಟೋಬರ್ ತಿಂಗಳ ಮೂವತ್ತೊಂದನೇ ದಿನಾಂಕದ ಮೊದಲು, ಒಂದು ಸಹಕಾರಿಯು ಈ ಮುಂದಿನ ಮಾಹಿತಿಯನ್ನು ರಿಜಿಸ್ಟ್ರಾರನಿಗೆ" ಎಂಬ ಪದಗಳಿಗೆ "ಪ್ರತಿಯೊಂದು ಸಹಕಾರಿಯು ಸಹಕಾರ ವರ್ಷ ಮುಗಿದ ಆರು ತಿಂಗಳೊಳಗೆ ಈ ಮುಂದಿನ ವಿದ್ಯುಕ್ತ ವರದಿಗಳನ್ನು ಮತ್ತು ಮಾಹಿತಿಯನ್ನು ರಿಜಿಸ್ಟ್ರಾರನಿಗೆ ಹಾಗೂ ಸಂಯುಕ್ತ ಸಹಕಾರಿಗೆ ಸಲ್ಲಿಸತಕ್ಕದ್ದು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ii) (ಎ) ಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(ಎ) ಹಿಂದಿನ ಸಹಕಾರ ವರ್ಷದ ಕಾರ್ಯಚಟುವಟಿಕೆಗಳ ವಾರ್ಷಿಕ ವರದಿ ಮತ್ತು ಮುಂಬರುವ ಸಹಕಾರಿ ವರ್ಷದ ಬಗ್ಗೆ ಕಾರ್ಯಕ್ರಮ"

(iii) (ಬಿ) ಖಂಡದಲ್ಲಿ "ವಿವರ ಪತ್ರ" ಎಂಬ ಪದಗಳಿಗೆ, "ಆರ್ಥಿಕ ತ:ಖ್ತೆಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(iv) (ಎಫ್) ಖಂಡದ ತರುವಾಯ, ಈ ಕೆಳಗಿನದನ್ನು ಸೇರಿಸತಕ್ಕದ್ದು, ಎಂದರೆ:–

"(ಜಿ) ಈ ಅಧಿನಿಯಮದ ಉಪಬಂಧಗಳಡಿ ರಿಜಿಸ್ಟ್ರಾರನು ಹಾಗೂ ಸಂಯುಕ್ತ ಸಹಕಾರಿಯು ಅಪೇಕ್ಷಿಸುವ ಇತರೆ ಯಾವುದೇ ಮಾಹಿತಿ".

25. 36ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 36ನೇ ಪ್ರಕರಣದ (3)ನೇ ಉಪಪ್ರಕರಣದ (ಸಿ) ಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(ಸಿ) ವಿಚಾರಣೆಯ ಉದ್ದೇಶಕ್ಕಾಗಿ ಸಂದರ್ಭಾನುಸಾರವಾಗಿ ಒಂದು ಹಣಕಾಸು ಬ್ಯಾಂಕಿನ ಅಥವಾ ಕ್ರೆಡಿಟ್ ಏಜೆನ್ಸಿಯ ಯಾರೇ ಅಧಿಕಾರಿಯನ್ನು ಅಥವಾ ಸಹಕಾರಿಯೊಡನೆ ಯಾವುದೇ ರೀತಿಯ ವ್ಯವಹಾರ ಸಂಬಂಧವುಳ್ಳ ಯಾವೊಬ್ಬ ವ್ಯಕ್ತಿಯನ್ನು ಅಥವಾ ಸಹಕಾರಿಯ ಕಾರ್ಯನಿರ್ವಹಣೆಗೆ ಸಂಬಂಧಪಟ್ಟಿರುವ ಯಾವೊಬ್ಬ ವ್ಯಕ್ತಿಯನ್ನು, ಅಥವಾ ಸಹಕಾರಿಯ ವ್ಯವಹಾರಗಳ ಬಗ್ಗೆ ತಿಳುವಳಿಕೆ ಹೊಂದಿರುವ ಯಾವೊಬ್ಬ ವ್ಯಕ್ತಿಯನ್ನು ಸಹಕಾರಿಯ ವ್ಯವಹಾರಗಳಿಗೆ ಮತ್ತು ಕಾರ್ಯನಿರ್ವಹಣೆಗೆ ಸಂಬಂಧಪಟ್ಟ ದಾಖಲೆಗಳು ಅಥವಾ ದಸ್ತಾವೇಜುಗಳು ಯಾವುದಾದರೂ ಇದ್ದರೆ ಅವುಗಳನ್ನು ಹಾಜರುಪಡಿಸಲು ಮತ್ತು ಸಹಕಾರಿಯ ನೋಂದಾಯಿತ ಕಛೇರಿಯಲ್ಲಿ ಅಥವಾ ಶಾಖಾ ಕಛೇರಿಯಲ್ಲಿ ಅಥವಾ ಸಹಕಾರಿಯ ಕೇಂದ್ರ ಕಾರ್ಯಸ್ಥಾನದ ಯಾವುದೇ ಸಾರ್ವಜನಿಕ ಕಛೇರಿಯಲ್ಲಿ ವಿಚಾರಣೆಯ ಸಲುವಾಗಿ ವಿಚಾರಣಾಧಿಕಾರಿಯು ಅಗತ್ಯಪಡಿಸುವಂಥ ಮಾಹಿತಿಯನ್ನು ಮತ್ತು ವಿವರಣೆಗಳನ್ನು ಒದಗಿಸಲು ಸಮನು ಮಾಡಬಹುದು."

26. 37ಎ ಹೊಸ ಪ್ರಕರಣದ ಸೇರ್ಪಡೆ.– ಮೂಲ ಅಧಿನಿಯಮದ 37ನೇ ಪ್ರಕರಣದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"**37ಎ ಅಧಿಭಾರ (ಸರ್ಚಾರ್ಜ್),–** (1) 33ನೇ ಪ್ರಕರಣ ಅಡಿಯಲ್ಲಿ ಲೆಕ್ಕಪರಿಶೋಧನೆ, 35ನೇ ಪ್ರಕರಣದ ಅಡಿಯಲ್ಲಿ ವಿಚಾರಣೆ, 53ನೇ ಪ್ರಕರಣದ ಅಡಿಯಲ್ಲಿ ಪರಿವೀಕ್ಷಣೆಯ ಅಥವಾ 48ನೇ ಪ್ರಕರಣದ ಅಡಿಯಲ್ಲಿ ಸಮಾಪನಾ ಅವಧಿಯಲ್ಲಿ ಅಂಥ ಸಹಕಾರಿಯ ವ್ಯವಸ್ಥಾಪನೆ ನಡೆಸುವ ಮಂಡಲಿ ಅಥವಾ ಮಂಡಲಿಯ ಅಧ್ಯಕ್ಷ, ಉಪಾಧ್ಯಕ್ಷ ಅಥವಾ ಸಭಾಪತಿ, ಉಪಸಭಾಪತಿ ಅಥವಾ ಯಾವೊಬ್ಬ ಇತರ ಸದಸ್ಯನು ಅಥವಾ ಅಂಥ ಸಹಕಾರಿ ಸಂಘಟನೆ ಅಥವಾ ವ್ಯವಸ್ಥಾಪನೆಯನ್ನು ವಹಿಸಿಕೊಡಲಾಗಿರುವ ಅಥವಾ ವಹಿಸಿಕೊಡಲಾಗಿದ್ದ ಯಾವೊಬ್ಬ ವ್ಯಕ್ತಿಯು ಯಾವುದೇ ಕಾಲಕ್ಕೆ ಸಹಕಾರಿಯ ಅಧಿಕಾರಿ ಅಥವಾ ನೌಕರನಾಗಿರುವ ಅಥವಾ ಆಗಿದ್ದ ಯಾವೊಬ್ಬ ವ್ಯಕ್ತಿಯು, ಈ ಅಧಿನಿಯಮ, ನಿಯಮಗಳಿಗೆ ಅಥವಾ ಉಪವಿಧಿಗಳಿಗೆ ವಿರುದ್ಧವಾಗಿ ಯಾವುದೇ ಸಂದಾಯವನ್ನು ಮಾಡಿದ್ದರೆ ಅಥವಾ ವಿಶ್ವಾಸಭಂಗ ಅಥವಾ ನಿರ್ಲಕ್ಷ್ಯದಿಂದ ಸಹಕಾರಿಯ ಆಸ್ತಿಗಳಲ್ಲಿ ಯಾವುದೇ ಕೊರತೆ ಉಂಟುಮಾಡಿದ್ದರೆ ಅಥವಾ ಅಂತಹ ಸಹಕಾರಿಗೆ ಸೇರಿದ ಯಾವುದೇ ಹಣ ಅಥವಾ ಇತರ ಸ್ವತ್ತನ್ನು ದುರುಪಯೋಗಪಡಿಸಿಕೊಂಡಿದ್ದರೆ ಅಥವಾ ಮೋಸದಿಂದ ತನ್ನಲ್ಲಿ ಇಟ್ಟುಕೊಂಡಿದ್ದರೆ, ರಿಜಿಸ್ಟ್ರಾರನು ಸಹಕಾರಿಯ ಮಂಡಲಿಯ, ಸಮಾಪಕನ ಅಥವಾ ಯಾರೇ ಲೇಣಿದಾರನ ಅಥವಾ ಸಂಯುಕ್ತ ಸಹಕಾರಿಯ ಅರ್ಜಿಯ ಮೇಲೆ, ಅಂಥ ವ್ಯಕ್ತಿ ಅಥವಾ ವ್ಯಕ್ತಿಗಳ ವಿರುದ್ಧ ಆರೋಪಗಳನ್ನು ರೂಪಿಸಬಹುದು ಮತ್ತು ಆ ವ್ಯಕ್ತಿಗೆ ಮತ್ತು ಮೃತ ವ್ಯಕ್ತಿಯ ಸಂದರ್ಭದಲ್ಲಿ ಅವನ ಸಂಪದದ ಉತ್ತರಾಧಿಕಾರಿಯಾದ ಅವನ ಪ್ರತಿನಿಧಿಗೆ ಮನವಿ ಸಲ್ಲಿಸಲು ಅವಕಾಶ ಕೊಟ್ಟ ತರುವಾಯ, ಆ ಹಣ ಅಥವಾ ಸ್ವತ್ತು ಅಥವಾ ಅದರ ಯಾವುದೇ ಭಾಗವನ್ನು ತಾನು ನಿರ್ಧರಿಸಬಹುದಾದಂತಹ ದರದ ಬಡ್ಡಿಯೊಂದಿಗೆ ಸಂದಾಯ ಮಾಡುವಂತೆ ಅಥವಾ ಪುನ:ಸ್ಥಾಪಿಸುವಂತೆ ಅಥವಾ ತಾನು ನ್ಯಾಯಸಮ್ಮತವಾದುದೆಂದು ಮತ್ತು ನ್ಯಾಯಯುತವಾದುದೆಂದು ಪರಿಗಣಿಸುವಂತಹ ಮೊತ್ತವನ್ನು ಅಷ್ಟು ಮಟ್ಟಿಗೆ ಪರಿಹಾರ ರೂಪದಲ್ಲಿ ಕೊರತೆಯಾದ ಸಹಕಾರಿಯ ಆಸ್ತಿಗಳಿಗೆ ಸಂದಾಯ ಮಾಡುವಂತೆ ಅಗತ್ಯಪಡಿಸುವ ಆದೇಶವನ್ನು ಹೊರಡಿಸಬಹುದು.

(2) ಆ ಕೃತ್ಯವು, ಸಂಬಂಧಪಟ್ಟ ವ್ಯಕ್ತಿಯು ಕ್ರಿಮಿನಲ್ ವ್ಯವಹರಣೆಗೆ ಗುರಿಯಾಗತಕ್ಕ ಕೃತ್ಯವಾಗಿದ್ದಾಗ್ಯೂ, ಈ ಪ್ರಕರಣವು ಅನ್ವಯವಾಗತಕ್ಕದ್ದು.

(3) (1) ನೇ ಉಪಪ್ರಕರಣದ ಅಡಿಯಲ್ಲಿ ರಿಜಿಸ್ಟ್ರಾರನು ಮಾಡಿದ ಆದೇಶವು, ಯಾರ ವಿರುದ್ಧ ಆದೇಶ ಮಾಡಲಾಯಿತೋ ಆ ವ್ಯಕ್ತಿಯಿಂದ ವ್ಯವಹರಣೆಯ ವೆಚ್ಚವನ್ನು ನಿಯಮಿಸಬಹುದಾದಂತಹ ದರದಲ್ಲಿ ಮತ್ತು ಅಂತಹ ರೀತಿಯಲ್ಲಿ ವಸೂಲಿ ಮಾಡುವುದಕ್ಕೆ ಉಪಬಂಧಿಸಬಹುದು.

(4) (1)ನೇ ಉಪ ಪ್ರಕರಣದ ಅಡಿಯಲ್ಲಿಯ ಅರ್ಜಿಯನ್ನು, ನ್ಯಾಯಾಲಯವು ಯಾವುದೇ ತಡೆಯನ್ನು ನೀಡಿದ್ದರೆ, ಅದನ್ನು ಹೊರತುಪಡಿಸಿ, ಹನ್ನೆರಡು ತಿಂಗಳುಗಳ ಅವಧಿಯೊಳಗೆ ತೀರ್ಮಾನಿಸತಕ್ಕದ್ದು. ಆದಾಗ್ಯೂ, ರಿಜಿಸ್ಟ್ರಾರನು ಲಿಖಿತದಲ್ಲಿ ಕಾರಣಗಳನ್ನು ದಾಖಲು ಮಾಡಿ ಸದರಿ ಅವಧಿಯನ್ನು ಹದಿನೆಂಟು ತಿಂಗಳುಗಳವರೆಗೆ ವಿಸ್ತರಿಸಬಹುದು:

ಪರಂತು ರಾಜ್ಯ ಸರ್ಕಾರವು, ರಿಜಿಸ್ಟ್ರಾರನ ವರದಿಯನ್ನು ಆಧರಿಸಿ, ವಿಚಾರಣೆ ನಡೆಸುವ ಅವಧಿಯನ್ನು ಹದಿನೆಂಟು ತಿಂಗಳನ್ನು ಮೀರಿ ವಿಸ್ತರಿಸಲು ನೈಜವಾದ ಸಕಾರಣಗಳಿವೆ ಎಂದು ಕಂಡುಬಂದಲ್ಲಿ, ವಿಚಾರಣಾ ಅವಧಿಯನ್ನು ವಿಸ್ತರಿಸಬಹುದು".

27. 38ನೇ ಪ್ರಕರಣದ ತಿದ್ದುಪಡಿ, ಮೂಲ ಅಧಿನಿಯಮದ 38ನೇ ಪ್ರಕರಣದಲ್ಲಿ,–

(i) (1)ನೇ ಉಪ ಪ್ರಕರಣದಲ್ಲಿ,-

8

(ಎ) (iv)ನೇ ಖಂಡದಲ್ಲಿ "ಉಪವಿಧಿಗಳು ಅಥವಾ ಸಂಯುಕ್ತ ಸಹಕಾರಿಯು ಮಾಡಿದ ಯಾವುದೇ ಆದೇಶ ಅಥವಾ ಹೊರಡಿಸಿದ ಯಾವುದೇ ನಿರ್ದೇಶನಗಳಿಗೆ" ಎಂಬ ಪದಗಳಿಗೆ, "ಉಪವಿಧಿಗಳಿಗೆ" ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು.

(ಬಿ) (v) ನೇ ಖಂಡಕ್ಕೆ, ಈ ಮುಂದಿನವನ್ನು ಪ್ರತಿಯೋಜಿಸತಕ್ಕದ್ದು, ಎಂದರೆ –

"(v) ಸಹಕಾರ ವರ್ಷವು ಮುಕ್ತಾಯವಾದ ಆರು ತಿಂಗಳೊಳಗೆ ಆದರೆ ಪ್ರತಿ ವರ್ಷ ಸೆಪ್ಟಂಬರ್ ಇಪ್ಪತ್ತೈದರೊಳಗಾಗಿ ವಾರ್ಷಿಕ ಸಾಮಾನ್ಯ ಸಭೆಯನ್ನು ನಡೆಸಲು ತಪ್ಪಿದೆ; ಅಥವಾ"

(ಸಿ) ಖಂಡ (v)ರ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"(v-ಎ) ಅದು ಗುರುತರವಾದ ಆರ್ಥಿಕ ಅವ್ಯವಹಾರಗಳನ್ನು ಅಥವಾ ವಂಚನೆಯನ್ನು ಎಸಗಿರುವುದು ಕಂಡುಬಂದಿದೆ; ಅಥವಾ

(v-ಬಿ) ಅದರ ರಚನೆ ಅಥವಾ ಕೆಲಸ ಕಾರ್ಯಗಳಿಗೆ ಇಕ್ಕಟ್ಟಿನ ಸ್ಥಿತಿ ಉಂಟಾಗಿದೆ; ಅಥವಾ

(v-ಸಿ) ಅದು ಚುನಾವಣೆಯನ್ನು ನಡೆಸಲು ಸಹಕಾರ ಚುನಾವಣಾ ಆಯೋಗಕ್ಕೆ ಅಗತ್ಯವಾದ ನೆರವನ್ನು ನೀಡಲು ವಿಫಲವಾಗಿದೆ ಮತ್ತು ಯಾವುದೇ ಕಾರಣದಿಂದ ಚುನಾವಣಾ ಆಯೋಗವು ನಿರ್ಗಮಿಸುತ್ತಿರುವ ಮಂಡಲಿಯ ಪದಾವಧಿಯ ಮುಕ್ತಾಯದ ನಿಕಟಪೂರ್ವದಲ್ಲಿ ಚುನಾವಣೆಯನ್ನು ನಡೆಸಿರುವುದಿಲ್ಲ; ಅಥವಾ

(v-ಡಿ) ಅದು ಪ್ರತಿ ವರ್ಷ ಸೆಪ್ಟಂಬರ್ ತಿಂಗಳ ಒಂದರೊಳಗಾಗಿ ಲೆಕ್ಕಪತ್ರಗಳ ಪರಿಶೋಧನೆಯನ್ನು ಪೂರ್ಣ ಮಾಡಿಸಿ ಲೆಕ್ಕಪರಿಶೋಧನಾ ವರದಿಯನ್ನು ಸಾಮಾನ್ಯ ಸಭೆಯ ಮುಂದೆ ಮಂಡಿಸಲು ವಿಫಲವಾಗಿದೆ; ಅಥವಾ".

(ಡಿ) (1)ನೇ ಉಪ ಪ್ರಕರಣದಲ್ಲಿ "ಮಂಡಲಿಯನ್ನು ರದ್ದುಗೊಳಿಸಬಹುದು" ಎಂಬ ಪದಗಳಿಗೆ "ಮಂಡಲಿಯನ್ನು ರದ್ದುಗೊಳಿಸಬಹುದು ಅಥವಾ ಅಮಾನತ್ತಿನಲ್ಲಿಡಬಹುದು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು. ಮತ್ತು ಅದರಡಿ ಇರುವ ಪರಂತುಕದ ಕೊನೆಯಲ್ಲಿ "ರದ್ದುಗೊಳಿಸತಕ್ಕದ್ದಲ್ಲ" ಎಂಬ ಪದಗಳಿಗೆ "ರದ್ದುಗೊಳಿಸತಕ್ಕದ್ದಲ್ಲ ಅಥವಾ ಅಮಾನತ್ತಿನಲ್ಲಿಡತಕ್ಕದ್ದಲ್ಲ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಇ) (1)ನೇ ಉಪಪ್ರಕರಣದ ಕೊನೆಯಲ್ಲಿ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"ಮತ್ತು ಪರಂತು ಸರ್ಕಾರದ ಷೇರು ಅಥವಾ ಸಾಲ ಅಥವಾ ಧನಸಹಾಯ ಅಥವಾ ಗ್ಯಾರಂಟಿ ಇಲ್ಲದ ಯಾವುದೇ ಸಹಕಾರಿಯ ಆಡಳಿತ ಮಂಡಲಿಯನ್ನು ರದ್ದುಪಡಿಸತಕ್ಕದ್ದಲ್ಲ ಅಥವಾ ಅಮಾನತ್ತಿನಲ್ಲಿ ಇಡತಕ್ಕದ್ದಲ್ಲ.

ಮತ್ತೂ ಪರಂತು ಬ್ಯಾಂಕಿಂಗ್ ವ್ಯವಹಾರವನ್ನು ನಿರ್ವಹಿಸುವ ಒಂದು ಸಹಕಾರಿಗೆ 1949ರ ಬ್ಯಾಂಕಿಂಗ್ ನಿಯಂತ್ರಣ ಅಧಿನಿಯಮದ ಉಪಬಂಧಗಳೂ ಸಹ ಅನ್ವಯವಾಗತಕ್ಕದ್ದು ಮತ್ತು ಈ ಖಂಡವು "ಆರು ತಿಂಗಳು" ಎಂಬ ಪದಗಳಿಗೆ ಬದಲಾಗಿ "ಒಂದು ವರ್ಷ" ಎಂಬ ಪದಗಳು ಪ್ರತಿಯೋಜಿಸಲ್ಪಟ್ಟಂತೆ ಅನ್ವಯವಾಗತಕ್ಕದ್ದು".

(ii) (6)ನೇ ಉಪಪ್ರಕರಣದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"(7) ಆಡಳಿತಗಾರನಿಗೆ ಕೊಡಬಹುದಾದ ಸಂಭಾವನೆಯನ್ನು ಸಂಯುಕ್ತ ಸಹಕಾರಿಯು ನಿರ್ಧರಿಸತಕ್ಕದ್ದು. ಅಂಥ ಸಂಭಾವನೆಯ ಮೊತ್ತವನ್ನು ಮತ್ತು ಆಡಳಿತಗಾರನು ಸಹಕಾರಿಯ ವ್ಯವಸ್ಥಾಪನೆಯಲ್ಲಿ ಮಾಡಿದ ಖರ್ಚುಗಳನ್ನು ಸಹಕಾರಿಯ ನಿಧಿಗಳಿಂದ ಪಾವತಿಸತಕ್ಕದ್ದು. ಸಹಕಾರಿಯ ಆಡಳಿತಗಾರನಾಗಿ ನೇಮಕವಾದ ಅಧಿಕಾರಿ ಅಥವಾ ನೌಕರನಿಗೆ ಅನ್ವಯವಾಗುವ ಸೇವಾ ನಿಯಮಗಳು, ಆತನು ಸಹಕಾರಿಯ ಆಡಳಿತಗಾರನಾಗಿ ಸೇವೆ ಸಲ್ಲಿಸುವಾಗಲೂ ಅನ್ವಯವಾಗತಕ್ಕದ್ದು."

28. 38ಎ ಹೊಸ ಪ್ರಕರಣದ ಸೇರ್ಪಡೆ.– ಮೂಲ ಅಧಿನಿಯಮದ 38ನೇ ಪ್ರಕರಣದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ –

"38ಎ ವಿಶೇಷಾಧಿಕಾರಿಯ ನೇಮಕ.– (1) ನಿರ್ದೇಶಕರ ಅನರ್ಹತೆ, ರಾಜೀನಾಮೆ ಅಥವಾ ಮರಣ ಅಥವಾ ಅವರನ್ನು ತೆಗೆದುಹಾಕಿರುವುದರಿಂದ ಮಂಡಲಿಯ ಸದಸ್ಯರ ಸಂಖ್ಯೆಯು ಅಗತ್ಯವಿರುವ ಕೋರಂ ಸಂಖ್ಯೆಗಿಂತ ಕಡಿಮೆ ಇದೆ ಎಂಬ ಕಾರಣದಿಂದ ಸಹಕಾರಿಯ ಚಟುವಟಿಕೆಗಳು ಈ ಅಧಿನಿಯಮದ, ನಿಯಮಗಳ ಅಥವಾ ಉಪವಿಧಿಗಳಿಗೆ ಅನುಸಾರವಾಗಿ ನಡೆಸಲಾಗದಿದ್ದಲ್ಲಿ ಅಥವಾ 25ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿಯ ಯಾವುದೇ ಅನರ್ಹತೆ ಉಂಟಾದಲ್ಲಿ ಅಥವಾ ಎಲ್ಲಾ ನಿರ್ದೇಶಕರು ರಾಜೀನಾಮೆ ಕೊಟ್ಟಲ್ಲಿ, ಅಂಥ ಸಹಕಾರಿಗೆ ಸಂಯುಕ್ತ ಸಹಕಾರಿಯು ಆರು ತಿಂಗಳಿಗೆ ಮೀರದ ಅವಧಿಗೆ ವಿಶೇಷಾಧಿಕಾರಿಯನ್ನು ನೇಮಕ ಮಾಡಬಹುದು.

(2) (1) ನೇ ಉಪಪ್ರಕರಣದ ಅಡಿಯಲ್ಲಿ ಆದೇಶವನ್ನು ಮಾಡುವುದಕ್ಕೆ ಮೊದಲು ಆದೇಶದ ಮೂಲಕ ಬಾಧಿತವಾಗುವ ಸಹಕಾರಿಗೆ ಅಥವಾ ವ್ಯಕ್ತಿಗೆ ಯಾವುದಾದರೂ ಆಕ್ಷೇಪಣೆ ಇದ್ದಲ್ಲಿ ಅದನ್ನು ತಿಳಿಸುವ ಅವಕಾಶವನ್ನು ನೀಡುವ ಅವಶ್ಯಕತೆ ಇರುವುದಿಲ್ಲ.

(3) ಮಂಡಲಿಯಲ್ಲಿ ಖಾಲಿ ಇರುವ ಸ್ಥಾನಗಳಿಗೆ ಚುನಾವಣೆಯನ್ನು ನಡೆಸುವ ಕುರಿತು ಸಹಕಾರ ಚುನಾವಣಾ ಆಯೋಗಕ್ಕೆ ವಿಶೇಷಾಧಿಕಾರಿಯು ಮಾಹಿತಿ ಒದಗಿಸತಕ್ಕದ್ದು. ಮತ್ತು ಚುನಾವಣಾ ಆಯೋಗವು ಖಾಲಿ ಇರುವ ಸ್ಥಾನಗಳ ಉಳಿದ ಅವಧಿಗೆ ಚುನಾವಣೆಯನ್ನು ನಡೆಸತಕ್ಕದ್ದು.

(4) ಚುನಾವಣೆ ನಡೆದು ಆಡಳಿತ ಮಂಡಲಿಯ ಸದಸ್ಯರ ಸಂಖ್ಯೆಯು ಕೋರಂಗೆ ಅಗತ್ಯ ಸಂಖ್ಯೆ ಆದ ಕೂಡಲೇ ವಿಶೇಷಾಧಿಕಾರಿಯು ಆಡಳಿತ ಮಂಡಲಿಗೆ ಅಧಿಕಾರ ಹಸ್ತಾಂತರಿಸತಕ್ಕದ್ದು ಮತ್ತು ವಿಶೇಷಾಧಿಕಾರಿಯು ಸ್ಥಾನ ತೆರವುಗೊಳಿಸಿರುವುದಾಗಿ ಭಾವಿಸತಕ್ಕದ್ದು".

29. 39ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 39ನೇ ಪ್ರಕರಣದಲ್ಲಿ,–

(i) (1)ನೇ ಉಪಪ್ರಕರಣದಲ್ಲಿ "ಯಾವುದೇ ವಿವಾದ ಉಂಟಾದರೆ", ಎಂಬ ಪದಗಳಿಗೆ "ಸಹಕಾರಿಯ ಆಡಳಿತ ಮಂಡಲಿಯ ಮತ್ತು ಪದಾಧಿಕಾರಿಗಳ ಚುನಾವಣೆಗೆ ಸಂಬಂಧಪಟ್ಟ ವಿವಾದವನ್ನು ಹೊರತುಪಡಿಸಿ, ಯಾವುದೇ ವಿವಾದ ಉಂಟಾದರೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ii) (3) ಉಪಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು,– ಎಂದರೆ:–

"(4) ಆಡಳಿತ ಮಂಡಲಿಯ ಸದಸ್ಯರ ಚುನಾವಣೆಗೆ ಹಾಗೂ ಅಧ್ಯಕ್ಷ, ಉಪಾಧ್ಯಕ್ಷ, ಸಭಾಪತಿ, ಉಪಸಭಾಪತಿ ಅಥವಾ ಯಾವುದೇ ಇತರ ಪದಾಧಿಕಾರಿಯ ಚುನಾವಣೆಗೆ ಸಂಬಂಧಪಟ್ಟ ಎಲ್ಲಾ ಚುನಾವಣಾ ತಕರಾರು ವ್ಯಾಜ್ಯಗಳನ್ನು ಕಾರ್ಯವ್ಯಾಪ್ತಿಯ ಸಿವಿಲ್ ನ್ಯಾಯಾಲಯದಲ್ಲಿ ಸಲ್ಲಿಸತಕ್ಕದ್ದು;

(5) ಸಹಕಾರ ಚುನಾವಣಾ ಆಯೋಗದ ರಚನೆಯ ದಿನಾಂಕಕ್ಕೆ ರಿಜಿಸ್ಟ್ರಾರನ ಬಳಿ ಬಾಕಿಯಿರುವ ಎಲ್ಲಾ ಚುನಾವಣಾ ವ್ಯಾಜ್ಯಗಳನ್ನು, ಈ ತಿದ್ದುಪಡಿಯನ್ನು ಮಾಡದಿದ್ದರೆ ಹೇಗೋ ಹಾಗೆ ರಿಜಿಸ್ಟ್ರಾರನೇ ಇತ್ಯರ್ಥಪಡಿಸತಕ್ಕದ್ದು."

30. 40ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 40ನೇ ಪ್ರಕರಣದಲ್ಲಿ, (1) ನೇ ಉಪಪ್ರಕರಣದ ಪರಂತುಕದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ–

"ಮತ್ತು ಪರಂತು, ನೌಕರನ ವಿರುದ್ಧದ ಶಿಸ್ತು ಕ್ರಮಕ್ಕೆ ಅಥವಾ ಸೇವಾ ಷರತ್ತುಗಳಿಗೆ ಸಂಬಂಧಪಟ್ಟ ಯಾವುದೇ ವಿವಾದವನ್ನು ಅಂಥ ವಿವಾದದಲ್ಲಿ ಪ್ರಶ್ನಿತವಾಗುವ ಆದೇಶದ ದಿನಾಂಕದಿಂದ ಹನ್ನೆರಡು ತಿಂಗಳ ಅವಧಿಯೊಳಗೆ ದಾಖಲು ಮಾಡತಕ್ಕದ್ದು."

31. 42ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 42ನೇ ಪ್ರಕರಣದಲ್ಲಿ, (1)ನೇ ಉಪಪ್ರಕರಣದಲ್ಲಿ,–

(i) (ಬಿ) ಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(ಬಿ) ಸದಸ್ಯನ ತೆಗೆದುಹಾಕುವಿಕೆ ಅಥವಾ ನಿರ್ದೇಶಕನ ಅನರ್ಹತೆ ಮತ್ತು ತೆಗೆದುಹಾಕುವಿಕೆ ಅಥವಾ ಮಂಡಲಿಯ ರದ್ದತಿ."

(ii) (ಸಿ) ಖಂಡದಲ್ಲಿ, "39ನೇ ಪ್ರಕರಣದ" ಎಂಬ ಅಂಕಿ ಮತ್ತು ಪದಗಳ ಪೂರ್ವದಲ್ಲಿ, "37ಎ ಪ್ರಕರಣದ ಅಡಿಯಲ್ಲಿ ರಿಜಿಸ್ಟ್ರಾರನಿಗೆ ಸಲ್ಲಿಸುವ ಯಾವುದೇ ಅಧಿಭಾರ ಅರ್ಜಿ ಅಥವಾ" ಎಂಬ ಅಂಕಿ ಮತ್ತು ಪದಗಳನ್ನು ಸೇರಿಸತಕ್ಕದ್ದು.

32. 45ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 45ನೇ ಪ್ರಕರಣದಲ್ಲಿ, (2)ನೇ ಉಪಪ್ರಕರಣವನ್ನು ಬಿಟ್ಟುಬಿಡತಕ್ಕದ್ದು.

33. 46ನೇ ಪ್ರಕರಣದ ಪ್ರತಿಯೋಜನೆ.– ಮೂಲ ಅಧಿನಿಯಮದ 46 ನೇ ಪ್ರಕರಣಕ್ಕೆ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"46 **ಅಪೀಲು,–** 41ನೇ ಪ್ರಕರಣದಡಿಯಲ್ಲಿನ ತೀರ್ಮಾನದ ಅಥವಾ ಐತೀರ್ಪಿನ ವಿರುದ್ಧದ ಅಥವಾ 37ಎ ಪ್ರಕರಣದ ಅಡಿಯಲ್ಲಿನ ಅಧಿಭಾರ ಆದೇಶದ ವಿರುದ್ಧದ ಅಪೀಲನ್ನು, ಆ ತೀರ್ಮಾನದ ಅಥವಾ ಐತೀರ್ಪಿನ ಅಥವಾ ಆದೇಶದ ದಿನಾಂಕದಿಂದ ಅರವತ್ತು ದಿನಗಳೊಳಗಾಗಿ, ಕರ್ನಾಟಕ ಅಪೀಲು ನ್ಯಾಯಾಧಿಕರಣ ಅಧಿನಿಯಮ 1976 (1976ರ ಕರ್ನಾಟಕ ಅಧಿನಿಯಮ ಸಂಖ್ಯೆ 10)ರ ಅಡಿಯಲ್ಲಿ ರಚಿಸಲಾದ ಕರ್ನಾಟಕ ಅಪೀಲು ನ್ಯಾಯಾಧಿಕರಣಕ್ಕೆ ಸಲ್ಲಿಸತಕ್ಕದ್ದು."

34. 53ನೇ ಪ್ರಕರಣದ ತಿದ್ದುಪಡಿ,– ಮೂಲ ಅಧಿನಿಯಮದ 53ನೇ ಪ್ರಕರಣದಲ್ಲಿ,–

(i) (6)ನೇ ಉಪಪ್ರಕರಣವನ್ನು ಬಿಟ್ಟುಬಿಡತಕ್ಕದ್ದು.

(ii) (7)ನೇ ಉಪಪ್ರಕರಣದ (ಟಿ) ಖಂಡವನ್ನು ಬಿಟ್ಟುಬಿಡತಕ್ಕದ್ದು.

35. 53ಎ ಹೊಸ ಪ್ರಕರಣದ ಸೇರ್ಪಡೆ,– ಮೂಲ ಅಧಿನಿಯಮದ 53ನೇ ಪ್ರಕರಣದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"53ಎ ಸಂಯುಕ್ತ ಸಹಕಾರಿಯ ಉಪವಿಧಿಗಳು,– (1) ಈ ಅಧಿನಿಯಮದ ಮತ್ತು ನಿಯಮಗಳ ಉಪಬಂಧಗಳಿಗೆ ಒಳಪಟ್ಟು, ಸಂಯುಕ್ತ ಸಹಕಾರಿಯು ಅದರ ಉಪವಿಧಿಗಳಿಗೆ ಅನುಸಾರವಾಗಿ ಪ್ರಕಾರ್ಯ ನಿರ್ವಹಿಸತಕ್ಕದ್ದು. ಈ ಉಪವಿಧಿಗಳು ಸಾಧ್ಯವಿರುವಷ್ಟರಮಟ್ಟಿಗೆ ಸಹಕಾರಿ ತತ್ವಗಳಿಗೆ ಅನುಗುಣವಾಗಿರತಕ್ಕದ್ದು.

(2) ಸಂಯುಕ್ತ ಸಹಕಾರಿಯ ಉಪವಿಧಿಗಳು ಈ ಮುಂದಿನ ವಿಷಯಗಳಿಗೆ ಉಪಬಂಧ ಕಲ್ಪಿಸತಕ್ಕದ್ದು, ಎಂದರೆ:–

(i) ಸಂಯುಕ್ತ ಸಹಕಾರಿಯ ಹೆಸರು, ವಿಳಾಸ ಮತ್ತು ಕಾರ್ಯಾಚರಣೆಯ ಪ್ರದೇಶ;

(ii) ಸಂಯುಕ್ತ ಸಹಕಾರಿಯ ಉದ್ದೇಶಗಳು ಮತ್ತು ಪ್ರಕಾರ್ಯಗಳು;

(iii) ಸದಸ್ಯತ್ವದ ಸೇರ್ಪಡೆಯ ಮತ್ತು ಮುಕ್ತಾಯಗೊಳಿಸುವ ವಿಧಾನಗಳು;

(iv) ನಾಮಮಾತ್ರ ಸದಸ್ಯರೂ ಸೇರಿದಂತೆ ಸದಸ್ಯರ ಹಕ್ಕುಗಳು, ಕರ್ತವ್ಯಗಳು ಮತ್ತು ಹೊಣೆಗಾರಿಕೆಗಳು;

(v) ಸಿಬ್ಬಂದಿಗಳ ನೇಮಕಾತಿ ಮತ್ತು ಸೇವಾ ಷರತ್ತುಗಳು;

(vi) ಮುಖ್ಯಕಾರ್ಯನಿರ್ವಾಹಕನ ಪ್ರಕಾರ್ಯಗಳು ಮತ್ತು ಕರ್ತವ್ಯಗಳು;

(vii) ಮಂಡಲಿಯ ಸಭೆಗಳನ್ನು ನಡೆಸುವ ವಿಧಾನ ಮತ್ತು ಅದಕ್ಕೆ ಅಗತ್ಯವಿರುವ ಕೋರಂ;

(viii) ಮಂಡಲಿಯ ರಚನೆ, ಹಾಗೂ ಮಂಡಲಿಯ ಮತ್ತು ಪದಾಧಿಕಾರಿಗಳ ಅಧಿಕಾರಗಳು, ಪ್ರಕಾರ್ಯಗಳು ಮತ್ತು ಕರ್ತವ್ಯಗಳು;

(ix) ಮತ ನೀಡುವ ಮತ್ತು ಚುನಾವಣೆಗಳಿಗೆ ಸ್ಪರ್ಧಿಸುವ ಹಕ್ಕೂ ಸೇರಿದಂತೆ ಮಂಡಲಿಯ ನಿರ್ದೇಶಕರ ಹಕ್ಕುಗಳು;

(x) ಮಂಡಲಿಯ ಸದಸ್ಯರಾಗಿ ಚುನಾಯಿತರಾಗಲು ಅಥವಾ ಮುಂದುವರೆಯಲು ಅರ್ಹತೆಗಳು ಮತ್ತು ಅನರ್ಹತೆಗಳು;

(xi) ಸಾಮಾನ್ಯ ನಿಕಾಯದ ಅಧಿಕಾರಗಳು ಮತ್ತು ಪ್ರಕಾರ್ಯಗಳು;

(xii) ಸಾಮಾನ್ಯ ಸಭೆಗಳನ್ನು ನಡೆಸುವ ವಿಧಾನ ಮತ್ತು ಅಂತರ ಮತ್ತು ಅದಕ್ಕೆ ಅಗತ್ಯವಿರುವ ಕೋರಂ;

(xiii) ಸದಸ್ಯನಿಂದ ಸಂಯುಕ್ತ ಸಹಕಾರಿಗೆ ಬಾಕಿ ಇರುವ ಯಾವುದೇ ಮೊತ್ತ ಸಂದಾಯ ಮಾಡುವುದಕ್ಕೆ ತಪ್ಪಿದರೆ ಆಗುವ ಪರಿಣಾಮಗಳು;

(xiv) ನಿಧಿಗಳನ್ನು ಸಂಗ್ರಹಿಸುವ ವ್ಯಾಪ್ತಿ ಮತ್ತು ನಿಬಂಧನೆ ;

(xv) ಸದಸ್ಯರಿಂದ ವಂತಿಗೆ ಸಂಗ್ರಹಿಸುವ ವಿಧಾನ ಮತ್ತು ಪ್ರಮಾಣ;

(xvi) ನಿಧಿಗಳನ್ನು ಬಳಸಬಹುದಾದ ಉದ್ದೇಶಗಳು;

(xvii) ವಿವಿಧ ನಿಧಿಗಳ ರಚನೆ ಮತ್ತು ಅವುಗಳ ಉದ್ದೇಶಗಳು;

(xviii) ಲೆಕ್ಕಪರಿಶೋಧಕರ ನೇಮಕಾತಿ ವಿಧಾನ ಮತ್ತು ಅವರ ಅಧಿಕಾರಗಳು ಮತ್ತು ಪ್ರಕಾರ್ಯಗಳು;

(xix) ಅಧ್ಯಕ್ಷ ಅಥವಾ ಸಭಾಪತಿಯ ಅಧಿಕಾರಗಳು, ಪ್ರಕಾರ್ಯಗಳು ಮತ್ತು ಕರ್ತವ್ಯಗಳು;

(xx) ನಿರ್ದೇಶಕರ ಮತ್ತು ಪದಾಧಿಕಾರಿಗಳ ಪ್ರಯಾಣ ಭತ್ಯೆ, ದಿನಭತ್ಯೆ, ಸಭಾಭತ್ಯೆ ಮತ್ತಿತರ ಭತ್ಯೆಗಳು;

(xxi) ಸಹಕಾರ ಶಿಕ್ಷಣ ಮತ್ತು ತರಬೇತಿ ಕಾರ್ಯಕ್ರಮಗಳನ್ನು ರೂಪಿಸುವ ಮತ್ತು ಅನುಷ್ಠಾನಗೊಳಿಸುವ ವಿಧಾನಗಳು;

(xxii) ಉಪಸಮಿತಿಗಳ ರಚನೆ, ಅವುಗಳ ಕರ್ತವ್ಯಗಳು ಮತ್ತು ಪ್ರಕಾರ್ಯಗಳು;

(xxiii) ಉಪವಿಧಿಗಳ ತಿದ್ದುಪಡಿ ವಿಧಾನ;

(xxiv) ಮಂಡಲಿಯ ಮತ್ತು ಪದಾಧಿಕಾರಿಗಳ ಪದಾವಧಿ; ಮತ್ತು

(xxv) ಉಪವಿಧಿಯಲ್ಲಿ ಉಪಬಂಧ ಕಲ್ಪಿಸುವ ಅಗತ್ಯವಿರುವ ಅಥವಾ ಕಲ್ಪಿಸಬಹುದಾದ ಇತರ ಯಾವುದೇ ವಿಷಯಗಳು".

36. 54ನೇ ಪ್ರಕರಣದ ತಿದ್ದುಪಡಿ,– ಮೂಲ ಅಧಿನಿಯಮದ 54ನೇ ಪ್ರಕರಣದಲ್ಲಿ.–

(i) (1) ಮತ್ತು (2)ನೇ ಉಪಪ್ರಕರಣಗಳಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(1) ಮಂಡಲಿಯು ಸಂಯುಕ್ತ ಸಹಕಾರಿಯ ವ್ಯವಹಾರ ನಿರ್ವಹಣೆಯ ನಿರ್ದೇಶನ ಮತ್ತು ನಿಯಂತ್ರಣದ ಹೊಣೆ ಹೊಂದಿರತಕ್ಕದ್ದು.

(2) ಸಂಯುಕ್ತ ಸಹಕಾರಿಯ ಮಂಡಲಿಯಲ್ಲಿ ನಿರ್ದೇಶಕರ ಸಂಖ್ಯೆಯು ಮುಖ್ಯ ಕಾರ್ಯನಿರ್ವಾಹಕನನ್ನು ಹೊರತುಪಡಿಸಿ ಇಪ್ಪತ್ತೊಂದಕ್ಕೆ ಮೀರತಕ್ಕದ್ದಲ್ಲ:

ಪರಂತು, ಸಹಕಾರಿಯು ಬ್ಯಾಂಕಿಂಗ್ ವ್ಯವಸ್ಥಾಪನೆ, ಮತ್ತು ಹಣಕಾಸು ನಿರ್ವಹಣೆಯಲ್ಲಿ ಅನುಭವವಿರುವ ಅಥವಾ ಸಹಕಾರಿಯು ಕೈಗೊಂಡ ಚಟುವಟಿಕೆಗಳಿಗೆ ಮತ್ತು ಉದ್ದೇಶಗಳಿಗೆ ಸಂಬಂಧಿಸಿದ ಇತರೆ ಯಾವುದೇ ಕ್ಷೇತ್ರದಲ್ಲಿ ಪರಿಣತಿಯನ್ನು ಹೊಂದಿರುವ ವ್ಯಕ್ತಿಗಳನ್ನು, ಮಂಡಲಿಯ ಸದಸ್ಯರನ್ನಾಗಿ ಸಹಮತದಿಂದ ಸೇರಿಸಿಕೊಳ್ಳತಕ್ಕದ್ದು. ಹಾಗೆ ಸಹಮತದಿಂದ ಸೇರಿಸಿಕೊಂಡ ಸದಸ್ಯರು ಅಂಥ ಸದಸ್ಯರ ಅಧಿಕಾರವುಳ್ಳವರಾಗಿ ಸಂಯುಕ್ತ ಸಹಕಾರಿಯ ಯಾವುದೇ ಚುನಾವಣೆಯಲ್ಲಿ ಮತ ನೀಡುವ ಹಕ್ಕುವುಳ್ಳವರಾಗಿರತಕ್ಕದ್ದಲ್ಲ ಅಥವಾ ಮಂಡಲಿಯ ಪದಾಧಿಕಾರಿಗಳಾಗಿ ಚುನಾಯಿತರಾಗಲು ಅರ್ಹರಾಗಿರತಕ್ಕದ್ದಲ್ಲ;

ಮತ್ತು ಪರಂತು, ಹಾಗೆ ಸಹಮತದಿಂದ ಸೇರಿಸಿಕೊಂಡ ಸದಸ್ಯರ ಸಂಖ್ಯೆಯು, ಮೇಲೆ ನಿರ್ದಿಷ್ಟಪಡಿಸಿದ ಇಪ್ಪತ್ತೊಂದು ನಿರ್ದೇಶಕರಿಗೆ ಹೆಚ್ಚುವರಿಯಾಗಿ ಎರಡಕ್ಕೆ ಮೀರತಕ್ಕದ್ದಲ್ಲ.

ಮತ್ತೂ ಪರಂತು, ಮೂರಕ್ಕೆ ಮೀರದ ಕಾರ್ಯಾನುಗುಣ ನಿರ್ದೇಶಕರೂ (Functional Directors) ಸಹ ಆಡಳಿತ ಮಂಡಲಿಯ ಸದಸ್ಯರಾಗಿರತಕ್ಕದ್ದು ಹಾಗೂ ಮೇಲೆ ನಿರ್ದಿಷ್ಟಪಡಿಸಿದ ಒಟ್ಟು ನಿರ್ದೇಶಕರ ಸಂಖ್ಯೆಯನ್ನು ಎಣಿಸುವಾಗ ಅಂತಹ ಸದಸ್ಯರನ್ನು ಹೊರತುಪಡಿಸತಕ್ಕದ್ದು".

(ii) (3)ನೇ ಉಪ ಪ್ರಕರಣದಲ್ಲಿ, "ಪದಧಾರಣ ಮಾಡಿದ" ಎಂಬ ಪದಗಳಿಗೆ "ಚುನಾವಣೆ ನಡೆದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

37. 55ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 55ನೇ ಪ್ರಕರಣದಲ್ಲಿ,–

(i) (2)ನೇ ಉಪ ಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(2) ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ಅನರ್ಹತೆಗಳ ಜೊತೆಗೆ ನಿರ್ದೇಶಕರು, ಸಂಯುಕ್ತ ಸಹಕಾರಿಯ ಅಥವಾ ಯಾವುದೇ ಇತರ ಸಹಕಾರಿಯ ನಿರ್ದೇಶಕರಾಗಿ ತಮ್ಮ ಪದಾವಧಿಯಲ್ಲಿ–

(ಎ) ನಿರ್ಗಮಿಸುತ್ತಿರುವ ಮಂಡಲಿಯ ಪದಾವಧಿಯು ಮುಕ್ತಾಯವಾಗುವುದರೊಳಗಾಗಿ ಚುನಾವಣೆ ನಡೆಸಲು ಸಹಕಾರ ಚುನಾವಣಾ ಆಯೋಗಕ್ಕೆ ಅಗತ್ಯ ನೆರವು ನೀಡದಿದ್ದರೆ;

(ಬಿ) ಪ್ರತಿವರ್ಷ ಸೆಪ್ಟೆಂಬರ್ ತಿಂಗಳಿನ ಇಪ್ಪತ್ತೈದರೊಳಗಾಗಿ ವಾರ್ಷಿಕ ಸಾಮಾನ್ಯ ಸಭೆಯನ್ನು ಅಥವಾ ನಿರ್ದಿಷ್ಟ ಸಮಯದೊಳಗಾಗಿ ಕೋರಲಾದ ವಿಶೇಷ ಸಾಮಾನ್ಯ ಸಭೆಯನ್ನು ನಡೆಸದಿದ್ದರೆ;

(ಸಿ) ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಹಿಂದಿನ ಸಹಕಾರ ವರ್ಷದ ಲೆಕ್ಕಪರಿಶೋಧನಾ ವರದಿಯೊಂದಿಗೆ ಪರಿಶೋಧಿತ ಲೆಕ್ಕಪತ್ರಗಳನ್ನು ಮಂಡಿಸದಿದ್ದರೆ;

(ಡಿ) ಸಹಕಾರ ವರ್ಷ ಮುಕ್ತಾಯವಾದ ಆರು ತಿಂಗಳೊಳಗೆ 64ಎ ಪ್ರಕರಣದಡಿ ರಿಜಿಸ್ಟ್ರಾರನಿಗೆ ವಿಧ್ಯುಕ್ತ ವರದಿಯನ್ನು ಸಲ್ಲಿಸದಿದ್ದರೆ;

(ಇ) ಗುರುತರ ಆರ್ಥಿಕ ಅವ್ಯವಹಾರಗಳನ್ನು ಅಥವಾ ವಂಚನೆಯನ್ನು ಎಸಗಿರುವುದು ಕಂಡುಬಂದರೆ;

–ಸಂಯುಕ್ತ ಸಹಕಾರಿಯ ನಿರ್ದೇಶಕರಾಗಿ ಚುನಾಯಿತನಾಗಲು ಅಥವಾ ಮುಂದುವರೆಯಲು ಅನರ್ಹರಾಗಿರತಕ್ಕದ್ದು."

(ii) (3) ನೇ ಉಪಪ್ರಕರಣದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"(4) ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯ ನಿರ್ದೇಶಕರು (2) ನೇ ಉಪಪ್ರಕರಣದ ಖಂಡ (ಎ), (ಬಿ), (ಸಿ), (ಡಿ) ಮತ್ತು (ಇ) ರಲ್ಲಿನ ಯಾವುದೇ ಅನರ್ಹತೆಗೆ ಒಳಗಾದಾಗ, 30ನೇ ಪ್ರಕರಣದ (6) ಮತ್ತು (7) ನೇ ಉಪಪ್ರಕರಣಗಳ ಉಪಬಂಧಗಳು, ಯಥೋಚಿತ ವ್ಯತ್ಯಾಸಗಳೊಂದಿಗೆ, ಸಂಯುಕ್ತ ಸಹಕಾರಿಗೆ ಅನ್ವಯವಾಗತಕ್ಕದ್ದು".

38. 56ನೇ ಪ್ರಕರಣದ ತಿದ್ದುಪಡಿ:– ಮೂಲ ಅಧಿನಿಯಮದ 56ನೇ ಪ್ರಕರಣದಲ್ಲಿ,–

(i) (ಎ) ಖಂಡದಲ್ಲಿ "ಚುನಾಯಿಸುವುದಕ್ಕೆ" ಎಂಬ ಪದಕ್ಕೆ "ಚುನಾವಣೆ ನಡೆಸಲು ಸಹಕಾರ ಚುನಾವಣಾ ಆಯೋಗಕ್ಕೆ ತಿಳಿಸುವುದಕ್ಕೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ii) (ಜಿ) ಖಂಡದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"**(ಜಿ–1)** ವಿಚಾರಣೆ ಏನಾದರೂ ನಡೆದಿದ್ದರೆ ವಿಚಾರಣಾ ವರದಿಯನ್ನು ಪರಿಶೀಲಿಸಿ ಅದರಲ್ಲಿ ಕಂಡುಬರಬಹುದಾದ ಲೋಪದೋಷಗಳನ್ನು ಸರಿಪಡಿಸಿಕೊಂಡು ಪಾಲನಾ ವರದಿಯ ಸಹಿತ ವಿಚಾರಣಾ ವರದಿಯನ್ನು ಸಾಮಾನ್ಯ ನಿಕಾಯದ ಮುಂದೆ ಮಂಡಿಸುವುದಕ್ಕೆ;

(ಜಿ–2) ವಾರ್ಷಿಕ ಆರ್ಥಿಕ ತಃಖ್ತೆಗಳನ್ನು, ಷೆಡ್ಯೂಲುಗಳನ್ನು ಮತ್ತಿತರ ತಃಖ್ತೆಗಳನ್ನು ತಯಾರಿಸಿ ಸಂಬಂಧಪಟ್ಟ ಲೆಕ್ಕಪುಸ್ತಕಗಳನ್ನು, ದಾಖಲೆಗಳನ್ನು ಮತ್ತು ಇತರ ದಸ್ತಾವೇಜುಗಳನ್ನು ಸಹಕಾರಿ ವರ್ಷ ಮುಕ್ತಾಯವಾದ ಮೂವತ್ತು ದಿನಗಳೊಳಗೆ ಲೆಕ್ಕಪರಿಶೋಧಕರಿಗೆ ಸಲ್ಲಿಸುವುದಕ್ಕೆ;

(ಜಿ–3) ಮಂಡಲಿಯ ಪದಾವಧಿ ಮುಕ್ತಾಯವಾಗುವ ಪೂರ್ವದಲ್ಲಿ ಚುನಾವಣೆ ನಡೆಸಲು ಅಗತ್ಯವಾದ ಮಾಹಿತಿ ಮತ್ತು ನೆರವನ್ನು ಸಹಕಾರ ಚುನಾವಣಾ ಆಯೋಗಕ್ಕೆ ನೀಡುವುದಕ್ಕೆ;

(ಜಿ–4) ಪ್ರಕರಣ 64ಎ ಅಡಿಯಲ್ಲಿ ರಿಜಿಸ್ಟ್ರಾರನಿಗೆ ಸಲ್ಲಿಸಬೇಕಾದ ವಿಧ್ಯುಕ್ತ ವರದಿಗಳನ್ನು ಮತ್ತು ಮಾಹಿತಿಗಳನ್ನು ಪ್ರತಿವರ್ಷ ಸೆಪ್ಟೆಂಬರ್ ಮೂವತ್ತರೊಳಗಾಗಿ ರಿಜಿಸ್ಟ್ರಾರನಿಗೆ ಸಲ್ಲಿಸುವುದಕ್ಕೆ;"

39. 57ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 57 ನೇ ಪ್ರಕರಣದಲ್ಲಿ, (3) ನೇ ಉಪಪ್ರಕರಣಕ್ಕೆ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದು, ಎಂದರೆ:–

"(3) ಅಧ್ಯಕ್ಷ ಅಥವಾ ಸಭಾಪತಿ ಮತ್ತು ಉಪಾಧ್ಯಕ್ಷ ಅಥವಾ ಉಪಸಭಾಪತಿ ಮತ್ತು ಉಪವಿಧಿಗಳ ಪ್ರಕಾರ ಚುನಾಯಿಸಬೇಕಾದ ಇತರ ಪದಾಧಿಕಾರಿಗಳ ಪದಾವಧಿಯು ಚುನಾವಣಾ ದಿನಾಂಕದಿಂದ ಐದು ವರ್ಷಗಳಾಗಿರತಕ್ಕದ್ದು ಹಾಗೂ ಅಂತಹ ಪದಾಧಿಕಾರಿಗಳ ಅವಧಿಯು ಆಡಳಿತ ಮಂಡಲಿಯ ಅವಧಿಯ ಜೊತೆಗೆ ಅಂತ್ಯವಾಗತಕ್ಕದ್ದು".

40. 57ಎ ಹೊಸ ಪ್ರಕರಣದ ಸೇರ್ಪಡೆ.– ಮೂಲ ಅಧಿನಿಯಮದ 57ನೇ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"**57ಎ ಆಡಳಿತ ಮಂಡಲಿಯ ರದ್ಧತಿ ಅಥವಾ ಅಮಾನತ್ತು.–** ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯ ರದ್ಧತಿ ಅಥವಾ ಅಮಾನತ್ತಿಗೆ ಸಂಬಂಧಪಟ್ಟಂತೆ ಪ್ರಕರಣ 38ರ ಉಪಬಂಧಗಳು ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗತಕ್ಕದ್ದು. ಸಹಕಾರಿಗಳ ರಿಜಿಸ್ಟ್ರಾರನು ಸಂಯುಕ್ತ ಸಹಕಾರಿಯ ವಿರುದ್ಧ ಕ್ರಮಕೈಗೊಳ್ಳಲು ಸಕ್ಷಮನಾಗಿರತಕ್ಕದ್ದು."

41. 58ನೇ ಪ್ರಕರಣದ ಪ್ರತಿಯೋಜನೆ.– ಮೂಲ ಅಧಿನಿಯಮದ 58 ನೇ ಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"**58 ಚುನಾವಣೆಗಳು,–** (1) ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಗೆ ಮತ್ತು ಪದಾಧಿಕಾರಿಗಳ ಪದಕ್ಕೆ ಚುನಾವಣೆ ನಡೆಸುವುದು ಸಹಕಾರ ಚುನಾವಣಾ ಆಯೋಗದ ಜವಾಬ್ದಾರಿಯಾಗಿರತಕ್ಕದ್ದು.

(2) ನಿರ್ಗಮಿಸುತ್ತಿರುವ ಮಂಡಲಿಯ ಸದಸ್ಯರ ಪದಾವಧಿಯು ಮುಕ್ತಾಯದ ಕೂಡಲೇ ಹೊಸದಾಗಿ ಚುನಾಯಿತರಾದ ಮಂಡಲಿಯ ಸದಸ್ಯರು ಪದಗ್ರಹಣ ಮಾಡಲು ಅನುವಾಗುವಂತೆ ನಿರ್ಗಮಿಸುತ್ತಿರುವ ಮಂಡಲಿಯ ಅವಧಿಯು ಕೊನೆಗೊಳ್ಳುವ ನಿಕಟಪೂರ್ವದಲ್ಲಿ ಹೊಸ ಮಂಡಲಿಯ ಸದಸ್ಯರ ಚುನಾವಣೆ ನಡೆಸತಕ್ಕದ್ದು.

(3) ನಿರ್ಗಮಿಸುತ್ತಿರುವ ಮಂಡಲಿಯ ಪದಾವಧಿಯು ಮುಕ್ತಾಯವಾದ ಕೂಡಲೇ ಹೊಸದಾಗಿ ಚುನಾಯಿತರಾದ ಮಂಡಲಿಯ ನಿರ್ದೇಶಕರು ಪದಗ್ರಹಣ ಮಾಡತಕ್ಕದು.

(4) ಸಹಕಾರ ಚುನಾವಣಾ ಆಯೋಗಕ್ಕೆ ಸಂಬಂಧಿಸಿದಂತೆ 26ಎ ಪ್ರಕರಣದ ಉಪಬಂಧಗಳು ಸಂಯುಕ್ತ ಸಹಕಾರಿಗೆ ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗತಕ್ಕದ್ದು".

42. 59ನೇ ಪ್ರಕರಣದ ಪ್ರತಿಯೋಜನೆ.– ಮೂಲ ಅಧಿನಿಯಮದ 59ನೇ ಪ್ರಕರಣಕ್ಕೆ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"**59 ಆಕಸ್ಮಿಕ ರಿಕ್ತತೆಗಳನ್ನು ಭರ್ತಿ ಮಾಡುವುದು,–** ಮರಣ, ರಾಜೀನಾಮೆ, ಅನರ್ಹತೆಯ ಕಾರಣದಿಂದ ಅಥವಾ ಇತರ ಯಾವುದೇ ಕಾರಣದಿಂದಾಗಿ ಆಡಳಿತ ಮಂಡಲಿಯಲ್ಲಿ ಆಕಸ್ಮಿಕ ರಿಕ್ತತೆ ಉಂಟಾದಲ್ಲಿ, ಆಡಳಿತ ಮಂಡಲಿಯ ಸಭೆಯನ್ನು ನಡೆಸಲು ಕೋರಂ ಇದ್ದಲ್ಲಿ, ಯಾವ ವರ್ಗದ ಸದಸ್ಯರ ಸಂಬಂಧದಲ್ಲಿ ಆಕಸ್ಮಿಕ ರಿಕ್ತತೆ ಉಂಟಾಗಿದೆಯೋ ಅದೇ ವರ್ಗದ ಸದಸ್ಯರೊಳಗೆ ನಾಮಕರಣ ಮಾಡುವ ಮೂಲಕ ಭರ್ತಿಮಾಡಿಕೊಳ್ಳಬಹುದು:

ಪರಂತು ಮಂಡಲಿಯ ಅವಧಿಯು ಮೂಲ ಪಧಾವಧಿಯ ಅರ್ಧದಷ್ಟಕ್ಕಿಂತ ಕಡಿಮೆ ಉಳಿದಿದ್ದಾಗ ಮಾತ್ರ ಆಕಸ್ಮಿಕ ರಿಕ್ತತೆಯನ್ನು ಸಹಮತದಿಂದ ಭರ್ತಿ ಮಾಡಬಹುದು".

43. 60 ನೇ ಪ್ರಕರಣದ ತಿದ್ದುಪಡಿ, – ಮೂಲ ಅಧಿನಿಯಮದ 60 ನೇ ಪ್ರಕರಣದಲ್ಲಿ,–

(i) (1)ನೇ ಉಪಪ್ರಕರಣದಲ್ಲಿ, ಪರಂತುಕಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"ಪರಂತು ಒಂದು ಸಹಕಾರ ವರ್ಷದಲ್ಲಿ ಮಂಡಲಿಯ ಆರು ಸಭೆಗಳಿಗಿಂತ ಮತ್ತು ಒಂದು ಸಾಮಾನ್ಯ ಸಭೆಗಿಂತ ಕಡಿಮೆ ಸಭೆಗಳನ್ನು ನಡೆಸತಕ್ಕದ್ದಲ್ಲ.

ಮತ್ತು ಪರಂತು, ವಾರ್ಷಿಕ ಸಾಮಾನ್ಯ ಸಭೆಯನ್ನು ಪ್ರತಿ ವರ್ಷ ಸೆಪ್ಟೆಂಬರ್ ಇಪ್ಪತ್ತೈದರೊಳಗಾಗಿ ನಡೆಸತಕ್ಕದ್ದು".

(ii) (2)ನೇ ಉಪಪ್ರಕರಣದಲ್ಲಿ "ಸಂಯುಕ್ತ ಸಹಕಾರಿಯ" ಎಂಬ ಪದಗಳ ನಿಕಟ ಪೂರ್ವದಲ್ಲಿ, ಈ ಕೆಳಗಿನದನ್ನು ಸೇರಿಸತಕ್ಕದ್ದು, ಎಂದರೆ: –

"ತನ್ನ ಅಗತ್ಯಕ್ಕೆ ತಕ್ಕಂತೆ ಯಾವಾಗ ಬೇಕಾದರೂ ಸಂಯುಕ್ತ ಸಹಕಾರಿಯು ವಿಶೇಷ ಸಾಮಾನ್ಯ ಸಭೆಯನ್ನು ಕರೆಯಬಹುದು, ಆದರೆ".

(iii) (3) ನೇ ಉಪಪ್ರಕರಣದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ: –

"(3ಎ) ಯಾವುದೇ ಸಾಮಾನ್ಯ ಸಭೆಯ ಕೋರಂ ಉಪವಿಧಿಗಳಲ್ಲಿ ನಿಗದಿಪಡಿಸಬಹುದಾದಷ್ಟು ಇರತಕ್ಕದ್ದು. ಆದರೆ ಅಂತಹ ಕೋರಂ ಸಾಮಾನ್ಯ ನಿಕಾಯದ ಒಟ್ಟು ಮತ ನೀಡುವ ಹಕ್ಕುಳ್ಳ ಸದಸ್ಯರ ಶೇಕಡಾ ಇಪ್ಪತ್ತಕ್ಕಿಂತ ಕಡಿಮೆ ಇರತಕ್ಕದ್ದಲ್ಲ. ಯಾವುದೇ ಸಾಮಾನ್ಯ ಸಭೆಯಲ್ಲಿ ಯಾವುದೇ ಕಲಾಪದ ಚರ್ಚೆಯ ಸಮಯದಲ್ಲಿ ಕೋರಂ ಇಲ್ಲದಿದ್ದ ಪಕ್ಷದಲ್ಲಿ, ಅಂಥ ಸಭೆಯ ಕಲಾಪವನ್ನು ನಡೆಸತಕ್ಕದ್ದಲ್ಲ.

(3ಬಿ) ಯಾವುದೇ ಆಡಳಿತ ಮಂಡಲಿಯ ಸಭೆಯ ಕೋರಂ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಬಹುದಾದಷ್ಟು ಇರತಕ್ಕದ್ದು. ಆದರೆ ಅಂತಹ ಕೋರಂ ಮಂಡಲಿಯ ಒಟ್ಟು ಸದಸ್ಯರ ಶೇಕಡಾ ಐವತ್ತರ ನಂತರದ ಸಂಖ್ಯೆಗಿಂತ ಕಡಿಮೆ ಇರತಕ್ಕದ್ದಲ್ಲ. ಯಾವುದೇ ಮಂಡಲಿಯ ಸಭೆಯಲ್ಲಿ ಯಾವುದೇ ಕಲಾಪದ ಚರ್ಚೆಯ ಸಮಯದಲ್ಲಿ ಕೋರಂ ಇಲ್ಲದಿದ್ದ ಪಕ್ಷದಲ್ಲಿ, ಅಂಥ ಸಭೆಯ ಕಲಾಪ ನಡೆಸತಕ್ಕದ್ದಲ್ಲ".

44. 61ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 61 ನೇ ಪ್ರಕರಣದಲ್ಲಿ, (2) ನೇ ಉಪಪ್ರಕರಣದ (ಎಲ್) ಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(ಎಲ್) ಸಂಯುಕ್ತ ಸಹಕಾರಿಯ ವಾರ್ಷಿಕ ಲೆಕ್ಕಪರಿಶೋಧನೆಗೆ ಅಗತ್ಯವಾದ ಆರ್ಥಿಕ ತಃಖ್ತೆಗಳನ್ನು, ಷೆಡ್ಯೂಲುಗಳನ್ನು ಮತ್ತು ಇತರೆ ತಃಖ್ತೆಗಳನ್ನು ತಯಾರಿಸಿ ಮಂಡಲಿಯ ಅನುಮೋದನೆಯನ್ನು ಪಡೆದು ಸಂಬಂಧಪಟ್ಟ ಲೆಕ್ಕಪುಸ್ತಕಗಳನ್ನು, ದಾಖಲೆಗಳನ್ನು ಮತ್ತು ಇತರ ದಸ್ತಾವೇಜುಗಳನ್ನು ಸಹಕಾರ ವರ್ಷ ಮುಕ್ತಾಯವಾದ ಮೂವತ್ತು ದಿನಗಳೊಳಗೆ ಲೆಕ್ಕಪರಿಶೋಧಕರಿಗೆ ಒದಗಿಸತಕ್ಕದ್ದು;

(ಎಲ್–1) ಲೆಕ್ಕಪರಿಶೋಧನಾ ವರದಿಯಲ್ಲಿ ಪತ್ತೆಹಚ್ಚಲಾದ ಲೋಪದೋಷಗಳನ್ನು ಸರಿಪಡಿಸಲು ತೆಗೆದುಕೊಳ್ಳಬೇಕಾದ ಕ್ರಮಗಳನ್ನು ಪ್ರಸ್ತಾಪಿಸಿ ಮಂಡಲಿಯ ಮುಂದೆ ಮಂಡಿಸಿ ಅನುಮೋದನೆ ಪಡೆಯತಕ್ಕದ್ದು ಮತ್ತು ಅದರಂತೆ ಕ್ರಮ ಕೈಗೊಳ್ಳತಕ್ಕದ್ದು;

(ಎಲ್–2) ವಿಚಾರಣಾ ವರದಿಯಲ್ಲಿ ಪತ್ತೆಹಚ್ಚಲಾದ ಲೋಪದೋಷಗಳು ಏನಾದರೂ ಇದ್ದರೆ ಅವುಗಳನ್ನು ಸರಿಪಡಿಸಲು ತೆಗೆದುಕೊಳ್ಳಬೇಕಾದ ಕ್ರಮಗಳನ್ನು ಪ್ರಸ್ತಾಪಿಸಿ ಮಂಡಲಿಯ ಮುಂದೆ ಮಂಡಿಸಿ ಅನುಮೋದನೆ ಪಡೆಯತಕ್ಕದ್ದು ಮತ್ತು ಅದರಂತೆ ಕ್ರಮ ಕೈಗೊಳ್ಳತಕ್ಕದ್ದು;

(ಎಲ್–3) ಮಂಡಲಿಯ ಪದಾವಧಿ ಮುಕ್ತಾಯವಾಗುವ ಪೂರ್ವದಲ್ಲಿ ಚುನಾವಣೆ ನಡೆಸಲು ಅಗತ್ಯವಾದ ಮಾಹಿತಿ ಮತ್ತು ನೆರವನ್ನು ಸಹಕಾರ ಚುನಾವಣಾ ಆಯೋಗಕ್ಕೆ ನೀಡತಕ್ಕದ್ದು;

(ಎಲ್–4)– ಪ್ರಕರಣ 64ಎ ಅಡಿಯಲ್ಲಿ ರಿಜಿಸ್ಟ್ರಾರನಿಗೆ ಸಲ್ಲಿಸಬೇಕಾದ ವಿಧ್ಯುಕ್ತ ವರದಿಗಳನ್ನು ಮತ್ತು ಮಾಹಿತಿಗಳನ್ನು ಸೆಪ್ಟಂಬರ್ ಮೂವತ್ತರೊಳಗಾಗಿ ರಿಜಿಸ್ಟ್ರಾರನಿಗೆ ಸಲ್ಲಿಸತಕ್ಕದ್ದು".

45. 62ನೇ ಪ್ರಕರಣದ ತಿದ್ದುಪಡಿ, – ಮೂಲ ಅಧಿನಿಯಮದ 62 ನೇ ಪ್ರಕರಣದಲ್ಲಿ, (2) ನೇ ಉಪಪ್ರಕರಣದ ಖಂಡ (ii) ರಲ್ಲಿ "ಪ್ರತಿ ವರ್ಷ" ಎಂಬ ಪದಗಳಿಗೆ, "ಪ್ರತಿ ಸಹಕಾರ ವರ್ಷವೂ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

46. 62ಎ ಪ್ರಕರಣದ ಸೇರ್ಪಡೆ. – ಮೂಲ ಅಧಿನಿಯಮದ 62 ನೇ ಪ್ರಕರಣದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ –

"**62ಎ– ಸಹಕಾರ ಶಿಕ್ಷಣ ಮತ್ತು ತರಬೇತಿ.**– (1) ಪ್ರಕರಣದ 10 ರ (2) ನೇ ಉಪಪ್ರಕರಣದ ಖಂಡ (xxi) ರಡಿ ರಚಿತವಾದ ಸಹಕಾರ ಶಿಕ್ಷಣ ನಿಧಿಯನ್ನು ರಾಜ್ಯದಲ್ಲಿರುವ ಸಹಕಾರ ಚಳುವಳಿಯ ಪ್ರೋತ್ಸಾಹನಕ್ಕಾಗಿ ಹಾಗೂ ಸಹಕಾರಿಗಳ ಸದಸ್ಯರಿಗೆ, ನಿರ್ದೇಶಕರಿಗೆ ಮತ್ತು ಸಾರ್ವಜನಿಕರಿಗೆ ಸಹಕಾರ ಶಿಕ್ಷಣ ನೀಡಲು ಮತ್ತು ಸಹಕಾರಿಗಳ ಸಿಬ್ಬಂದಿ ವರ್ಗದವರಿಗೆ ತರಬೇತಿ ನೀಡಲು ಉಪಯೋಗಿಸತಕ್ಕದ್ದು.

(2) ಪ್ರತಿ ಸಹಕಾರಿಯು ತನ್ನ ಶಿಕ್ಷಣನಿಧಿ ವಂತಿಗೆಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಗೆ ಪಾವತಿಸತಕ್ಕದ್ದು.

(3) ಸಂಯುಕ್ತ ಸಹಕಾರಿಯು ಸಹಕಾರಿಗಳು ಸಂದಾಯ ಮಾಡಿದ ವಂತಿಗೆಗಳನ್ನು ಹಾಗೂ ಯಾವುದೇ ವ್ಯಕ್ತಿ ಅಥವಾ ಸಂಸ್ಥೆಗಳಿಂದ ಸ್ವೀಕೃತವಾದ ದಾನಗಳನ್ನು ಸಹಕಾರ ಶಿಕ್ಷಣ ನಿಧಿಗೆ ಜಮಾ ಮಾಡತಕ್ಕದ್ದು.

(4) ಪ್ರತಿ ಸಹಕಾರಿಯು ವಾರ್ಷಿಕ ಸಾಮಾನ್ಯ ಸಭೆ ನಡೆದ ದಿನಾಂಕದಿಂದ ಮೂವತ್ತು ದಿನದೊಳಗೆ ಶಿಕ್ಷಣನಿಧಿ ವಂತಿಗೆಯನ್ನು ಸಂಯುಕ್ತ ಸಹಕಾರಿಗೆ ಜಮಾ ಮಾಡತಕ್ಕದ್ದು.

(5) ಸಹಕಾರ ಶಿಕ್ಷಣ ನಿಧಿಯು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ಆಡಳಿತದಲ್ಲಿದ್ದು ಅದರಿಂದ ನಿರ್ವಹಿಸಲ್ಪಡತಕ್ಕದ್ದು ಹಾಗೂ ಸದರಿ ನಿಧಿಯ ನಿರ್ವಹಣೆಯ ಕಾರ್ಯವಿಧಾನವು ನಿಯಮಿಸಬಹುದಾದಂತೆ ಇರತಕ್ಕದ್ದು.

(6) ಆ ಉದ್ದೇಶಕ್ಕಾಗಿ ನಿಯಮಿಸಲಾದಂತೆ ರಚಿಸಲಾದ ಸಲಹಾ ಸಮಿತಿಯ ಅನುಮೋದನೆ ಇಲ್ಲದೆ ಸಹಕಾರ ಶಿಕ್ಷಣ ನಿಧಿಯಿಂದ ಯಾವುದೇ ವೆಚ್ಚವನ್ನು ಮಾಡತಕ್ಕದ್ದಲ್ಲ"

47. 63ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 63 ನೇ ಪ್ರಕರಣದಲ್ಲಿ, ಖಂಡ (ಹೆಚ್) ನಲ್ಲಿ, "ವರ್ಷ ಮುಕ್ತಾಯವಾಗುವ" ಎಂಬ ಪದಗಳಿಗೆ, "ಸಹಕಾರ ವರ್ಷ ಮುಕ್ತಾಯವಾದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

48. 63ಎ ಪ್ರಕರಣದ ಸೇರ್ಪಡೆ.– ಮೂಲ ಅಧಿನಿಯಮದ 63ನೇ ಪ್ರಕರಣದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ –

"**63ಎ. ಸದಸ್ಯರಿಗೆ ಮಾಹಿತಿ ಒದಗಿಸುವುದು.**– ಸಂಯುಕ್ತ ಸಹಕಾರಿಯು ಪ್ರತಿ ಸದಸ್ಯನು ತನಗೆ ಸಂಬಂಧಪಟ್ಟಂತೆ ತನ್ನ ದೈನಂದಿನ ವ್ಯವಹಾರದಲ್ಲಿ ನಿರ್ವಹಿಸುವ ಲೆಕ್ಕಪುಸ್ತಕಗಳನ್ನು ನೋಡಲು ಹಾಗೂ ತತ್ಸಂಬಂಧದ ಮಾಹಿತಿ ಮತ್ತು ಲೆಕ್ಕಗಳನ್ನು ಪಡೆಯಲು ಅವನಿಗೆ ಅವಕಾಶ ನೀಡತಕ್ಕದ್ದು".

49. 64 ನೇ ಪ್ರಕರಣದ ಪ್ರತಿಯೋಜನೆ.– ಮೂಲ ಅಧಿನಿಯಮದ 64 ನೇ ಪ್ರಕರಣಕ್ಕೆ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ –

"**64 ಲೆಕ್ಕಪರಿಶೋಧನೆ.**– (1) ಸಂಯುಕ್ತ ಸಹಕಾರಿಯು ತನ್ನ ಲೆಕ್ಕಪತ್ರಗಳನ್ನು ಪ್ರತಿ ವರ್ಷದಲ್ಲಿ ಕೊನೇ ಪಕ್ಷ ಒಮ್ಮೆಯಾದರೂ ಲೆಕ್ಕಪರಿಶೋಧನಾ ನಿರ್ದೇಶಕನು ಅನುಮೋದಿಸಿದ ಲೆಕ್ಕಪರಿಶೋಧಕರ ಮತ್ತು ಲೆಕ್ಕಪರಿಶೋಧಿಸುವ ಸಂಸ್ಥೆಗಳ ಪಟ್ಟಿಯಲ್ಲಿರುವ ಹಾಗೂ ಅದರ ಸಾಮಾನ್ಯ ಸದಸ್ಯರ ಸಭೆಯಿಂದ ನೇಮಕವಾದ ಲೆಕ್ಕಪರಿಶೋಧಕರಿಂದ ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಯಿಂದ ಪ್ರತಿ ವರ್ಷ ಸೆಪ್ಟಂಬರ್ ಒಂದರೊಳಗಾಗಿ ಲೆಕ್ಕಪರಿಶೋಧನೆ ಮಾಡಿಸತಕ್ಕದ್ದು.

(2) ಒಂದು ಸಹಕಾರಿಯ ಲೆಕ್ಕಪರಿಶೋಧನೆಗೆ ಸಂಬಂಧಪಟ್ಟ ಪ್ರಕರಣ 33ರ ಉಪಬಂಧಗಳು ಯಥೋಚಿತ ವ್ಯತ್ಯಾಸಗಳೊಂದಿಗೆ ಸಂಯುಕ್ತ ಸಹಕಾರಿಗೆ ಅನ್ವಯವಾಗತಕ್ಕದ್ದು".

50. 64ಎ ಪ್ರಕರಣದ ಸೇರ್ಪಡೆ.– ಮೂಲ ಅಧಿನಿಯಮದ 64 ನೇ ಪ್ರಕರಣದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ –

"**64ಎ ರಿಜಿಸ್ಟ್ರಾರನಿಗೆ ವಿಧ್ಯುಕ್ತ ವರದಿಗಳನ್ನು ನೀಡುವುದು.**– ಸಂಯುಕ್ತ ಸಹಕಾರಿಯು ಸಹಕಾರ ವರ್ಷ ಮುಗಿದ ಆರು ತಿಂಗಳೊಳಗೆ, ಈ ಮುಂದಿನ ವಿಧ್ಯುಕ್ತ ವರದಿಗಳನ್ನು ಮತ್ತು ಮಾಹಿತಿಗಳನ್ನು ರಿಜಿಸ್ಟ್ರಾರನಿಗೆ ಸಲ್ಲಿಸತಕ್ಕದ್ದು; ಎಂದರೆ:–

(ಎ) ಹಿಂದಿನ ವರ್ಷದ ಚಟುವಟಿಕೆಗಳ ಬಗ್ಗೆ ವಾರ್ಷಿಕ ವರದಿ ಹಾಗೂ ಮುಂದಿನ ವರ್ಷದ ಕಾರ್ಯಕ್ರಮ;

(ಬಿ) ಅದರ ಪರಿಶೋಧಿತ ಆರ್ಥಿಕ ತ:ಖ್ತೆಗಳು ;

(ಸಿ) ಅದರ ಸಾಮಾನ್ಯ ಸದಸ್ಯರ ಸಭೆಯು ಅನುಮೋದಿಸಿದ ಹೆಚ್ಚುವರಿ ಅಥವಾ ಉಳಿತಾಯ ವಿಲೇವಾರಿಯ ಯೋಜನೆ ;

(ಡಿ) ಸಂಯುಕ್ತ ಸಹಕಾರಿಯ ಉಪವಿಧಿಗಳಿಗೆ ಮಾಡಲಾದ ತಿದ್ದುಪಡಿಗಳು ಇದ್ದಲ್ಲಿ ಅವುಗಳ ಪಟ್ಟಿ ;

(ಇ) ಅದರ ಸಾಮಾನ್ಯ ಸದಸ್ಯರ ಸಭೆಯನ್ನು ನಡೆಸುವ ದಿನಾಂಕ ಮತ್ತು ಅಗತ್ಯವಿದ್ದಾಗ ಚುನಾವಣೆ ನಡೆಸುವ ದಿನಾಂಕದ ಬಗ್ಗೆ ಘೋಷಣೆ;

(ಎಫ್) ನಿರ್ದೇಶಕರುಗಳ ಪಟ್ಟಿ ಮತ್ತು ಅವರ ಪದಾವಧಿ;

(ಜಿ) ಈ ಅಧಿನಿಯಮದ ಉಪಬಂಧಗಳಡಿ ರಿಜಿಸ್ಟ್ರಾರನು ಅಗತ್ಯಪಡಿಸುವ ಇತರೆ ಯಾವುದೇ ಮಾಹಿತಿ."

51. 68ನೇ ಪ್ರಕರಣದ ತಿದ್ದುಪಡಿ: ಮೂಲ ಅಧಿನಿಯಮದ 68ನೇ ಪ್ರಕರಣದ (2)ನೇ ಉಪಪ್ರಕರಣದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು; ಎಂದರೆ –

"(3) ತನ್ನ ನೌಕರನಿಂದ ಹಣ ಮುರಿದುಕೊಳ್ಳಲು ವಿಫಲನಾದರೆ ಅಥವಾ ಮುರಿದುಕೊಂಡ ಮೊತ್ತವನ್ನು ಅಂತಹ ವ್ಯವಕಲನವನ್ನು ಮಾಡಿದ ದಿನಾಂಕದಿಂದ ಹದಿನಾಲ್ಕು ದಿವಸಗಳ ಅವಧಿಯೊಳಗೆ ಸಂಬಂಧಪಟ್ಟ ಸಹಕಾರಿಗೆ ಸಕಾರಣಗಳಿಲ್ಲದೆ ಸಂದಾಯ ಮಾಡಲು ಉದ್ಯೋಗದಾತನು ತಪ್ಪಿದರೆ ಅವನು ಐದು ಸಾವಿರ ರೂಪಾಯಿಗಳ ಜುಲ್ಮಾನೆಯಿಂದ ಅಥವಾ ಆರು ತಿಂಗಳುಗಳ ಕಾರಾವಾಸದಿಂದ ಅಥವಾ ಇವೆರಡರಿಂದಲೂ ದಂಡಿತನಾಗತಕ್ಕದ್ದು.

(4) ಸಹಕಾರಿಯ ಅಥವಾ ಸಂಯುಕ್ತ ಸಹಕಾರಿಯ ಪದಾಧಿಕಾರಿ, ಮುಖ್ಯ ಕಾರ್ಯನಿರ್ವಾಹಕ, ಒಬ್ಬ ನಿರ್ದೇಶಕ ಅಥವಾ ಯಾವೊಬ್ಬ ನೌಕರನು ಸಹಕಾರಿಗೆ ಸೇರಿದ ಪುಸ್ತಕಗಳ, ಲೆಕ್ಕಗಳ, ದಸ್ತಾವೇಜುಗಳ, ದಾಖಲೆಗಳ, ನಗದಿನ, ಭದ್ರತೆಗಳ ಮತ್ತು ಇತರ ಸ್ವತ್ತುಗಳ ಸುಪರ್ದನ್ನು ಹೊಂದಿರುವವನು ಅಧಿಕೃತ ವ್ಯಕ್ತಿಗೆ ಅಂತಹ ಸುಪರ್ದನ್ನು ಬುದ್ಧಿಪೂರ್ವಕವಾಗಿ ಒಪ್ಪಿಸದಿದ್ದಲ್ಲಿ ಅಥವಾ ಅಧಿನಿಯಮದ ಉಪಬಂಧಗಳಡಿ ನೀಡಲಾದ ಸಮನು ಅನ್ನು, ಕೋರಿಕೆಯನ್ನು ಅಥವಾ ಕಾನೂನು ಸಮ್ಮತ ಲಿಖಿತ ಆದೇಶವನ್ನು ಯುಕ್ತ ಕಾರಣವಿಲ್ಲದೆ ಪಾಲಿಸದಿದ್ದಲ್ಲಿ, ಅವನು ಹತ್ತು ಸಾವಿರ ರೂಪಾಯಿಗಳ ಜುಲ್ಮಾನೆಯಿಂದ ಅಥವಾ ಎರಡು ವರ್ಷಗಳ ಕಾರಾವಾಸದಿಂದ ಅಥವಾ ಇವೆರಡರಿಂದಲೂ ದಂಡಿತನಾಗತಕ್ಕದ್ದು.

(5) ಯಾವುದೇ ಸಹಕಾರಿಯ ಅಥವಾ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯು ಮತ್ತು ಮುಖ್ಯ ಕಾರ್ಯನಿರ್ವಾಹಕನು 33ನೇ ಪ್ರಕರಣ ಅಥವಾ 64ನೇ ಪ್ರಕರಣದಡಿ, ಪ್ರಸಂಗಾನುಸಾರ, ಹಿಂದಿನ ವರ್ಷದ ತನ್ನ ಲೆಕ್ಕಪತ್ರಗಳನ್ನು ನಿಗದಿಪಡಿಸಿದ ಅವಧಿಯೊಳಗೆ ಪರಿಶೋಧನೆ ಮಾಡಿಸಲು ಮತ್ತು ಪರಿಶೋಧಿತ ಆರ್ಥಿಕ ತ:ಖ್ತೆಗಳ ಸಹಿತ ಲೆಕ್ಕಪರಿಶೋಧನಾ ವರದಿಯನ್ನು ವಾರ್ಷಿಕ ಸಾಮಾನ್ಯ ಸಭೆಯ ಮುಂದೆ ಮಂಡಿಸಲು ವಿಫಲವಾದರೆ, ಅಂಥ ಸಹಕಾರಿಯ ಅಥವಾ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯ ಪ್ರತಿಯೊಬ್ಬ ನಿರ್ದೇಶಕನು ಮತ್ತು ಮುಖ್ಯಕಾರ್ಯನಿರ್ವಾಹಕನು ಐದು ಸಾವಿರ ರೂಪಾಯಿಗಳ ಜುಲ್ಮಾನೆಯಿಂದ ಅಥವಾ ಆರು ತಿಂಗಳಗಳ ಕಾರಾಗೃಹವಾಸದಿಂದ ಅಥವಾ ಎರಡರಿಂದಲೂ ದಂಡಿತನಾಗತಕ್ಕದ್ದು.

(6) ಯಾವುದೇ ಸಹಕಾರಿಯ ಅಥವಾ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯು ಮತ್ತು ಮುಖ್ಯಕಾರ್ಯನಿರ್ವಾಹಕನು ಸಂದರ್ಭಾನುಸಾರ 34ನೇ ಪ್ರಕರಣ ಅಥವಾ 64ಎ ದ ಪ್ರಕರಣದಡಿ ನಿಗದಿಪಡಿಸಿದ ಅವಧಿಯೊಳಗೆ ರಿಜಿಸ್ಟ್ರಾರನಿಗೆ ಹಾಗೂ ಸಂಯುಕ್ತ ಸಹಕಾರಿಗೆ ವಿದ್ಯುಕ್ತ ವರದಿಗಳನ್ನು ಮತ್ತು ಮಾಹಿತಿಯನ್ನು ಸಲ್ಲಿಸಲು ವಿಫಲವಾದರೆ, ಅಂಥ ಸಹಕಾರಿಯ ಅಥವಾ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯ ಪ್ರತಿಯೊಬ್ಬ ನಿರ್ದೇಶಕನು ಮತ್ತು ಮುಖ್ಯಕಾರ್ಯನಿರ್ವಾಹಕನು ಹತ್ತುಸಾವಿರ ರೂಪಾಯಿಗಳ ಜುಲ್ಮಾನೆಯಿಂದ ಅಥವಾ ಎರಡು ವರ್ಷಗಳ ಕಾರಾಗೃಹವಾಸದಿಂದ ಅಥವಾ ಎರಡರಿಂದಲೂ ದಂಡಿತನಾಗತಕ್ಕದ್ದು.

(7) ಯಾವುದೇ ಸಹಕಾರಿಯ ಅಥವಾ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯು ಮತ್ತು ಮುಖ್ಯಕಾರ್ಯನಿರ್ವಾಹಕನು ಪ್ರಕರಣ 26 ಮತ್ತು ಪ್ರಕರಣ 58 ರಡಿ ಅಗತ್ಯಪಡಿಸಿದಂತೆ ನಿಗದಿತ ಅವಧಿಯೊಳಗೆ ಚುನಾವಣೆಗಳನ್ನು ನಡೆಸಲು ಬೇಕಾದ ಪುಸ್ತಕಗಳನ್ನು, ದಾಖಲೆಗಳನ್ನು ಮತ್ತು ಮಾಹಿತಿಯನ್ನು ಸಹಕಾರ ಚುನಾವಣಾ ಆಯೋಗಕ್ಕೆ ಸಕಾಲದಲ್ಲಿ ಒದಗಿಸಿ ನೆರವು ನೀಡಲು ವಿಫಲವಾದರೆ, ಅಂತಹ ಸಹಕಾರಿಯ ಅಥವಾ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯ ಪ್ರತಿಯೊಬ್ಬ ನಿರ್ದೇಶಕನು ಮತ್ತು ಮುಖ್ಯಕಾರ್ಯನಿರ್ವಾಹಕನು ಹತ್ತುಸಾವಿರ ರೂಪಾಯಿಗಳ ಜುಲ್ಮಾನೆಯಿಂದ ಅಥವಾ ಆರು ತಿಂಗಳ ಕಾರಾಗೃಹವಾಸದಿಂದ ಅಥವಾ ಇವೆರಡರಿಂದಲೂ ದಂಡಿತನಾಗತಕ್ಕದ್ದು.

(8) ಯಾವೊಬ್ಬ ವ್ಯಕ್ತಿಯು ಯಾವುದೇ ಸಹಕಾರಿಯ ಅಥವಾ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯ ಚುನಾವಣೆಗೆ ಪೂರ್ವದಲ್ಲಿ, ಚುನಾವಣೆ ನಡೆಯುವಾಗ ಅಥವಾ ಚುನಾವಣೆಯ ತರುವಾಯದಲ್ಲಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 39ಸಿ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ಭ್ರಷ್ಟ ಆಚರಣೆಯನ್ನು ಅಳವಡಿಸಿದರೆ ಅಥವಾ 39ಕೆ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ಚುನಾವಣಾ ಅಪರಾಧವನ್ನು ಎಸಗಿದರೆ, ಅವನು ಹತ್ತು ಸಾವಿರ ರೂಪಾಯಿಗಳ ಜುಲ್ಮಾನೆಯಿಂದ ಅಥವಾ ಎರಡು ವರ್ಷಗಳ ಕಾರಾಗೃಹವಾಸದಿಂದ ಅಥವಾ ಇವೆರಡರಿಂದಲೂ ದಂಡಿತನಾಗತಕ್ಕದ್ದು."

52. ತೊಂದರೆಗಳನ್ನು ನಿವಾರಿಸುವ ಅಧಿಕಾರ:– (1) ಈ ತಿದ್ದುಪಡಿ ಅಧಿನಿಯಮದ ಉಪಬಂಧಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ರಾಜ್ಯ ಸರ್ಕಾರವು ರಾಜ್ಯಪತ್ರದಲ್ಲಿ ಪ್ರಕಟಿಸುವ ಆದೇಶದ ಮೂಲಕ, ಈ ತೊಂದರೆಯನ್ನು ನಿವಾರಿಸಲು ಅವಶ್ಯವೆಂದು ಅಥವಾ ಯುಕ್ತವೆಂದು ತನಗೆ ಕಂಡುಬರುವಂತಹ ಹಾಗೂ ಮೂಲ ಅಧಿನಿಯಮದ ಮತ್ತು ಸಂವಿಧಾನ (ತೊಂಭತ್ತೇಳನೇ ತಿದ್ದುಪಡಿ) ಅಧಿನಿಯಮ, 2011 ರ ಉಪಬಂಧಗಳಿಗೆ ಅಸಂಗತವಾಗಿರದಂಥ ಉಪಬಂಧಗಳನ್ನು ರಚಿಸಬಹುದು:

ಪರಂತು, ಈ ಪ್ರಕರಣದಡಿ ಅಂಥ ಆದೇಶವನ್ನು ಈ ತಿದ್ದುಪಡಿ ಅಧಿನಿಯಮ ಜಾರಿಗೆ ಬಂದ ದಿನಾಂಕದಿಂದ ಎರಡು ವರ್ಷ ಮುಕ್ತಾಯವಾದ ನಂತರ ಮಾಡತಕ್ಕದ್ದಲ್ಲ.

(2) ಈ ಪ್ರಕರಣದಡಿ ಮಾಡಲಾದ ಪ್ರತಿ ಆದೇಶವನ್ನು ಅದನ್ನು ಹೊರಡಿಸಿದ ಮೇಲೆ ಸಾಧ್ಯವಾದಷ್ಟು ಶೀಘ್ರವಾಗಿ ರಾಜ್ಯ ವಿಧಾನಮಂಡಲದಲ್ಲಿ ಮಂಡಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಜಿ.ಕೆ.ಬೋರೇಗೌಡ
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆ

ಶಾಸನಬದ್ಧ ಸಂಸ್ಥೆ ಎನ್‌ಸಿಡಿಸಿ – ವೆಬ್‌ತಾಣ ಪರಿಚಯ

http://www.ncdc.in/

■ ರಘುನಂದನ ಕೆ.
ಸಹಪ್ರಧಾನ ವ್ಯವಸ್ಥಾಪಕ,
ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.

http://www.ncui.coop

ಶತಮಾನದ ಇತಿಹಾಸವಿರುವ ಭಾರತದ ಸಹಕಾರ ಕ್ಷೇತ್ರದ ಅಭಿವೃದ್ಧಿಗಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ನಿರಂತರವಾಗಿ ಶ್ರಮಿಸುತ್ತಿವೆ. ಸಹಕಾರ ಕ್ಷೇತ್ರಕ್ಕೆ ಹೊಸ ಅವಕಾಶಗಳ ಸಾಧ್ಯತೆಯನ್ನು ಒದಗಿಸುವ ಸಲುವಾಗಿ ಸ್ವ ನಿಯಂತ್ರಣ ಹಾಗೂ ಕ್ರಿಯಾಶೀಲ ಸದಸ್ಯತ್ವ ಸ್ವರೂಪದ ಸ್ವತಂತ್ರ ಕಾಯ್ದೆಯನ್ನು ಪರಿಚಯಿಸಲಾಗಿದೆ. ಆದಾಗ್ಯೂ ಸಹಕಾರ ಕ್ಷೇತ್ರ ನಿರೀಕ್ಷಿತ ಬೆಳವಣಿಗೆ ಹೊಂದುವತ್ತ ನಿಧಾನಗತಿಯಲ್ಲಿ ಸಾಗಿರುವುದನ್ನು ಗಮನಿಸಿ ಪ್ರಸ್ತುತ 97ನೇ ಸಂವಿಧಾನ ತಿದ್ದುಪಡಿಯ ಮೂಲಕವೂ ಸಹಕಾರ ಕ್ಷೇತ್ರವನ್ನು ಬಲಪಡಿಸಲು ಪ್ರಯತ್ನಿಸಲಾಗುತ್ತಿದೆ. ಸಹಕಾರ ಸಂಸ್ಥೆಯನ್ನು ಸ್ಥಾಪನೆ ಮಾಡುವುದನ್ನು ನಾಗರೀಕರ ಮೂಲಭೂತ ಹಕ್ಕಿನ ವ್ಯಾಪ್ತಿಯಡಿಗೆ ತರಲಾಗಿದೆ. ಸಹಕಾರ ಕ್ಷೇತ್ರದ ಮೂಲಕ ದೇಶದ ಎಲ್ಲ ಭಾಗಗಳನ್ನೂ, ಗ್ರಾಮಗಳನ್ನೂ ಆರ್ಥಿಕ ಸ್ವಾವಲಂಬನೆಯತ್ತ ಕೊಂಡೊಯ್ಯಲು ಪ್ರಯತ್ನಗಳು ನಡೆಯುತ್ತಿವೆ.

ಸಹಕಾರ ಕ್ಷೇತ್ರದ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ಕೇಂದ್ರ ಸರ್ಕಾರವು 1962ರಲ್ಲಿ ಎನ್‌ಸಿಡಿಸಿ ಕಾಯ್ದೆಯನ್ನು ಜಾರಿಗೆ ತಂದಿದೆ. ಈ ಕಾಯ್ದೆಯಂತೆ ಕೃಷಿ ಸಚಿವಾಲಯದ ಅಡಿಯಲ್ಲಿ ಕಾರ್ಯನಿರ್ವಹಿಸುವ ಶಾಸನಬದ್ಧ ಸಂಸ್ಥೆಯಾಗಿ 1963ರಲ್ಲಿ ನ್ಯಾಷನಲ್ ಕೋ-ಆಪರೇಟೀವ್ ಡೆವಲಪ್‌ಮೆಂಟ್ ಕಾರ್ಪೋರೇಷನ್‌ನ್ನು ಸ್ಥಾಪಿಸಲಾಗಿದೆ. ರಾಷ್ಟ್ರೀಯ ಮಟ್ಟದಲ್ಲಿ ದೇಶದ ಎಲ್ಲ ಭಾಗಗಳ ಸಹಕಾರ ಕ್ಷೇತ್ರವನ್ನು ಬೆಳೆಸುವ ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಈ ಸಂಸ್ಥೆ ಕಾರ್ಯನಿರ್ವಹಿಸುತ್ತಿದೆ. ಸಹಕಾರ ಕ್ಷೇತ್ರದಲ್ಲಿ ಅನೇಕ ವಿಧದ ಸಹಕಾರ ಸಂಸ್ಥೆಗಳ ನೋಂದಣಿ ಹಾಗೂ ಬೆಳವಣಿಗೆಗೆ ಪ್ರೋತ್ಸಾಹಿಸುತ್ತ ಹಣಕಾಸು ನೆರವಿನ ಮೂಲಕ ಗ್ರಾಮೀಣ ಭಾಗಗಳನ್ನು ಸದೃಢಗೊಳಿಸುವ ಪ್ರಯತ್ನ ಈ ಸಂಸ್ಥೆಯದು. ಇದರ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಒದಗಿಸುವ ಅನುಕೂಲಕ್ಕಾಗಿ ಎನ್‌ಸಿಡಿಸಿ ವೆಬ್‌ತಾಣವನ್ನು ಪರಿಚಯಿಸಲಾಗುತ್ತಿದೆ.

ವೆಬ್‌ತಾಣ 08 : http://www.ncdc.in/

● ನ್ಯಾಷನಲ್ ಕೋ-ಆಪರೇಟೀವ್ ಡೆವಲಪ್‌ಮೆಂಟ್ ಕಾರ್ಪೋರೇಷನ್ (ಎನ್‌ಸಿಡಿಸಿ) ಈ ಸಂಸ್ಥೆಯ ಪ್ರಾರಂಭ, ಗುರಿ ಮತ್ತು ಉದ್ದೇಶಗಳು, ಆಡಳಿತ ನಿರ್ವಹಣೆಯ ಸ್ವರೂಪ, ಕಾರ್ಯಚಟುವಟಿಕೆ ಹಾಗೂ ಸಂಪನ್ಮೂಲ ಕ್ರೋಢಿಕರಣಗಳ ಮಾಹಿತಿಯನ್ನು ಈ ವೆಬ್‌ತಾಣದಲ್ಲಿ ಪಡೆಯಬಹುದು.

● ಕೇಂದ್ರ ಕೃಷಿ ಸಚಿವರ ಸಂದೇಶವೂ ಸೇರಿದಂತೆ ಎನ್‌ಸಿಡಿಸಿ ಕಾಯ್ದೆ, ನಿಯಮ ಹಾಗೂ ನಿಬಂಧನೆಗಳು, ಇತ್ತೀಚೆಗಿನ ತಿದ್ದುಪಡಿಗಳನ್ನು ಈ ವೆಬ್‌ತಾಣದ ಮೂಲಕ ಪಡೆಯಬಹುದಾಗಿದೆ.

● ಮಾರುಕಟ್ಟೆ, ನೇಕಾರಿಕೆ, ಗ್ರಾಹಕ ಕೇಂದ್ರಿತ, ಮೀನುಗಾರಿಕೆ, ಹಾಲು ಉತ್ಪಾದನೆ ಇತ್ಯಾದಿ ಕಾರ್ಯಚಟುವಟಿಕೆಗಳನ್ನು ಹೊಂದಿರುವ ದೇಶದ ವಿವಿಧ ಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಕಾರ ಸಂಸ್ಥೆಗಳಿಗೆ ನೀಡಿರುವ ಹಾಗೂ ನೀಡಬಹುದಾದ ಅನುದಾನಗಳ ಬಗೆಗಿನ ವಿವರ,

ನೆರವು ಪಡೆಯುವ ಬಗ್ಗೆ ಷರತ್ತು, ನಿಬಂಧನೆಗಳ ಮಾಹಿತಿ, ನೆರವಿನ ಮಾದರಿ ಹಾಗೂ ಸ್ವರೂಪ ಇತ್ಯಾದಿ ವಿವರಗಳನ್ನು ತಿಳಿದುಕೊಳ್ಳಬಹುದು.

● ಸಹಕಾರ ಸಂಸ್ಥೆಗಳಿಗೆ ಹಣಕಾಸು ಸಹಾಯದ ಉದ್ದೇಶ, ಮಂಜೂರಾತಿಯ ವಿಧಾನ, ಪ್ರಸ್ತಾವನೆಗಳು, ಪ್ರಸಕ್ತ ಸಾಲಿನ ಮಂಜೂರಾತಿಗಳು, ಹಣಕಾಸು ವ್ಯವಹಾರದ ಮಾರ್ಗಸೂಚಿಗಳು, ವಿವಿಧ ಅರ್ಜಿಗಳ ನಮೂನೆಗಳನ್ನು ಈ ವೆಬ್‌ತಾಣದಲ್ಲಿ ಪಡೆಯಬಹುದು.

● ಸಹಕಾರ ಕ್ಷೇತ್ರದ ಅಭಿವೃದ್ಧಿಯ ಮೌಲ್ಯಮಾಪನ ಮತ್ತು ಅಂಕಿ ಅಂಶಗಳ ಮಾಹಿತಿ, ಸಂಸ್ಥೆಗಳಿಗೆ ಒದಗಿಸುವ ತರಬೇತಿ, ಸಲಹೆ, ಸಂಶೋಧನೆ, ಪ್ರಚಾರ ಮತ್ತು ಅಭಿವೃದ್ಧಿಯ ಯೋಜನೆಗಳ ಮಾಹಿತಿ, ಯಶಸ್ವಿ ಸಹಕಾರ ಸಂಸ್ಥೆಗಳ ಪಟ್ಟಿ, ರಾಷ್ಟ್ರೀಯ ಹಾಗೂ ರಾಜ್ಯ ಪ್ರಶಸ್ತಿ ವಿಜೇತ ಸಹಕಾರ ಸಂಸ್ಥೆಗಳ ಪಟ್ಟಿಯನ್ನು ಈ ತಾಣದಲ್ಲಿ ನೋಡಬಹುದು.

● ವಿವಿಧ ವಿಷಯಗಳಿಗೆ ಸಂಬಂಧಿಸಿದ ಉಸ್ತುವಾರಿ ಅಧಿಕಾರಿಗಳ ಪಟ್ಟಿ, ವಿಳಾಸ ಹಾಗೂ ಸಂಪರ್ಕ ವಿವರಗಳು, ಎನ್‌ಸಿಡಿಸಿಯ ಪ್ರಾದೇಶಿಕ ನಿರ್ದೇಶನಾಲಯಗಳ ವಿಳಾಸ, ಸಂಪರ್ಕದ ವಿವರ, ಸದರಿ ನಿರ್ದೇಶನಾಲಯಗಳ ಯೋಜನೆಗಳು ಹಾಗೂ ಸಾಧನೆಗಳ ವಿವರಗಳನ್ನು ಪಡೆಯಬಹುದು.

● ಎನ್‌ಸಿಡಿಸಿ ಇದರ ವಾರ್ಷಿಕ ವರದಿ, 2011-12ನೇ ಸಾಲಿನ ಸಾಧನೆಗಳು, ಇದರಿಂದ ಪ್ರಕಟಿಸಲ್ಪಡುವ ವಾರ್ತಾಪತ್ರ, ವಿವಿಧ ಕಾರ್ಯಕ್ರಮಗಳ ಚಿತ್ರಗಳು ಹಾಗೂ ಎನ್‌ಸಿಡಿಸಿ ಪ್ರಾಯೋಜಿತ ಸಾಕ್ಷ್ಯಚಿತ್ರಗಳನ್ನು ಕೂಡ ಈ ವೆಬ್‌ತಾಣದಲ್ಲಿ ನೋಡಬಹುದು.

ಜಗತ್ತಿನ ಅತಿದೊಡ್ಡ ಸಹಕಾರ ಕ್ಷೇತ್ರದ ಹಿರಿಮೆಯನ್ನು ಹೊಂದಿರುವ ಭಾರತದ ವಿಸ್ತರಿಸಿದ ಸಹಕಾರ ಕ್ಷೇತ್ರವನ್ನು ಏಕರೂಪದಲ್ಲಿ ಬೆಸೆಯುವ ಸಲುವಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ನಡೆಸಿರುವ ಪ್ರಯತ್ನದ ಪ್ರತಿರೂಪವಾಗಿ ಅನೇಕ ಸಂಸ್ಥೆಗಳು ಸ್ಥಾಪಿಸಲ್ಪಟ್ಟು ಕಾರ್ಯೋನ್ಮುಖವಾಗಿವೆ. ಇದರಲ್ಲಿ ಕೃಷಿ ಮತ್ತು ಗ್ರಾಮೀಣ ಚಟುವಟಿಕೆಗಳನ್ನು ಸಹಕಾರ ಕ್ಷೇತ್ರದ ಮೂಲಕ ಪ್ರೋತ್ಸಾಹಿಸುವ ಹಾಗೂ ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿರುವ ನ್ಯಾಷನಲ್ ಕೋ-ಆಪರೇಟೀವ್ ಡೆವಲಪ್‌ಮೆಂಟ್ ಕಾರ್ಪೋರೇಷನ್ – ಎನ್‌ಸಿಡಿಸಿ ಇದು ರಾಷ್ಟ್ರಮಟ್ಟದ ಅನನ್ಯ ಶಾಸನಬದ್ಧ ಸಂಸ್ಥೆಯಾಗಿದೆ. ಇದರ ವೆಬ್‌ತಾಣ ಎನ್‌ಸಿಡಿಸಿಯ ಯೋಜನೆಗಳು ಹಾಗೂ ಮಾಹಿತಿಯನ್ನು ಒದಗಿಸುವ ತಾಣವಾಗಿದ್ದು ಸಹಕಾರ ಕ್ಷೇತ್ರದಲ್ಲಿ ರಾಷ್ಟ್ರಮಟ್ಟದಲ್ಲಿ ಆಗುತ್ತಿರುವ ಬದಲಾವಣೆಗಳನ್ನು ಅರಿಯುವ ಆಸಕ್ತಿಯನ್ನು ರಾಜ್ಯದ ಸಹಕಾರಿಗಳಲ್ಲಿ ಮೂಡಿಸಲಿ ಎನ್ನುವ ಆಶಯದೊಂದಿಗೆ ಈ ವೆಬ್‌ತಾಣವನ್ನು ಪರಿಚಯಿಸಲಾಗಿದೆ. –

ಸಹಕಾರ ಭಾರತಿಯ 4ನೇ

ಗಣ್ಯರು ಹೇಳಿದ್ದು

ಶ್ರೀ ಸತೀಶ ಮರಾಠೆ
ಸಹಕಾರ ಭಾರತಿ ರಾಷ್ಟ್ರೀಯ ಅಧ್ಯಕ್ಷರು

ಸಹಕಾರಿ ಕ್ಷೇತ್ರದ ಮೇಲೆ ದೊಡ್ಡ ಜವಾಬ್ದಾರಿಯಿದೆ.

ಜವಾಬ್ದಾರಿಯ ಅರಿವು ಮೂಡಿಸುವ ಉದ್ದೇಶಕ್ಕಾಗಿ ಈ ಅಧಿವೇಶನ

ರಾಷ್ಟ್ರಾದ್ಯಂತ ಸಹಕಾರ ಕ್ಷೇತ್ರದಲ್ಲಿ ಉತ್ತಮ ಸಂಪರ್ಕಜಾಲವನ್ನು ಆಂತರಿಕ ಬಾಂಧವ್ಯ ಹೊಂದುವ ಸಂಕಲ್ಪ ಎಲ್ಲ ಸಹಕಾರಿಗಳ ಜೊತೆಗೂಡಿ ಕೆಲಸಮಾಡುವ ಅಭಿಲಾಷೆ

ಬೇರೆ ಯಾವುದೇ ಸಹಕಾರಿ ಸಂಸ್ಥೆಯ ಜೊತೆಗೆ ಪೈಪೋಟಿ ಸಹಕಾರ ಭಾರತಿಯ ಉದ್ದೇಶವಲ್ಲ.

ಶ್ರೀ ಸುರೇಶ ಪ್ರಭು

ದೇಶದ ಎಲ್ಲ ರಂಗಗಳನ್ನು ಸಹಕಾರ ಕ್ಷೇತ್ರ ಮುಟ್ಟಬೇಕು. ದೇಶದ ಪ್ರಚಲಿತ ವಿದ್ಯಮಾನಗಳು ಸಹಕಾರ ಕ್ಷೇತ್ರಕ್ಕೆ ಸವಾಲುಗಳು. ಇವುಗಳನ್ನು ಎದುರಿಸುವ ಸಾಮರ್ಥ್ಯ ಸಹಕಾರ ಕ್ಷೇತ್ರ ಗಳಿಸಿಕೊಳ್ಳಬೇಕು. ಸಹಕಾರಿ ಸಂಸ್ಥೆಗಳು ಆರ್ಥಿಕ ಸಂಘಟನೆಗಳಾಗಿ ಕಾರ್ಯನಿರ್ವಹಿಸಬೇಕು. 97 ನೇ ಸಂವಿಧಾನ ತಿದ್ದುಪಡಿಯಿಂದ ಸಹಕಾರ ಕ್ಷೇತ್ರಕ್ಕೆ ಸಂವಿಧಾನದ ಮಾನ್ಯತೆ ಸಿಕ್ಕಿದೆ. ಸಹಕಾರಿಗಳಿಗೆ ಸ್ವಾಯತ್ತತೆ ಸಿಕ್ಕಿದೆ. ರೈತರು ಮತ್ತು ಗ್ರಾಹಕರ ಮಧ್ಯ ನೇರ ಸಂಪರ್ಕ ಸಹಕಾರ ಕ್ಷೇತ್ರದ ಆದ್ಯತೆಯಾಗಬೇಕು. ಸ್ವಯಂ ಉದ್ಯೋಗ ನಿರ್ಮಾಣಕ್ಕೆ ಹೆಚ್ಚು ಆದ್ಯತೆ ಸಹಕಾರ ಕ್ಷೇತ್ರದಿಂದಾಗಬೇಕು. ವಿದ್ಯುತ್ ಉತ್ಪಾದನೆ ವಿತರಣೆಯ ಕ್ಷೇತ್ರಕ್ಕೂ ಸಹಕಾರ ವ್ಯಾಪ್ತಿ ವಿಸ್ತೃತವಾಗಬೇಕು. ಸರಕಾರದ ನೀತಿನಿರೂಪಣೆಗಳು ಸಹಕಾರ ಕ್ಷೇತ್ರದ ಅಬಿವೃದ್ಧಿಗೆ ಪೂರಕವಾಗಿರಬೇಕು. ಸ್ವಸಹಾಯ ಗುಂಪುಗಳ ನಿರ್ವಹಣೆ ಸಹಕಾರಿ ಕ್ಷೇತ್ರಕ್ಕೆ ಸದವಕಾಶ. ಸಹಕಾರಿ ಶಿಕ್ಷಣ ಹಾಗೂ ತರಬೇತಿ ಪರಿಣಾಮಕಾರಿಯಾಗಿರಬೇಕು.

ಶ್ರೀ ಜಗದೀಶ ಶೆಟ್ಟರ್
ಮುಖ್ಯಮಂತ್ರಿಗಳು

ಭಾರತದ ಸಂಕೀರ್ಣ ವ್ಯವಸ್ಥೆಯಲ್ಲಿ ಎಲ್ಲ ಸಮಸ್ಯೆಗಳಿಗೆ ಪರಿಹಾರ ಒದಗಿಸುವ ಸಾಮರ್ಥ್ಯ ಸಹಕಾರ ಕ್ಷೇತ್ರಕ್ಕಿದೆ.

ಸಹಕಾರ ಕ್ಷೇತ್ರವನ್ನು ಸಧೃಡಗೊಳಿಸುವದು ಇಂದಿನ ಅವಶ್ಯಕತೆ

ಸೌಹಾರ್ದ ಸಹಕಾರಿ ಕಾಯ್ದೆ ಜಾರಿಗೆ ತರುವಲ್ಲಿ ಇಡೀ ದೇಶಕ್ಕೆ ಕರ್ನಾಟಕ ಮಾದರಿ.

ಸಂವಿಧಾನ 97ನೇ ತಿದ್ದುಪಡಿ ಆಧಾರಿತ ರಾಜ್ಯದ ಸಹಕಾರಿ ಕಾಯ್ದೆಗಳಿಗೂ ತಿದ್ದುಪಡಿ ತರಲಾಗಿದೆ.

ಸಹಕಾರಿ ನೌಕರ ವರ್ಗದವರಿಗೆ ಕನಿಷ್ಠವೇತನ ಜಾರಿಗೆ ಸರಕಾರದ ಚಿಂತನೆ.

ರಾಷ್ಟ್ರೀಯ ಅಧಿವೇಶನ

ನವಚೇತನ ನಿರ್ಮಾಣದ ಮಂತ್ರದೊಂದಿಗೆ ಸಹಕಾರ ಭಾರತೀಯ 4ನೇ ರಾಷ್ಟ್ರೀಯ ಅಧಿವೇಶನವು ಬೆಂಗಳೂರಿನ ನ್ಯಾಷನಲ್ ಹೈಸ್ಕೂಲ್ ಮೈದಾನದಲ್ಲಿ ದಿ : 17,18,19 ಜನವರಿ 2013ರಂದು ನಡೆಯಿತು. ದಿನಾಂಕ 18 ಜನವರಿ 2013ರಂದು ಕಾರ್ಯಕ್ರಮವನ್ನು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ ಶ್ರೀ ಮೋಹನ.ಜಿ.ಭಾಗವತರವರು ಉದ್ಘಾಟಿಸಿದರು.

ಕರ್ನಾಟಕದ ಮುಖ್ಯಮಂತ್ರಿ ಶ್ರೀ ಜಗದೀಶ ಶೆಟ್ಟರ್‌ರವರು ಅಧ್ಯಕ್ಷತೆ ವಹಿಸಿದ್ದರು. ಸಂಸದ ಶ್ರೀ ಅನಂತಕುಮಾರರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಅಧಿವೇಶನದ ಸ್ವಾಗತ ಸಮಿತಿ ಅಧ್ಯಕ್ಷ ಶ್ರೀ ಆರ್.ಎಮ್.ಮಂಜುನಾಥಗೌಡರವರು ಸ್ವಾಗತ ಭಾಷಣ ಮಾಡಿದರು. ಸಹಕಾರ ಭಾರತಿಯ ರಾಷ್ಟ್ರೀಯ ಅಧ್ಯಕ್ಷ ಶ್ರೀ ಸತೀಶ ಮರಾಠೆಯವರು ಪ್ರಾಸ್ತಾವಿಕ ಭಾಷಣ ಮಾಡಿದರು. ಅಧಿವೇಶನದ ಅಂಗವಾಗಿ ಇಂಗ್ಲೀಷ್ ಹಾಗೂ ಕನ್ನಡ ಭಾಷೆಗಳಲ್ಲಿ "ಸಹಕಾರ ಬೆಳಕು" ಸ್ಮರಣಿಕೆಗಳನ್ನು ಬಿಡುಗಡೆಮಾಡಲಾಯಿತು. ಜಂಟಿ ಕಾರ್ಯದರ್ಶಿ ಶ್ರೀ ರಮೇಶ ವೈದ್ಯರವರು ವಂದನಾರ್ಪಣೆ ಮಾಡಿದರು.

ದಿನಾಂಕ 17 ರಂದು ಅಧಿವೇಶನದ ಅಂಗವಾಗಿ ಏರ್ಪಡಿಸಿದ್ದ ಪ್ರದರ್ಶಿನಿಯನ್ನು ಹಿರಿಯ ಸಹಕಾರಿ ಹಾಗೂ ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದ ಅಧ್ಯಕ್ಷ ಶ್ರೀ ಹೆಚ್.ಕೆ.ಪಾಟೀಲ್ ಉದ್ಘಾಟಿಸಿದರು. ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷ ಶ್ರೀ ಜಿ.ಟಿ.ದೇವೇಗೌಡರವರು ಅಧ್ಯಕ್ಷತೆ ವಹಿಸಿದ್ದರು. ರಾಜ್ಯದ ವಿವಿಧ ಸಹಕಾರಿ ಸಂಸ್ಥೆಗಳು ತಮ್ಮ ವಿವಿಧ ಕಾರ್ಯಚಟುವಟಿಕೆಗಳ ಪ್ರಗತಿಯನ್ನು ಬಿಂಬಿಸುವ ಪ್ರದರ್ಶಿನಿಯನ್ನು ವ್ಯವಸ್ಥೆಮಾಡಿದ್ದರು. ದಿನಾಂಕ 18 ಹಾಗೂ 19 ಮಧ್ಯಾಹ್ನದವರೆವಿಗೂ ಅನೇಕ ವಿಚಾರಗಳ ಬಗ್ಗೆ ಗೋಷ್ಠಿಗಳು ನಡೆದವು, ಅನೇಕ ಆರ್ಥಿಕ ತಜ್ಞರು, ಸಹಕಾರಿ ಮುಖಂಡರು ವಿವಿಧ ವಿಷಯಗಳ ಬಗ್ಗೆ ಸುದೀರ್ಘವಾಗಿ ವಿಚಾರ ಮಂಥನ ನಡೆಸಿದರು.

ದಿನಾಂಕ 19ರಂದು ಧರ್ಮಸ್ಥಳದ ಡಾ.ವೀರೇಂದ್ರ ಹೆಗ್ಗಡೆಯವರಿಂದ ಅಧ್ಯಕ್ಷತೆ. ಕೇಂದ್ರದ ಮಾಜಿಸಚಿವ ಶ್ರೀ ಸುರೇಶ ಪ್ರಭುಇವರು ಸಮಾರೋಪ ಭಾಷಣ ಮಾಡಿದರು. ಸಮಾರಂಭದಲ್ಲಿ ವಿವಿಧ ರಾಜ್ಯಗಳ 3000 ಕ್ಕೂ ಹೆಚ್ಚು ಪ್ರತಿನಿಧಿಗಳು ಹಾಗೂ ಕರ್ನಾಟಕದಿಂದ 3000ಕ್ಕೂ ಹೆಚ್ಚು ಒಟ್ಟಾರೆ ದೇಶದ 350 ಜಿಲ್ಲೆಗಳ 6000 ಪ್ರತಿನಿಧಿಗಳು 1500 ಸಹಕಾರ ಸಂಸ್ಥೆಗಳು 70,00000 ಸದಸ್ಯರ ಪ್ರಾತಿನಿಧಿತ್ವ ವಹಿಸಿದ್ದರು.

ಸಂಯುಕ್ತ ಸಹಕಾರಿಯ ಸಿ.ಡಿ. ಹಾಗೂ ಪ್ರಕಟಣೆಗಳ ಬಿಡುಗಡೆ



ಸೌಹಾರ್ದ ಸಹಕಾರಿ ಚಳುವಳಿಯ ಕಾರ್ಯಚಟುವಟಿಕೆಗಳ ಕುರಿತ ಸಿ.ಡಿ. ಹಾಗೂ ವಿಶಿಷ್ಟ ರೀತಿಯ ಸಹಕಾರಿ ಸಂಸ್ಥೆಗಳ ಕಾರ್ಯಚಟುವಟಿಕೆಗಳ ಕುರಿತ ಕನ್ನಡ ಹಾಗೂ ಇಂಗ್ಲೀಷ್ ಪುಸ್ತಕಗಳನ್ನು ಬಿಡುಗಡೆಗೊಳಿಸಲಾಯಿತು.

ಈ ಅಧಿವೇಶನ ಭಾರತ ದರ್ಶನದಂತೆ ಅನಿಸುತ್ತದೆ. ಇಲ್ಲಿ ಭಾಗವಹಿಸಿದವರೆಲ್ಲ ಒಂದು ಉತ್ತಮ ಕಾರ್ಯಕ್ಕಾಗಿ ಸೇರಿದ್ದೇವೆ. ನಮ್ಮದು ಭವ್ಯ ಇತಿಹಾಸವಿರುವ ಹೆಮ್ಮೆಯ ದೇಶ. ಉತ್ತಮ ಪ್ರಗತಿ ಸಾಧಿಸಿದ ದೇಶ. ರೈತರು ಸ್ವಾವಲಂಬನೆಗೆ, ಮಹಿಳೆಯರ ಆರ್ಥಿಕ ಸಬಲಿಕರಣಕ್ಕೆ, ಯುವಜನರಿಗೆ ಉದ್ಯೋಗಕ್ಕೆ ಸಹಕಾರ ಕ್ಷೇತ್ರ ಉತ್ತಮ ಆಯ್ಕೆ. ಸಹಕಾರಿ ಕ್ಷೇತ್ರದ ಕಾರ್ಯನಿರ್ವಹಣೆಯೆಂದರೆ ಪ್ರಗತಿಯಲ್ಲಿ ಪಾಲುದಾರನಿದ್ದಂತಾಗಬೇಕು. – **ಡಾ.ವೀರೇಂದ್ರ ಹೆಗ್ಗಡೆ,** ಧರ್ಮಾಧಿಕಾರಿಗಳು, ಶ್ರೀಕ್ಷೇತ್ರ ಧರ್ಮಸ್ಥಳ.



ಶ್ರೀ ಅನಂತಕುಮಾರ
ಲೋಕಸಭಾ ಸದಸ್ಯರು, ಬೆಂಗಳೂರು

ಸಹಕಾರ ಕ್ಷೇತ್ರದ ಸಾಧನೆ ಶ್ಲಾಘನೀಯ. ಸಹಕಾರ ಕ್ಷೇತ್ರದ ಬೆಳವಣಿಗೆಗೆ ಸಮಾಜ ಹಾಗೂ ಸರಕಾರಗಳು ಪ್ರೋತ್ಸಾಹಿಸುವುದು ಅಗತ್ಯ. ಸಹಕಾರ ಕ್ಷೇತ್ರಕ್ಕೆ ಸಂವಿಧಾನದ ಮಾನ್ಯತೆ ದೊರಕಿರುವುದು ಸ್ವಾಗತಾರ್ಹ.ಇದರಿಂದಾಗಿ ಜವಾಬ್ದಾರಿ ಹೆಚ್ಚಿದೆ. ಸಹಕಾರಿ ಸಂಘಟನೆಗಳ ಬೆಳವಣಿಗೆಗೆ ಪೂರಕವಾಗಿ ಸರಕಾರ ಚಿಂತನೆ ಮಾಡುವುದು ಒಳಿತು. ಸಹಕಾರ ಕ್ಷೇತ್ರಕ್ಕೆ ಎಲ್ಲ ರೀತಿಯ ತೆರಿಗೆಗಳಿಂದ ವಿನಾಯಿತಿ ಘೋಷಿಸಬೇಕು. ನೇರ ತೆರಿಗೆ ಸಂಹಿತೆ ಒಂದು ವೇಳೆ ಜಾರಿಗೆ ಬಂದದ್ದೆ ಆದರೆ ಸಹಕಾರ ಕ್ಷೇತ್ರಕ್ಕೆ ಅನ್ವಯಿಸಬಾರದು. ಸಂಸತ್ತಿನಲ್ಲಿ ಈ ಬಗ್ಗೆ ಅಗತ್ಯ ಹೋರಾಟ ನಡೆಸಲಾಗುವುದು.

ಸ್ವಾಭಿಮಾನಿ ಸಹಕಾರಿ

Swabhimani Sahakari, Monthly, Posted at GPO-MBC Bengaluru Post Office 560001,
Posting Day 12th. Registered No. RNP/BGS/2094/2011-13
RNI No. KARBIL - 2004/18001
Pages 20

ಶ್ರೀ ಮೋಹನ.ಜಿ.ಭಾಗವತ

ಪೂಜ್ಯ ಸರಸಂಘಚಾಲಕ

ಭಾರತ ಇಡೀ ಪ್ರಪಂಚಕ್ಕೆ ಸಹಕಾರ ಶಾಂತಿ ಸಹಬಾಳ್ವೆ ನೀಡಿದ ದೇಶ. ಸಹಕಾರ ಈ ದೇಶದ ಸಂಸ್ಕಾರ. ಸಹಕಾರ ಒಂದು ಪದ್ಧತಿಯಾಗಿ ಬೆಳೆದು ಬಂದಿದೆ. ಇದೇ ಜಗತ್ತಿನ ಪದ್ಧತಿಯಾಗಿ ಬೆಳೆಯಬೇಕೆಂಬುದು ಸಹಕಾರ ಭಾರತೀಯ ಉದ್ದೇಶ.
ಸಹಕಾರಿ ಚಳುವಳಿ ಪಾಶ್ಚಿಮಾತ್ಯ ರಾಷ್ಟ್ರಗಳ ಕೊಡುಗೆ ಅಲ್ಲ. ಸಹಕಾರ ಆರ್ಥಿಕ ವ್ಯವಸ್ಥೆಯಾಗಿಸಿಕೊಳ್ಳಲು ರಾಬರ್ಟ್ ಓವನ್ ದಾರಿ ತೋರಿಸಿದ.
ಮಾನವ ಎಲ್ಲ ಪ್ರಾಣಿಗಳಿಗಿಂತ ಬುದ್ಧಿವಂತ ಆದರೆ ಅತ್ಯಂತ ದುರ್ಬಲ. ಆರ್ಥಿಕ ಅಭಿವೃದ್ಧಿಗಾಗಿ ಸಹಯೋಗ ನೀಡುವುದು ಸಹಕಾರ. ಆರ್ಥಿಕ ಸಶಕ್ತೀಕರಣಕ್ಕಾಗಿ ಸಹಯೋಗ ನೀಡುವುದು ಸಹಕಾರ ಕ್ಷೇತ್ರವನ್ನು ಬಲಪಡಿಸುವುದು ಅಗತ್ಯ.
ಸ್ವಯಂ ಶಿಸ್ತು ಸಹಕಾರಿಗಳಲ್ಲಿ ಅವಶ್ಯಕ. ನಮ್ಮ ಪಾಲಿನ ಕರ್ಮವನ್ನು ಶ್ರದ್ಧೆಯಿಂದ ಮಾಡಬೇಕು.
ರಾಜಕಾರಣಕ್ಕೆ ಇಲ್ಲಿ ಅವಕಾಶವಿರುವುದಿಲ್ಲ.
ಮಾನವೀಯ ಮೌಲ್ಯಗಳಿಗೆ ಪ್ರಥಮ ಆದ್ಯತೆ ಸ್ವಾವಲಂಬನೆ ಮತ್ತು ಅಹಿಂಸೆ ಸ್ವಾತಂತ್ರದ ಮೂಲ ಧ್ಯೇಯ. ಸ್ವಾರ್ಥಕ್ಕೆ ಅವಕಾಶವಿಲ್ಲ. ಪಾರದರ್ಶಕತೆಗೆ ಪ್ರಾಶಸ್ತ್ಯವಿರಬೇಕು. ಮಾದರಿ ಸಹಕಾರಿ ಕ್ಷೇತ್ರದ ನಿರ್ಮಾಣ ಮಾದರಿ ಸಹಕಾರ ಸಂಘಗಳಿಂದ ಸಾಧ್ಯ. ಸಹಕಾರ ಭಾರತಿಯನ್ನು ವಿಶ್ವವ್ಯಾಪಿಯನ್ನಾಗಿ ಮಾಡಿ. ಸಹಕಾರಿ ವಿಶ್ವವನ್ನು ನಿರ್ಮಾಣ ಮಾಡಿ.

ಶ್ರೀ ಹೆಚ್.ಕೆ.ಪಾಟೀಲ,

ಅಧ್ಯಕ್ಷರು, ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ ಬೆಂಗಳೂರು.

ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಸಹಕಾರಿ ಕ್ಷೇತ್ರದ ಕೊಡುಗೆ ಮಹತ್ವದ್ದು. ಸಹಕಾರ ಕ್ಷೇತ್ರದ ಉತ್ತಮ ಕಾರ್ಯನಿರ್ವಹಣೆಗೆ ಸರಕಾರದ ಪ್ರೋತ್ಸಾಹ ಅಗತ್ಯ. 97ನೇ ಸಂವಿಧನ ತಿದ್ದುಪಡಿಯಿಂದ ಹಾಗೂ ರಾಜ್ಯದಲ್ಲಿ ಸಹಕಾರಿ ಕಾಯ್ದೆಗಳ ತಿದ್ದುಪಡಿಯಿಂದ ಸಹಕಾರ ಕ್ಷೇತ್ರದ ಕಾರ್ಯಚಟುವಟಿಕೆಗಳಿಗೆ ಮಹತ್ವದ ಬದಲಾವಣೆ ನಿರೀಕ್ಷಿಸಬಹುದಾಗಿದೆ. ಸಹಕಾರ ಕ್ಷೇತ್ರದ ವ್ಯಾಪ್ತಿ ವಿಸ್ತೃತವಾಗಲು ಅವಕಾಶವಿದೆ. ಅವಕಾಶಗಳ ಸದುಪಯೋಗಕ್ಕೆ ನಿರಂತರ ಚಿಂತನೆ ಹಾಗೂ ಪರಿಣಾಮಕಾರಿ ಕ್ರೀಯಾಯೋಜನೆ ಅಗತ್ಯ. ಇದೊಂದು ಅತ್ಯಂತ ಸುಂದರ ಹಾಗೂ ಪ್ರಯೋಜನಕಾರಿ ಅಧಿವೇಶನ.

ಶ್ರೀ ಜಿ.ಟಿ.ದೇವೇಗೌಡ

ಅಧ್ಯಕ್ಷರು, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ

ಕರ್ನಾಟಕದಲ್ಲಿ ಸಹಕಾರ ಕ್ಷೇತ್ರದ ಸಾಧನೆ ಉತ್ತಮ. ಆದರೆ ಸಾಧಿಸಬೇಕಾದುದು ಇನ್ನೂ ಇದೆ. ದೇಶದ ಸಹಕಾರ ಕ್ಷೇತ್ರದಲ್ಲಿ ಕರ್ನಾಟಕಕ್ಕೆ ಒಂದನೇ ಸ್ಥಾನ ಪಡೆಯಲು ಪ್ರಯತ್ನ ನಡೆಯಬೇಕು. ದೇಶದ ಹಾಗೂ ರಾಜ್ಯದ ಎಲ್ಲ ಸಹಕಾರಿಗಳನ್ನು ಒಂದುಗೂಡಿಸಿರುವ ಈ ಅಧಿವೇಶನದಲ್ಲಿ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಪೂರಕ ವಿಷಯಗಳ ಸಮಗ್ರ ಚಿಂತನೆ ಅಗತ್ಯ.
ಸಹಕಾರಿ ಕ್ಷೇತ್ರ ತೆರಿಗೆ ಮುಕ್ತ ವಲಯವಾಗಬೇಕು. ಸಹಕಾರಿ ಕ್ಷೇತ್ರಕ್ಕೆ ನೇರ ತೆರಿಗೆ ಸಂಹಿತೆ ಅನ್ವಯಿಸದಂತೆ ಸರಕಾರ ಕ್ರಮವಿಡಬೇಕು. ಸಹಕಾರ ಭಾರತಿಯಿಂದ ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಉತ್ತಮ ಕಾರ್ಯನಡೆಯುತ್ತಿದೆ. ಇದಕ್ಕೆ ಕರ್ನಾಟಕದ ಸಹಕಾರಿಗಳ ಪೂರ್ಣಬೆಂಬಲವಿದೆ.

Sahakar Bharati 4th National Conference
Co operative for Resurgent India
Bangalore Declaration

1. Full Recognition in public policy of the relevance of cooperative model in the context of Indian economy
2. Promotion of Cooperative model as an economic enterprise
3. Developing new Financial instruments as Risk Capital to meet the needs of Cooperative enterprises and stake holders while ensuring member control
4. Formulating and institutionalizing accounting standards that recognize the unique attributes of cooperatives
5. Active advocacy of Cooperative Ideals and the potential of Co-operative model.
6. Providing Co operative education in academic institutions and in entrepreneurship Training for capacity building and improving governance of Cooperatives.
7. Ensure development of supportive Legal and Financial environment for growth of cooperatives.

Edited, Printed and Published by Sharan Gouda G. Patil –Managing Director, on behalf of Karnataka State Souharada Federal Co operative, Nirman Bhavan complex, Dr. Rajkumar Road, 1st Block, Rajajinagar, Bangalore-560 010